ಕಲ್ಯಾಣ ಕಿರಣ

ಏಪ್ರಿಲ್-ಮೇ-2008

ಬೆಲೆ- 10.00



ಊಟಿ (ಸಕ್ಕಲಟ್ಟಿ) ಬಸವ ಮಂಟಪದಲ್ಲಿ ಪ್ರತಿಷ್ಠಾಪನೆಗೊಂಡ
ಗುರು ಬಸವಣ್ಣನವರ ಅಮೃತಶಿಲಾ ಮೂರ್ತಿ



ಹುತಾತ್ಮ ಚೇತನ ಶರಣ. ಹರಳಯ್ಯ ಮತ್ತು ಶರಣೆ ಕಲ್ಯಾಣಮ್ಮನವರ ಮದೂಗಳಿನಿಂದ ಮಾಡಿದ ಚಮ್ಮಾವುಗೆ.









ಪೀಠಾರೋಹಣ ಸಂದೇಶ ನೀಡುತ್ತಿರುವ [illegible] ಕುಮಾರ ಸ್ವಾಮಿಗಳು

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-38 ಬಸವ ಶಕೆ-875 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-5-೬ ಏಪ್ರಿಲ್-ಮೇ-2008 ವಾರ್ಷಿಕ ಚಂದಾ 100/- ರೂ.

ಬಸವಾಷ್ಟಕ

ನತಜನ ರಕ್ಷಕ ಶ್ರೀಗುರು ಬಸವ
ಲಿಂಗಾಯತ ಸಂಸ್ಥಾಪಕ ಶ್ರೀ ಗುರು ಬಸವ
ಇಷ್ಟಪ್ರದಾಯಕ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 1 ॥

ವಚನ ಶಾಸ್ತ್ರ ಸಾರ್ವಭೌಮ ಶ್ರೀ ಗುರು ಬಸವ
ನವ ಪಥ ನಿರ್ಮಾಪಕ ಶ್ರೀಗುರು ಬಸವ
ಸಮತಾವಾದಿ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 2 ॥

ಇಷ್ಟಲಿಂಗದಾತ ಶ್ರೀ ಗುರು ಬಸವ
ಇಷ್ಟಲಿಂಗಧಾರಕ ಶ್ರೀ ಗುರು ಬಸವ
ಇಷ್ಟಲಿಂಗ ಪೂಜಕ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 3 ॥

ವಾಕ್ಸಿದ್ಧಿ ಪುರುಷ ಶ್ರೀ ಗುರು ಬಸವ
ಪಂಚ ಪುರುಷ ಶ್ರೀ ಗುರು ಬಸವ
ಜೀವನ್ಮುಕ್ತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 4 ॥

ಪತಿತೋದ್ಧಾರಕ ಶ್ರೀ ಗುರು ಬಸವ
ದಲಿತೋದ್ಧಾರಕ ಶ್ರೀ ಗುರು ಬಸವ
ಪಾವನಚರಿತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 5 ॥

ಮಂತ್ರ ಪುರುಷ ಶ್ರೀ ಗುರು ಬಸವ
ಕ್ರಾಂತಿಯೋಗಿ ಶ್ರೀ ಗುರು ಬಸವ
ಶಾಂತಿದೂತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 6 ॥

ಶರಣ ಪ್ರೇಮಿ ಶ್ರೀ ಗುರು ಬಸವ
ಶರಣ ಪ್ರೀತ ಶ್ರೀ ಗುರು ಬಸವ
ಶರಣ ಪಥದಾತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 7 ॥

ಮುಕ್ತಿದಾಯಕ ಶ್ರೀ ಗುರು ಬಸವ
ಭಕ್ತೋದ್ಧಾರಕ ಶ್ರೀ ಗುರು ಬಸವ
ಬಸವಾತ್ಮಜೆ ಪಿತ ಶ್ರೀ ಗುರು ಬಸವ
ಶರಣೆಂಬೆ ನಾ ಓಂ ಗುರು ಬಸವ ॥ ಶರಣು ಶರಣಾರ್ಥಿ ॥ ॥ 8 ॥

ರಚನೆ- ಮಾತಾಜಿ

★ ಕಲ್ಯಾಣ ಕಿರಣ ★



KALYANA KIRANA-Reg No.19988/70. Monthly Magazine Edited And Published by Pujya Mate Kasturidevi on behalf of Vishwakalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10,

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23131476

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿನಗರ, ಬೆಂಗಳೂರು-560010

ಹಿಂದುಗಳಿಗೆ ವೈಷ್ಣವ ದೀಕ್ಷೆ
ಪೇಜಾವರ ಶ್ರೀಗಳ ನಿರ್ಧಾರ ಅಭಿನಂದನೀಯ
ಲಿಂಗದೀಕ್ಷೆ ಮತಾಂತರವಲ್ಲ – ಜಗದ್ಗುರು ಮಾತೆ ಮಹಾದೇವಿ

(ಕನ್ನಡ ಪ್ರಭಾದಲ್ಲಿ ಬಂದ ಪೂಜ್ಯ ಪೇಜಾವರ ಶ್ರೀಗಳ ಹೇಳಿಕೆಗೆ ಪ್ರತಿಕ್ರಿಯೆ)

ಪೂಜ್ಯ ಪೇಜಾವರ ಮಠಾಧೀಶರು ಸಮಸ್ತ ಹಿಂದುಗಳಿಗೆ ವೈಷ್ಣವ ದೀಕ್ಷೆ ಕೊಡುವ ನಿರ್ಧಾರ (ಕ.ಪ್ರ.ಮಾರ್ಚ್ 16) ತೆಗೆದುಕೊಂಡುದು ತೀರಾ ತಡವಾದುದಾದರೂ ಅಭಿನಂದನೀಯ ನಿರ್ಧಾರ. ಉಡುಪಿಯಲ್ಲಿ 1969ರಲ್ಲಿ ವಿಶ್ವ ಹಿಂದು ಪರಿಷತ್ ಏರ್ಪಡಿಸಿದ್ದ ಬೃಹತ್ ಹಿಂದು ಸಮಾವೇಶದಲ್ಲಿ ದಿ|| ವಿಜಯರಾಜೇ ಸಿಂಧೆ, ಜಯದೇವಿ ತಾಯಿ ಲಿಗಾಡೆ ಮಾತ್ರವಲ್ಲದೆ ಪೂಜ್ಯ ಪೇಜಾವರ ಶ್ರೀಗಳು ಆದಿಯಾಗಿ ಅನೇಕ ಮಠಾಧೀಶರು ಭಾಗವಹಿಸಿದ್ದರು. ಅಂದು ನಾನು ಕಳಕಳಿಯಿಂದ ಸಭೆಯಲ್ಲಿ ಮಠಾಧೀಶರನ್ನು ವಿನಂತಿಸಿದ್ದೆ : "ಪ್ರತಿಯೊಬ್ಬ ಹಿಂದುವಿಗೆ ಅವನು ಯಾವುದೇ ಜಾತಿಯವನಿರಲಿ ಒಂದು ಮಂತ್ರ ದೀಕ್ಷೆ ಕೊಡುವ ವ್ಯವಸ್ಥೆ ಮಾಡಿರಿ. ಧರ್ಮಕ್ಕೂ ಅನುಯಾಯಿಗೂ ಮಧ್ಯೆ ಸಂಬಂಧ ಕಲ್ಪಿಸುವುದೇ ದೀಕ್ಷೆ. 'ನನ್ನ ಧರ್ಮ ನನಗೆ ಯಾವುದೇ ದೀಕ್ಷೆಯನ್ನು ಕೊಡುತ್ತಿಲ್ಲ;' ಎಂದು ಖಿನ್ನನಾಗುವ ಹಿಂದು ಸ್ವಧರ್ಮದ ಬಗ್ಗೆ ಅಭಿಮಾನವನ್ನು ಬೆಳೆಸಿಕೊಳ್ಳುವುದಿಲ್ಲ. ಶೂದ್ರತ್ವ ಮತ್ತು ಅಸ್ಪೃಶ್ಯತೆಯಿಂದ ನೊಂದ ಮನಸ್ಸುಗಳು ಮತಾಂತರಕ್ಕೆ ಬಯಸುವುದು ಸ್ವಾಭಾವಿಕ" ಎಂದು ನಾನು ಹೇಳಿದಾಗ ಸಭೆಯಲ್ಲಿ ಅದ್ಭುತ ಕರತಾಡನ ಕೇಳಿ ಬಂದಿತು. ಇಲ್ಲಿಗೆ 40 ವರ್ಷಗಳು ಸರಿದು ಹೋದವು. ಭಾರತದ ನದಿಗಳಲ್ಲಿ ಸಾಕಷ್ಟು ನೀರು ಹರಿದು ಹೋಗಿದೆ. ಈಗ ಪೇಜಾವರ ಶ್ರೀಗಳು ಸಮಸ್ತ ಹಿಂದುಗಳಿಗೆ ವೈಷ್ಣವ ದೀಕ್ಷೆ ಕೊಡಲು ಅಂತೂ ಮನಸ್ಸು ಮಾಡಿದ್ದಾರೆ. ಇದಕ್ಕಾಗಿ ಅವರನ್ನು ಅಭಿನಂದಿಸಲೇ ಬೇಕು. ವ್ಯಕ್ತಿಯು ಗುರು ಮುಟ್ಟಿ ಗುರುವಾಗುವನು, ಜ್ಯೋತಿಯ ಸ್ಪರ್ಶದಿಂದ ಇನ್ನೊಂದು ದೀಪವು ಹೊತ್ತಿಕೊಳ್ಳುವಂತೆ. ಪೇಜಾವರ ಶ್ರೀಗಳು ವೈಷ್ಣವ ದೀಕ್ಷೆ ಎಂದು ಕೇವಲ ಒಂದು ಮಂತ್ರವನ್ನು ಉಪದೇಶಿಸುವರೋ ಅಥವಾ ವೈದಿಕ - ಹಿಂದು ಧರ್ಮದ ಪ್ರಮುಖ ಲಾಂಛನವಾದ ಜನಿವಾರವನ್ನು ನೀಡಿ ಗಾಯತ್ರಿ ಮಂತ್ರೋಪದೇಶ ಮಾಡುವರೋ ಎಂಬುದನ್ನು ಸ್ಪಷ್ಟೀಕರಿಸಬೇಕು. ಏಕೆಂದರೆ ವರ್ಣಾಶ್ರಮ ವ್ಯವಸ್ಥೆ ಆಧಾರಿತ ಹಿಂದು ಧರ್ಮದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಮಾತ್ರ ದ್ವಿಜ ಸಂಸ್ಕಾರವಿದ್ದು ಶೂದ್ರ, ಅಸ್ಪೃಶ್ಯರು ಮಾತ್ರವೇಕೆ ಹಿಂದು ಸಮಾಜದ ಮಹಿಳಾ ವರ್ಗಕ್ಕೆ ಇಲ್ಲ. ಆದ್ದರಿಂದ ಪೂರ್ಣ ಪ್ರಮಾಣದ ದ್ವಿಜ ದೀಕ್ಷೆಯನ್ನು ಕೊಟ್ಟರೆ ಮಾತ್ರ ಪೇಜಾವರ ಶ್ರೀಗಳ ಶ್ರಮ ಸಾರ್ಥಕಗೊಳ್ಳುವುದು.

ಲಿಂಗದೀಕ್ಷೆ ಮತಾಂತರವೆ ?

"ರಾಜ್ಯದಲ್ಲಿ ಇತರ ಜನಾಂಗದವರಿಗೆ ಲಿಂಗದೀಕ್ಷೆ ಕೊಟ್ಟು ಮತಾಂತರ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಮಾಧ್ವ ತತ್ವ ಹಾಗೂ ಹಿಂದು ಸಿದ್ಧಾಂತವನ್ನು ಅವರಿಗೆ ತಿಳಿಸಿಕೊಡಲು ಆಸಕ್ತ ಬ್ರಾಹ್ಮಣೇತರರಿಗೆ ವೈಷ್ಣವ ದೀಕ್ಷೆ ಕೊಡಿಸಲು ಪ್ರತ್ಯೇಕ ಮಠವನ್ನು ಸ್ಥಾಪಿಸಲಾಗುವುದು." ಎಂದು ಶ್ರೀಗಳು ಹೇಳಿದ್ದಾರೆ. ಪೇಜಾವರ ಶ್ರೀಗಳು ಲಿಂಗದೀಕ್ಷೆ ಪಡೆಯುವುದು ಮತಾಂತರ ಎಂದು ಭಾವಿಸಿರುವುದು ತೀವ್ರ ಖಂಡನಾರ್ಹ. "ಲಿಂಗಾಯತರು ಹಿಂದುಗಳಲ್ಲ; ಲಿಂಗದೀಕ್ಷೆ ಪಡೆಯುವುದೆಂದರೆ ಹಿಂದುತ್ವದಿಂದ ಹೊರಹೋದಂತೆ." ಎಂಬ ಭಾವನೆಯನ್ನು ಶ್ರೀಗಳು ವ್ಯಕ್ತಪಡಿಸಿರುವುದು ಲಿಂಗಾಯತ ಧರ್ಮ ಸ್ವತಂತ್ರ ಧರ್ಮವೆಂಬ ಮಾನ್ಯತೆಗಾಗಿ ನಾವು ನಡೆಸಿರುವ ಹೋರಾಟಕ್ಕೆ ಪುಷ್ಟಿ ಕೊಡುವುದಾದರೂ ಈ ಮಾತು ಆಕ್ಷೇಪಾರ್ಹ. ಏಕೆಂದರೆ ಭಾರತೀಯ ಜನ್ಯ ಧರ್ಮಗಳಾದ ಹಿಂದು, ಜೈನ, ಬೌದ್ಧ ಲಿಂಗಾಯತ, ಸಿಖ್ ಇವು ಯಾವುದೊಂದರ ದೀಕ್ಷೆ ಪಡೆದರೂ ಅದು ಮತಾಂತರವಲ್ಲ. ಈ ಯಾವ ಧರ್ಮಗಳೂ ಹಿಂದು ಸಂಸ್ಕೃತಿಯ ವಿರೋಧಿಗಳಲ್ಲ ಮತ್ತು ಭಾರತ ವಿರೋಧಿ ಧರ್ಮಗಳಲ್ಲ. ಏಕೆಂದರೆ ಈ ಐದು ಧರ್ಮಗಳ ಜನರಿಗೆ ಭಾರತವು ಧರ್ಮಭೂಮಿ. ವರ್ಣಾಶ್ರಮ ವ್ಯವಸ್ಥೆ, ಜಾತಿ ಪದ್ಧತಿ, ಅಸ್ಪೃಶ್ಯತೆಯ ಆಚರಣೆಯಿಂದ ರಾಷ್ಟ್ರವು ಶಿಥಿಲಗೊಳ್ಳಬಹುದೆಂದು ಎಂಟೂವರೆ ನೂರು ವರ್ಷಗಳ ಹಿಂದೆಯೇ ಮುಂದಾಲೋಚನೆ ಮಾಡಿದ ಕ್ರಾಂತಿ ಪುರುಷ ಬಸವಣ್ಣನವರು ಜಾತಿ ಮತ ಪಂಥ ಲಿಂಗ ಭೇದವಿಲ್ಲದೆ ಇಷ್ಟಲಿಂಗ ದೀಕ್ಷೆಯನ್ನು ನೀಡಿದರು. ಇದರಿಂದಾಗಿ ಎಂಟು ನೂರು ವರ್ಷಗಳಲ್ಲಿ ವಿದೇಶಿ ಧರ್ಮಗಳಿಗೆ ಆಗುವ ಮತಾಂತರ ಎಷ್ಟೋ ಕಡಿಮೆಯಾಗಿದೆ ಎಂಬ ಸತ್ಯವನ್ನು ಪೇಜಾವರ ಶ್ರೀಗಳು

ಅರಿಯಬೇಕು. ಗೋದಲಿಯ ನಾಯಿ ತಾನೂ ಹುಲ್ಲು ತಿನ್ನುವುದಿಲ್ಲ, ತಿನ್ನುವ ಹಸುವಿಗೂ ಅವಕಾಶ ಕೊಡುವುದಿಲ್ಲ, ಎಂಬ ಮನೋಭಾವ ಕೈಬಿಟ್ಟು ಧರ್ಮಾಸ್ತಕರು ಭಾರತೀಯ ಸಂಸ್ಕೃತಿಯ ದೇಶೀಯ ಧರ್ಮಗಳ ದೀಕ್ಷೆ ಪಡೆಯುವುದನ್ನು ಪ್ರೋತ್ಸಾಹಿಸುವ ಸೌಜನ್ಯವಿಲ್ಲದಿದ್ದರಷ್ಟೆ. ಆಕ್ಷೇಪಿಸುವುದು ಉಚಿತವಲ್ಲ."

ವಾಸ್ತವ್ಯ - ಬೆಂಗಳೂರು
22-03-2008

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ,
ಕೂಡಲ ಸಂಗಮ

ಪೇಜಾವರ ಶ್ರೀಗಳ ಸಣ್ಣತನ

ಯಾವುದೋ ಒಂದು ಸನ್ನಿವೇಶದಲ್ಲಿ ವ್ಯಕ್ತಿಗಳ ನಿಜ ನಿಲುವು ಬಯಲಾಗುತ್ತದೆ. ಅಲ್ಲಿವರೆಗೆ ಜಗತ್ತು ಅವರನ್ನು ಬೇರೊಂದು ರೀತಿಯಲ್ಲಿ ತಿಳಿದುಕೊಂಡಿರುತ್ತದೆ. ಮಾಧ್ವ ಸಂಪ್ರದಾಯದ ಉಡುಪಿಯ ಅಷ್ಟಮಠಗಳಲ್ಲಿ ಎಲ್ಲರಿಗಿಂತೂ ಹೆಚ್ಚು ಪ್ರಗತಿಪರರು ಎಂದು ನಾವೆಲ್ಲರೂ ಭಾವಿಸಿದ್ದವರು ಪೇಜಾವರ ಶ್ರೀಗಳು. ಹರಿಜನರ ಕೇರಿಗೆ ಹೋಗಿ ಉಪನ್ಯಾಸ ಮಾಡಿ, ದರ್ಶನ ನೀಡುತ್ತಲಿದ್ದ ಶ್ರೀಗಳವರನ್ನು ಸುಧಾರಣಾವಾದಿಗಳೆಂದು, ಹಿಂದು ಸಮಾಜದ ಹಿತಚಿಂತಕರೆಂದು ಭಾವಿಸಿದ್ದೆವು. ಹರಿಜನ ಕೇರಿಗೆ ಹೋಗಿ ಬಂದ ಮೇಲೆ ಪಂಚಗವ್ಯದಿಂದ ಶುದ್ಧಿ ಮಾಡಿಕೊಂಡು ನಂತರ ಸ್ನಾನ ಮಾಡಿಕೊಂಡು ಮಠವನ್ನು ಪ್ರವೇಶಿಸುತ್ತಾರೆ ಎಂದು ಪತ್ರಿಕೆಗಳು ಬರೆಯುತ್ತಲಿದ್ದವು. ಆದರೂ ದಲಿತರ ಬಗ್ಗೆ ತುಟಿಯ ಮರುಕವನ್ನಾದರೂ ತೋರಿಸುತ್ತಾರೆಂದು ಸಮಾಧಾನ ತಾಳುತ್ತಿದ್ದೆವು.

ಇಂತಹ ಪ್ರಗತಿಪರರು, ಅಷ್ಟಮಠಗಳಲ್ಲಿ ಒಂದಾದ ಪುತ್ತಿಗೆ ಮಠದ ಪೂಜ್ಯ ಶ್ರೀ ಸುಗುಣೇಂದ್ರ ತೀರ್ಥರು ವಿದೇಶ ಪ್ರವಾಸ ಮಾಡಿ ಬಂದು, ಪರ್ಯಾಯ ಪೀಠಾರೋಹಣ ಮಾಡುವಾಗ ಅವರು ಸಮುದ್ರೋಲ್ಲಂಘನೆ ಮಾಡಿರುವುದರಿಂದ ಕೃಷ್ಣ ವಿಗ್ರಹವನ್ನು ಮುಟ್ಟಿ ಪೂಜಿಸಬಾರದೆಂದು ವಿರೋಧವನ್ನು ವ್ಯಕ್ತಪಡಿಸಿದಾಗ, ಪೇಜಾವರ ಶ್ರೀಗಳ ವೈಚಾರಿಕತೆ ಕಂಡು ಪ್ರಜ್ಞಾವಂತರು ಬೆಚ್ಚಿಬಿದ್ದರು. ಈಗ ಮತ್ತೊಮ್ಮೆ ಶ್ರೀಗಳು ಲಿಂಗಾಯತರು ಮತಾಂತರಿಗಳು ಎಂಬ ದಾರ್ಷ್ಟ್ಯದ, ಅಧಿಕ ಪ್ರಸಂಗಿತನದ ಮಾತುಗಳನ್ನು ಆಡಿದ್ದಾರೆ.

12ನೆಯ ಶತಮಾನದಲ್ಲಿ ಪ್ರಗತಿಪರ ಲಿಂಗಾಯತ ಧರ್ಮವನ್ನು ಸ್ಥಾಪಿಸಿದ ವಿಶ್ವಗುರು ಬಸವಣ್ಣನವರು ಹುಟ್ಟಿದ್ದು ಬ್ರಾಹ್ಮಣ ಕುಲದಲ್ಲೇ. ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯರು ಬ್ರಹ್ಮಸೂತ್ರಗಳಿಗೆ ವ್ಯಾಖ್ಯೆಯನ್ನು ಬರೆಯುವ ಮೂಲಕ ವೇದಾದಿಗಳನ್ನು ಸಮರ್ಥಿಸಿಕೊಂಡರು. ಒಳಗೆ ಹೆಗ್ಗಣವನ್ನಿಟ್ಟು ಮೇಲೆ ನೆಲೆಗಟ್ಟು ಕಟ್ಟಿದಂತೆ ಮಾಡಿದರೆ ಏನೂ ಪ್ರಯೋಜನ-ವಾಗದು, ಪರಿಣಾಮವೂ ಆಗದು, ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವುದು ಅತ್ಯಗತ್ಯ ಎಂದು ಕ್ರಾಂತಿಪುರುಷ ಬಸವಣ್ಣನವರು ಆಲೋಚಿಸಿದರು. ಬೇವಿನ ಬೀಜವನ್ನು ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಆಕಳ ಹಾಲನೆರೆದು ಜೇನು ತುಪ್ಪವ ಹಾಕಿದಡೆ ಪುನಃ ಕಹಿ ಫಲವೇ ಬರುವಂತೆ ವರ್ಣಾಶ್ರಮ ವ್ಯವಸ್ಥೆಯ ಬೀಜವನ್ನು ಬಿತ್ತಿ ಯಾವ ವ್ಯಾಖ್ಯಾನ ಬರೆದರೂ ಸರಿಯಾಗದೆಂದು ಭಾವಿಸಿ ವೈದಿಕ ಕಕ್ಷೆಯಿಂದ ಹೊರಗೆ ಬಂದರು. ವೈದಿಕ ಧರ್ಮವು ಪ್ರತಿಪಾದಿಸಿದ ಎಲ್ಲ ಸಾಮಾಜಿಕ, ಧಾರ್ಮಿಕ ಕೆಡಕುಗಳಿಗೆ ಪರಿಹಾರವನ್ನು ಹುಡುಕಲು ಲಿಂಗಾಯತ ಧರ್ಮವನ್ನು ಸ್ಥಾಪಿಸಿದರು.

ಪೇಜಾವರ ಶ್ರೀಗಳು ಈ ಐತಿಹಾಸಿಕ ಅನಿವಾರ್ಯತೆಯನ್ನು ಅರಿಯದೆ ಕೂಪ ಮಂಡೂಕದಂತೆ ವರ್ತಿಸಿದರೆ ಏನೂ ಪ್ರಯೋಜನವಾಗದು. ಚತುರ್ವರ್ಣ ವ್ಯವಸ್ಥೆ ಅದರೊಳಗಣ ಉದ್ಯೋಗಾಧಾರಿತ ಜಾತಿ ವ್ಯವಸ್ಥೆ, ಇದರ ವಿಷ ಫಲವಾದ ಅಸ್ಪೃಶ್ಯತೆಯ ಆಚರಣೆ ಭಾರತ ದೇಶದ ಮಹಾನ್ ಶತ್ರುಗಳು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗಷ್ಟೇ ದ್ವಿಜ ಸಂಸ್ಕಾರ. ಶೂದ್ರರು, ಸ್ತ್ರೀಯರು ಮತ್ತು ದಲಿತರು (ದ್ವಿಜ) ಸಂಸ್ಕಾರದಿಂದ ವಂಚಿತರಾಗಿದ್ದರು. ಇದನ್ನು ಕಂಡು ಎಲ್ಲ ಮಾನವರಿಗೆ ಧಾರ್ಮಿಕ-ಸಾಮಾಜಿಕ ಹಕ್ಕುಗಳನ್ನು ಒದಗಿಸಬೇಕೆಂದು ಮಾನವೀಯ ಹೃದಯದಿಂದ ಧರ್ಮಪಿತ ಬಸವಣ್ಣನವರು ಹೊಸ ಧರ್ಮ ಲಿಂಗಾಯತವನ್ನು ಸ್ಥಾಪಿಸಿ ಎಲ್ಲರಿಗೂ ದೀಕ್ಷೆ ನೀಡಿದರು. ವೈದಿಕ ಹಿಂದು ಧರ್ಮದಿಂದ ಹೊರಹೋಗಲು ಬಾಗಿಲಿದೆ; ಒಳಬರಲು ದೀಕ್ಷಾ ಸಂಸ್ಕಾರ ಎಂಬ ಬಾಗಿಲು ಇರದಿರುವ ಪರಿಸ್ಥಿತಿ ಗಮನಿಸಿ ಇಷ್ಟಲಿಂಗ ದೀಕ್ಷಾ ಸಂಸ್ಕಾರವನ್ನು ಆರಂಭಿಸಿ ಲಿಂಗಾಯತ ಧರ್ಮ ಮಂದಿರದ ಹೆಬ್ಬಾಗಿಲನ್ನು ತೆರೆದರು. ಆ ಕಾಲದಿಂದ ಇಂದಿನವರೆಗೂ ಲಿಂಗಾಯತ ಧರ್ಮವನ್ನು ಸ್ವೀಕರಿಸಿ

ಅಸಂಖ್ಯಾತರು ಲಿಂಗಾಯತ ಸಮಾಜವನ್ನು ಪ್ರವೇಶಿಸುವ ಪ್ರಕ್ರಿಯೆ ನಡೆಯುತ್ತಲೇ ಇದೆ. ಇದನ್ನು ಮತಾಂತರ ಎಂದು ಕರೆಯುವುದು ಪೇಜಾವರ ಶ್ರೀಗಳ ಸಣ್ಣತನವಲ್ಲವೆ?

ಮತಾಂತರ ಹೇಗೆ?

ಭಾರತ ದೇಶದಲ್ಲಿ ಸದ್ಯ 9 ಧರ್ಮಗಳ ಜನ ವಾಸಿಸುತ್ತಿದ್ದಾರೆ. ಹಿಂದು, ಬೌದ್ಧ, ಜೈನ, ಲಿಂಗಾಯತ, ಸಿಖ್ ಇವು ಇಲ್ಲಿಯೇ ಹುಟ್ಟಿರುವ ಧರ್ಮಗಳು ಕ್ರೈಸ್ತ, ಇಸ್ಲಾಂ, ಯಹೂದಿ, ಪಾರಸಿ ಧರ್ಮಗಳು ಹೊರಗಿನಿಂದ ಬಂದಿರುವ ಧರ್ಮಗಳು; ಯಹೂದಿ ಮತ್ತು ಪಾರಸಿ ಧರ್ಮಗಳು ಹುಟ್ಟಿನಿಂದ ಮಾತ್ರ ಬರುತ್ತವೆ. ಅವುಗಳಲ್ಲಿ ದೀಕ್ಷೆಯ ಮೂಲಕ ಹೊರಗಿನಿಂದ ಜನರನ್ನು ಸ್ವೀಕರಿಸುವ ಪದ್ಧತಿ ಇಲ್ಲ. ಈಗ ದೈತ್ಯ ಶಕ್ತಿಗಳಾಗಿ ತಮ್ಮ ಕಬಂಧ ಬಾಹುವನ್ನು ವಿಶಾಲವಾಗಿ ಚಾಚುತ್ತ ಮತಾಂತರ ಮಾಡುತ್ತಲಿರುವವೆಂದರೆ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು. ಜಾತೀಯತೆ ಮತ್ತು ಅಸ್ಪೃಶ್ಯತೆಗಳು ಭಾರತ ದೇಶದಲ್ಲಿ ಈ ಎರಡು ವಿದೇಶಿ ಧರ್ಮಗಳು ಬೆಳೆಯಲು ಹುಲುಸಾದ ಅವಕಾಶವನ್ನು ಒದಗಿಸಿವೆ. ಜೊತೆಗೆ ಕ್ರೈಸ್ತ ಧರ್ಮದ ಬೆಳೆಯುವಿಕೆಗೆ ಬಡತನವೂ ಮುಖ್ಯ ಕಾರಣವಾಗಿದೆ. ಮನುಷ್ಯನಿಗೆ ಎಲ್ಲಕ್ಕಿಂತ ಮಿಗಿಲು ಹೊಟ್ಟೆ. ಕ್ರೈಸ್ತ ಮಿಶನರಿಗಳು ವಿದೇಶದಿಂದ ಬರುವ ಧನ ಸಹಾಯವನ್ನು ಬಳಕೆ ಮಾಡಿಕೊಂಡು ಬಡ ಜನರನ್ನು ಆಕರ್ಷಿಸುತ್ತಾರೆ. ಔಷಧೀಯ ಚಿಕಿತ್ಸೆಯ ಮೂಲಕ, ಅನಾಥಾಲಯಗಳ ಮೂಲಕ ಮೌನವಾಗಿ ಮತಾಂತರ ನಡೆಸುತ್ತಾರೆ. ಭಾರತೀಯ ಧರ್ಮ-ಸಂಸ್ಕೃತಿಗಳಿಗೆ ಇಸ್ಲಾಂ ಹೃದಯಾಘಾತದಂತೆ, ಕ್ರೈಸ್ತ ಧರ್ಮ ಕ್ಷಯ ರೋಗದಂತೆ. ಆ ಧರ್ಮಗಳಿಗೆ ಹೋದವರು ಸಾಂಸ್ಕೃತಿಕ ಕೊಂಡಿಯನ್ನೇ ಕಳಚಿಕೊಳ್ಳುತ್ತಾರೆ. ಹೆಸರನ್ನಿಡುವುದರಲ್ಲಿ, ಇತರರೊಡನೆ ಬೆರೆಯುವುದರಲ್ಲಿ ಪ್ರತ್ಯೇಕಗೊಳ್ಳುತ್ತಾರೆ.

ಭಾರತೀಯ ಜನ್ಯ ಧರ್ಮಗಳಾದ ಜೈನ್ - ಬೌದ್ಧ, ಲಿಂಗಾಯತ- ಸಿಖ್ ಧರ್ಮಗಳ ದೀಕ್ಷೆ ಪಡೆದವರು ಸಾಂಸ್ಕೃತಿಕವಾಗಿ ಬೇರೆಯಾಗುವುದಿಲ್ಲ. ಹೆಸರುಗಳನ್ನು ಇಡುವುದರಲ್ಲಿ, ಮಾಂಗಲ್ಯ, ಕೈಕಡಗ, ಕುಂಕುಮ, ಕಾಲುಂಗುರ, ಬಳೆ, ಮೂಗುತಿ ಇತ್ಯಾದಿ ಧರಿಸುವುದರಲ್ಲಿ ಸಾಂಸ್ಕೃತಿಕ ಸಾಮ್ಯವಿದೆ. ಹಿಂದು, ಜೈನ್, ಬೌದ್ಧ, ಲಿಂಗಾಯತ ಸಿಖ್ ಧರ್ಮಗಳಿಗೆ ಭಾರತವು ಧರ್ಮಭೂಮಿ. ಏಕೆಂದರೆ ಈ ಧರ್ಮಗಳ ಉಗಮ ಸ್ಥಾನ ಭಾರತ. ಹೀಗಾಗಿಯೇ ಜಪಾನ್ ದೇಶ ತನ್ನ ಧರ್ಮಕ್ಷೇತ್ರವಾದ ಬುದ್ಧ ಗಯೆಯ ಅಭಿವೃದ್ಧಿಯ ಸಂಕಲ್ಪ ಕೈಗೊಂಡಿದೆ. ಜಗತ್ತಿನ ಯಾವುದೇ ಮೂಲೆಯಲ್ಲಿರಲಿ ತನ್ನ ಜೀವಮಾನದಲ್ಲಿ ಒಮ್ಮೆಯಾದರೂ ಪ್ರತಿಯೊಬ್ಬ ಹಿಂದುವೂ ಕಾಶಿಯನ್ನು ನೋಡಬೇಕು ಎಂದುಕೊಂಡರೆ, ಪ್ರತಿ ಸಿಖ್ಖರೂ ಅಮೃತ ಸರಕ್ಕೆ ಬರಬೇಕು ಎಂದುಕೊಳ್ಳುತ್ತಾನೆ, ಬೌದ್ಧನು ಬುದ್ಧಗಯೆಯನ್ನು ಸಂದರ್ಶಿಸಿದರೆ ಲಿಂಗಾಯತನು ಕೂಡಲ ಸಂಗಮ - ಬಸವ ಕಲ್ಯಾಣಗಳನ್ನು ಸಂದರ್ಶಿಸುತ್ತಾನೆ. ಭಾರತವು ಈ ಎಲ್ಲ ಧರ್ಮಗಳಿಗೆ ಧರ್ಮಭೂಮಿಯಾದ್ದರಿಂದ ಇದರ ಅನುಯಾಯಿಗಳು ಭಾರತ ವಿರೋಧಿ ಚಿಂತನೆಯನ್ನು ಮಾಡುವುದಿಲ್ಲ. ಆದ್ದರಿಂದ ಪೇಜಾವರ ಶ್ರೀಗಳು ಭಾರತ ಜನ್ಯ ಧರ್ಮಗಳ ದೀಕ್ಷೆ ಪಡೆಯುವುದನ್ನು ಮತಾಂತರ ಎಂದು ಕರೆಯುವ ಸಣ್ಣತನವನ್ನು ಪ್ರದರ್ಶಿಸಬಾರದು. ಹಿಂದು ಧರ್ಮದಲ್ಲಿರುವ ಶೂದ್ರ, ದಲಿತರು, ಬುಡಕಟ್ಟುಗಳ ಜನ, ಮಹಿಳೆಯರು - ಇವರೆಲ್ಲರಿಗೆ ಧರ್ಮದ ಆಶ್ರಯ ಇಲ್ಲದಿರುವುದರಿಂದ ಪೂಜೆ - ಧ್ಯಾನ ಮಾಡಿ ತಮ್ಮ ಬದುಕನ್ನು ಸಾರ್ಥಕ ಪಡಿಸಿಕೊಳ್ಳಲು ದೀಕ್ಷಾವಂತರಾಗುತ್ತಾರೆ. ಇದನ್ನು ಮತಾಂತರ ಎನ್ನಕೂಡದು; ಧರ್ಮ ಸ್ವೀಕಾರ ಎನ್ನಬೇಕು.

ಹಿಂದುಮೊಳಗಣ ದೋಷ

ವಿದೇಶಗಳಿಂದ ಬಂದ ಮುಸ್ಲಿಂ ದಾಳಿಕಾರರು, ಬ್ರಿಟಿಷ್ ವ್ಯಾಪಾರಿಗಳು ಕೆಲವೇ ಕೆಲವರು. ಅವರು ಹಿಂದು ಧರ್ಮದ ದೌರ್ಬಲ್ಯವನ್ನು ಚೆನ್ನಾಗಿ ಉಪಯೋಗಿಸಿಕೊಂಡು ಸಂಖ್ಯೆ ಬೆಳೆಸಿದರು.

1. ಆಳುವ ಕಾಲದಲ್ಲಿ ತಮ್ಮ ಧರ್ಮಗಳ ವಿಸ್ತರಣೆ ಮಾಡಿದರು. ಅಧಿಕಾರದ ಆಮಿಷ ತೋರಿಸಿ ಮೇಲ್ಜಾತಿಯವರನ್ನು ಮತಾಂತರಿಸಿದರು.

2. ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆಗಳ ತುಳಿತಕ್ಕೊಳಗಾದವರು ಸುಲಭವಾಗಿ ಮತಾಂತರಗೊಂಡರು; ತಮ್ಮನ್ನೂ ಈವರೆಗೂ ಶೋಷಿಸಿದ್ದ ಹಿಂದು ಧರ್ಮದ ಬಗ್ಗೆ ಆಕ್ರೋಶ ಬೆಳೆಸಿಕೊಂಡರು.

ನಾನಾ ಕಾರಣಗಳಿಂದ ಹೊರಹೋದವರು ಪುನಃ ಹಿಂದು ಕಕ್ಷೆಯೊಳಕ್ಕೆ ಬರುತ್ತೇವೆ ಎಂದರೂ ದೀಕ್ಷಾ ಸಂಸ್ಕಾರದ ಬಾಗಿಲು ತೆಗೆಯದ ಮಡಿವಂತಿಕೆ, ಕಠೋರತೆ ಮತ್ತು ಸಂಪ್ರದಾಯ ಜಡತೆ ಹಿಂದು ಪಂಡಿತರದು. ಹೀಗೆ ಹಿಂದು ಸಮಾಜಕ್ಕೆ ಹೊರಹೋಗಲು ಬಾಗಿಲಿದೆ, ಒಳಬರಲು ಬಾಗಿಲಿಲ್ಲ. ಉತ್ತರದಲ್ಲಿ ಶ್ರೀ ದಯಾನಂದ ಸರಸ್ವತಿಯವರು ಆರ್ಯ ಸಮಾಜವನ್ನು ಸ್ಥಾಪಿಸುವ ಮೂಲಕ

ದ್ವಿಜ ಸಂಸ್ಕಾರದ ಬಾಗಿಲನ್ನು ತೆರೆದರಾದರೂ ಆ ಸುಧಾರಣೆ ವ್ಯಾಪಕವಾಗಿ ಆಚರಣೆಗೆ ಬರಲೇ ಇಲ್ಲ. ಈಗೀಗ ವಿಶ್ವ ಹಿಂದು ಪರಿಷತ್‌ನವರು ಶುದ್ಧೀಕರಣ ಕಾರ್ಯ ಮಾಡುತ್ತಾರಾದರೂ ಇಸ್ಲಾಂ, ಕ್ರೈಸ್ತ ಧರ್ಮಗಳು ಬೆಳೆಯುತ್ತಿರುವ ವೇಗಕ್ಕೆ ಹೋಲಿಸಿದರೆ ವಿಶ್ವ ಹಿಂದು ಪರಿಷತ್ ಅವರ ಕಾರ್ಯ ರಾವಣಾಸುರ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತಿದೆ. ಆ ಧರ್ಮಗಳು ಸಿಂಹದ ಗವಿಯಂತೆ, ಒಳಗೆ ಹೋದ ಪ್ರಾಣಿಗಳು ಹೊರಬರುವುದೇ ಅಸಾಧ್ಯ!

ಹೀಗಿರುವಾಗ ತಾವು ಮಾಡಲಾಗದ ಸಾಂಸ್ಕೃತಿಕ ರಕ್ಷಣೆಯನ್ನು ಪಂಚ ಧರ್ಮಗಳಲ್ಲಿ ಯಾವುವಾದರೂ ಮಾಡಲಿ ಎಂಬ ಮನೋಭಾವವನ್ನು ಪೇಜಾವರ ಶ್ರೀಗಳು ತಳೆಯುವುದು ಒಳ್ಳೆಯದು. ವರ್ಣ ಮತ್ತು ಜಾತಿ ವ್ಯವಸ್ಥೆಯಿಂದ ಛಿದ್ರಗೊಂಡಿರುವ ಭಾರತೀಯ ಸಮಾಜ ಮುಂದೊಂದು ದಿನ ವಿಪತ್ತಿಗೆ ಒಳಗಾಗಬಹುದೆಂಬ ದೂರಾಲೋಚನೆಯಿಂದಲೇ ಗುರು ಬಸವಣ್ಣನವರು ದೀಕ್ಷೆಯ ಮೂಲಕ ಜಾತಿಯ ಕಟ್ಟನ್ನು ಒಡೆದು ಅಖಂಡ ಶರಣ ಸಮಾಜವನ್ನು ರೂಪಿಸಲು ಯತ್ನಿಸಿದರು. ಮುಸ್ಲಿಂ ರಾಜರ ದೌರ್ಜನ್ಯದಿಂದ ಹಿಂದುಗಳನ್ನು ರಕ್ಷಿಸಲೆಂದೇ ಗುರು ನಾನಕರು ಹೊಸ ಧರ್ಮವನ್ನು ಕೊಟ್ಟಿದ್ದು ಮತ್ತು ಗುರು ತೇಜ್‌ಬಹಾದ್ದೂರ್ ಪ್ರಾಣಾರ್ಪಣೆ ಮಾಡಿದ್ದು, ಗುರು ಗೋವಿಂದ ಸಿಂಗ್ ಮತ್ತು ಅವರ ಮಕ್ಕಳ ಬಲಿದಾನವಾದುದು. ಹೀಗೆ ಹಿಂದು ಧರ್ಮದ ಆಂತರಿಕ ದೋಷ - ದೌರ್ಬಲ್ಯ ಪರಿಹರಿಸಲೆಂದೇ ಹುಟ್ಟಿದ ಧರ್ಮಗಳನ್ನು ಹಿಂದು ಧರ್ಮದಲ್ಲಿ ಸಂಸ್ಕಾರ ವಂಚಿತರಾದವರು ಸ್ವೀಕರಿಸಿ, ಧರ್ಮವಂತರಾದರೆ ಅವರನ್ನು ಮತಾಂತರಿಗಳೆಂದು, ದೀಕ್ಷೆ ಕೊಟ್ಟವರನ್ನು ಮತಾಂತರ ಮಾಡುತ್ತಾರೆಂದು ಪೇಜಾವರ ಶ್ರೀಗಳು ಹೇಳುವುದು ಬಾಲಿಶವಲ್ಲವೆ? ಗೋದಲಿಯ ನಾಯಿ ತಾನೂ ಹುಲ್ಲು ತಿನ್ನದು ತಿನ್ನುವ ದನಕ್ಕೂ ಬಿಡದು ಎಂಬಂತಿದೆ ಪೇಜಾವರ ಶ್ರೀಗಳ ಹೇಳಿಕೆ.

ಲಿಂಗಾಯತವು ಅಹಿಂದು ಆದರೆ ಹಿಂದು ವಿರೋಧಿ ಧರ್ಮವಲ್ಲ

ಕೆಲವು ದೃಷ್ಟಿಯಿಂದ ನೋಡಿದಾಗ ಲಿಂಗಾಯತವು ಸುಧಾರಣಾತ್ಮಕ ಧರ್ಮಗಳೊಡನೆ ಸಾಮ್ಯವನ್ನು ಹೊಂದಿದೆ. ಜಾತಿ ಪದ್ಧತಿ ನಿರಾಕರಣೆ, ಸಮಾನತೆ, ಏಕದೇವ ಉಪಾಸನೆ ಈ ದೃಷ್ಟಿಯಿಂದ ಕ್ರೈಸ್ತ, ಇಸ್ಲಾಂ, ಜೈನ್, ಸಿಖ್ ಧರ್ಮಗಳ ಚಿಂತನೆಯೊಡನೆ, ಅಹಿಂಸೆ - ಸಸ್ಯಾಹಾರ ದೃಷ್ಟಿಯಿಂದ ಜೈನ್ ಧರ್ಮದೊಡನೆ, ಅಧ್ಯಾತ್ಮಿಕತೆ ಯೋಗ. ದೃಷ್ಟಿಯಿಂದ ಹಿಂದು ಧರ್ಮದೊಡನೆ ಸಾಮ್ಯವನ್ನು ಹೊಂದಿದೆ. ಆದರೆ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ಹಿಂದು ಧರ್ಮದೊಡನೆ ಹೊಂದಿಕೊಳ್ಳುತ್ತದೆಯೇ ವಿನಾ ಇಸ್ಲಾಂ, ಕ್ರೈಸ್ತದೊಡನೆ ಅಲ್ಲ. ಅಂದಾಗ ಲಿಂಗಾಯತವು ಅಹಿಂದು ಧರ್ಮವಾಗಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದೇ ವಿನಾ ಸಾಮಾಜಿಕವಾಗಿ ಹಿಂದು ವಿರೋಧಿಯಲ್ಲ. ಅಂದಾಗ ಪೇಜಾವರ ಶ್ರೀಗಳು ಲಿಂಗದೀಕ್ಷೆ ನೀಡುವ ಕುರಿತು ಮತ್ಸರ, ಅಸಹನೆ ತಾಳಿರುವುದೇಕೆ?

"ರಾಜ್ಯದಲ್ಲಿ ಇತರ ಜನಾಂಗದವರಿಗೆ ಲಿಂಗದೀಕ್ಷೆ ಕೊಟ್ಟು ಮತಾಂತರ ಮಾಡುವ ಪ್ರಕ್ರಿಯೆ ನಡೆಯುತ್ತಿದೆ." ಎಂಬ ಪೇಜಾವರ ಶ್ರೀಗಳ ಹೇಳಿಕೆ ಆಘಾತಕಾರಿ. ಪ್ರತಿಯೊಬ್ಬ ಮಾನವನಿಗೆ ಅನ್ನ, ಅರಿವೆ, ಆಶ್ರಯದಷ್ಟೇ ಅತ್ಯಗತ್ಯವಾದುದು ಧಾರ್ಮಿಕ ಸಂಸ್ಕಾರ ಪ್ರತಿ ಧರ್ಮವು ತನ್ನ ಅನುಯಾಯಿಗೆ ಹುಟ್ಟುತ್ತಲೇ ಒಂದು ಸಂಸ್ಕಾರವನ್ನು ನೀಡುತ್ತದೆ. ವೈದಿಕ ಹಿಂದು ಧರ್ಮವು 3 ವರ್ಣದವರಿಗೆ ಮಾತ್ರ ನೀಡುತ್ತದೆ ಉಳಿದಂತೆ ಶೂದ್ರರು, ದಲಿತರಿಗೆ ಯಾವ ಸಂಸ್ಕಾರವನ್ನೂ ಕೊಡದು. ಅಂದಾಗ ಅವರು ಏಕೆ ಹಿಂದು ಎಂದು ಕರೆದುಕೊಳ್ಳಬೇಕು? ಲಿಂಗಾಯತ ಧರ್ಮವು ಸಂಸ್ಕಾರ ನೀಡಿ ಸಮಾನತೆ ಕೊಡುತ್ತಿದ್ದರೆ ಏಕೆ ಅದನ್ನು ಸ್ವೀಕರಿಸಬಾರದು? ಅದಕ್ಕೆ ಪೇಜಾವರ ಶ್ರೀಗಳೇಕೆ ಅಸಹನೆ ತೋರಬೇಕು?

ವೈಷ್ಣವ ದೀಕ್ಷೆ

ಕನ್ನಡ ಪ್ರಭಾದಲ್ಲಿ 2008, ಮಾರ್ಚ್ 16ರ ಸಂಚಿಕೆಯಲ್ಲಿ ಪೇಜಾವರ ಶ್ರೀಗಳ ಹೇಳಿಕೆ ಪ್ರಕಟವಾಗಿದೆ. ಮೈಸೂರಿನಲ್ಲಿ ನಡೆದ 26ನೇ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಪೂಜ್ಯ ಪೇಜಾವರ ಶ್ರೀಗಳು ಮಾಧ್ವ ತತ್ವ ಹಾಗೂ ಹಿಂದೂ ಸಿದ್ಧಾಂತವನ್ನು ಅವರಿಗೆ ತಿಳಿಸಿಕೊಡಲು ಆಸಕ್ತ ಬ್ರಾಹ್ಮಣೇತರರಿಗೆ ವೈಷ್ಣವ ದೀಕ್ಷೆ ಕೊಡಿಸಲು ಪ್ರತ್ಯೇಕ ಮಠವನ್ನು ಸ್ಥಾಪಿಸಲಾಗುವುದು. ಎಂದಿದ್ದಾರೆ.

ಈ ಸಲಹೆಯನ್ನು ನಾನು 1969ರಲ್ಲೇ ನೀಡಿದ್ದೆ. ಆಗಿನ್ನೂ ಹಿಂದು ಒಂದು ಧರ್ಮವಲ್ಲ ಹಲವು ಧರ್ಮಗಳ ಒಕ್ಕೂಟ. ಎಂದು ಹೇಳುತ್ತಿದ್ದೆವು. ಬೃಹತ್ ಹಿಂದು ಸಮಾವೇಶದಲ್ಲಿ ಹೇಳಿದ್ದೆ "ಪ್ರತಿಯೊಬ್ಬ ಹಿಂದುವಿಗೂ ಶಿವ ಮಂತ್ರವೇ ಇರಲಿ ವಿಷ್ಣು ಮಂತ್ರವೆ ಇರಲಿ. ಒಂದು ಮಂತ್ರೋಪದೇಶ ಮಾಡಿರಿ. ಅಂದರೆ ಅವನಿಗೆ ಹಿಂದು ಅಭಿಮಾನ ಉಳಿಯುತ್ತದೆ. ಇಲ್ಲದಿದ್ದರೆ ಆತ ಹಿಂದು ಧರ್ಮ ನನಗೆ

ಏನು ಕೊಟ್ಟಿದೆ? ಎಂದು ಆಲೋಚಿಸುತ್ತಾನೆ. ಎಂದು ಹೇಳಿದೆ. ನನ್ನ ಸಲಹೆಗೆ ಅದ್ಭುತ ಪ್ರತಿಕ್ರಿಯೆ ಜನರಿಂದ ಬಂದಿತು. ಅಂತೂ 40 ವರ್ಷಗಳ ಬಳಿಕವಾದರೂ ಪೇಜಾವರ ಶ್ರೀಗಳಿಗೆ ಈ ಕಲ್ಪನೆ ಮೂಡಿದ್ದು ಅಭಿನಂದನೀಯ. ಆದರೆ ಅದು ವೈಷ್ಣವ ದೀಕ್ಷೆ ಯಾಕಾಗಬೇಕು? ಹಿಂದು ದೀಕ್ಷೆ ಎನ್ನಬಹುದಲ್ಲ. ಅವರ ಮಾತಿನಲ್ಲಿ ಎರಡು ಗೂಢಾರ್ಥ ನೀಡುವ ಚಿಂತನೆಗಳಿವೆ.

1. ವೈಷ್ಣವ ದೀಕ್ಷೆ ಕೊಡುವುದು
2. ಅದಕ್ಕಾಗಿ ಪ್ರತ್ಯೇಕ ಮಠ ಸ್ಥಾಪಿಸುವುದು

ಭಾರತದ ಧಾರ್ಮಿಕ ಇತಿಹಾಸ

ಇಂದಿನ ಭೂಪಟದ ಭಾರತ ಬದಿಗಿಟ್ಟು ಪುರಾತನ ಭಾರತವನ್ನು ಕಲ್ಪಿಸಿಕೊಂಡರೆ ಅದು ಉತ್ತರದಲ್ಲಿ ನೇಪಾಳವನ್ನು, ಟಿಬೆಟ್, ಭೂತಾನ್, ಕಾಶ್ಮೀರ ಮಾತ್ರವಲ್ಲ ಅಫಘಾನಿಸ್ತಾನವನ್ನು ಸಹ ಒಳಗೊಳ್ಳುತ್ತದೆ ದಕ್ಷಿಣದಲ್ಲಿ ಕನ್ಯಾಕುಮಾರಿ, ರಾಮೇಶ್ವರ ಮಾತ್ರವಲ್ಲ ಶ್ರೀಲಂಕಾವನ್ನು ಮಲೇಷ್ಯಾ ಇತ್ಯಾದಿಗಳನ್ನು ಒಳಗೊಳ್ಳುತ್ತದೆ. ಈ ಬೃಹತ್ ಧಾರ್ಮಿಕ ಸಾಮ್ರಾಜ್ಯದ ಏಕೈಕ ಆರಾಧ್ಯ ಗುರು ಯೋಗಿರಾಜ ಶಿವನೇ ಆಗಿದ್ದ. ಶಿವ ಮತ್ತು ಆತನ ಅನುಯಾಯಿಗಳಾದ ರುದ್ರಗಣದ ಪ್ರಭಾವ ಅಗಾಧವಾಗಿತ್ತು. ನಂತರ ಆರ್ಯರ ಆಗಮನವಾಯಿತು, ಮೂಲ ನಿವಾಸಿಗಳಾಗಿದ್ದ ದ್ರಾವಿಡರು ವಲಸೆ ಬಂದ ಆರ್ಯರ ನಡುವೆ ಸಾಕಷ್ಟು ಸಂಘರ್ಷವಾಯಿತು. ನಂತರ ಹೊಂದಾಣಿಕೆಯಾಯಿತು. ಅವರೆಗೂ ಏಕವೇವಾರಾಧ್ಯ ಗುರುವಾಗಿದ್ದ ಶಿವನು ತ್ರಿಮೂರ್ತಿಗಳಲ್ಲಿ ಒಬ್ಬನಾದ. ಇಂದ್ರ, ವರುಣ, ಅಗ್ನಿ ಮುಂತಾದ ದೇವತೆಗಳೊಡನೆ ವಿಷ್ಣುವಿನ ಕಲ್ಪನೆ ಮೂಡಿತು. ಶಿವ ಒಬ್ಬ ಐತಿಹಾಸಿಕ ಯುಗಪುರುಷ, ವಿಷ್ಣು ಕಾಲ್ಪನಿಕ. ಇಂದಿಗೂ ಶಿವನ ವಾಸಸ್ಥಾನವಾಗಿದ್ದ ಕೈಲಾಸ ಪರ್ವತ, ಶಿವ ಪಾರ್ವತಿ ಸ್ನಾನ ಮಾಡುತ್ತಿದ್ದ ಮಾನಸ ಸರೋವರ, ಗೌರಿ ಕುಂಡ, ಋಷಿಕೇಶ, ಹರದ್ವಾರ, ನೀಲಕಂಠ, ವೀರಭದ್ರ ಮುಂತಾದ ಪರ್ವತಗಳು ಜ್ವಲಂತ ಸಾಕ್ಷಿಯಾಗಿವೆ. ಆ ರೀತಿ ಎಲ್ಲಿಯೂ ವಿಷ್ಣುವಿನ ಕ್ಷೀರ ಸಾಗರ, ವೈಕುಂಠ ಎಂಬ ಸ್ಥಳಗಳು ಗುರುತಿಸಲ್ಪಟ್ಟಿಲ್ಲ. The Age of Mythology ಎಂಬ ಘಟ್ಟದಲ್ಲಿ ಪುರಾಣಗಳು ಮೂಡಿ, ಹಲವು ದೇವತೆಗಳ ಕಲ್ಪನೆ ಮೂಡಿತು. ಶ್ರೀರಾಮ, ಶ್ರೀಕೃಷ್ಣರು ನಂತರ ಆಗಿ ಹೋದ ಐತಿಹಾಸಿಕ ವ್ಯಕ್ತಿಗಳು.

ಐತಿಹಾಸಿಕ ವ್ಯಕ್ತಿಗಳು ಮೊದಲು ಎಲ್ಲರೂ ಶಿವಭಕ್ತರೆ. ಶಿವನು ಸಮಾನತಾ ತತ್ವವನ್ನು ಪ್ರತಿಪಾದಿಸಿದ ಮಹಾತ್ಮ, ಹಾಗಾಗಿ ಕೆಲವರು ಉದ್ದೇಶಪೂರ್ವಕವಾಗಿ ವಿಷ್ಣುವಿನ ಪರಿಕಲ್ಪನೆಯನ್ನು ಪ್ರಚಾರ ಮಾಡಿದರು. ಆದಿ ಶಂಕರಾಚಾರ್ಯ ರಿಗೂ ಪೂರ್ವದಲ್ಲಿ ಎಲ್ಲ ಬ್ರಾಹ್ಮಣರೂ ಶಿವನ ಆರಾಧಕರೇ ಆಗಿದ್ದರು. ಶಂಕರಾಚಾರ್ಯರು ಪಂಚಾಯತನ ಪೂಜೆ ಎಂದು ಇನ್ನಿತರ 4 ದೇವತೆಗಳ ಪೂಜೆಯನ್ನು ಆರಂಭಿಸಿದರು. ಹೇಗೆ ಲಿಂಗಾಯತರಲ್ಲಿ ಜಾತಿವಾದಿಗಳು, ವರ್ಗೀಕರಣ ಆಗಬೇಕೆನ್ನುವವರು ವೀರಶೈವ ಪದ ಹಿಡಿದು ಕೊಂಡುದಲ್ಲದೆ ಕಾಲ್ಪನಿಕ ಪಂಚಾಚಾರ್ಯರನ್ನು ಹೇಗೆ ಸೃಷ್ಟಿಸಿದರೋ ಹಾಗೆ ವಿಷ್ಣುವಿನ ಕಲ್ಪನೆಯನ್ನು ಬೆಳೆಸಿದರು. ವಿಷ್ಣುವಿನ ದಶಾವತಾರದ ಕಲ್ಪನೆ ಹೆಣೆಯಲಾಯಿತಲ್ಲದೆ ರಾಮ, ಕೃಷ್ಣರ ಜೀವನ - ಸಾಧನೆಯ ಮೂಲಕ ವರ್ಣಾಶ್ರಮ ಜಾತಿಪದ್ಧತಿಯನ್ನು ಗಟ್ಟಿಗೊಳಿಸಲಾಯಿತು. ರಾಮ, ಕೃಷ್ಣರು ಸಹಿತ ಶಿವಲಿಂಗ ಪೂಜೆ ಮಾಡಿದುದನ್ನು ಪುರಾಣಗಳಲ್ಲಿ ಓದುತ್ತೇವೆ. ಶಿವ ಮತ್ತು ಶೈವ ಮಾರ್ಗಗಳು ಹೆಚ್ಚು ಉದಾರ, ವೈಷ್ಣವವು ಬಹಳ ಸಂಕುಚಿತ. ಉದಾಹರಣೆಗೆ 12 ಜ್ಯೋತಿರ್ಲಿಂಗಗಳ ದರ್ಶನ ಎಲ್ಲ ಜಾತಿಯವರಿಗೂ ಲಭ್ಯ, ನೇರ ದರ್ಶನ ಸ್ಪರ್ಶನ, ಪೂಜೆಗೆ ಸಹಿತ ಅವಕಾಶವಿದೆ. ಮಹಿಳೆಯರೂ ಸಹ ದರ್ಶನ ಪಡೆಯಬಲ್ಲರು. ಅದೇ ಶ್ರೀ ಕೃಷ್ಣನ ಆರಾಧನಾ ಸ್ಥಳ ಗುರುವಾಯೂರಪ್ಪನ್ ದೇವಸ್ಥಾನ, ಜಗನ್ನಾಥ್ ಪುರಿಯ ಕೃಷ್ಣ ದೇವಾಲಯ ಭೇದಗಳ ಆಗರ. ಎಲ್ಲರಿಗೂ ದರ್ಶನ ಕೊಡುವುದಿರಲಿ ಕ್ರೈಸ್ತ ಏಸುದಾಸ ಬಂದು ಹೋದುದಕ್ಕೆ ದೇವಸ್ಥಾನ ತೊಳೆಯುವ ಮೂರ್ಖತನವನ್ನು ಸಹ ಕಾಣುತ್ತೇವೆ. ಲಿಂಗಾಯತ ಧರ್ಮ ಸ್ವೀಕರಿಸಿದ ಎಲ್ಲ ಜಾತಿಯ ಶರಣರನ್ನೂ ನಾವು ಗೌರವಿಸುತ್ತೇವೆ. ಅದೇ ಉಡುಪಿಯ ಕೃಷ್ಣ ಭಕ್ತರಾದ ಕನಕದಾಸರಿಗೆ ಗುರುಸ್ಥಾನ ದೊರೆಯಲಿಲ್ಲ.

ಶೂದ್ರರೆಲ್ಲರೂ ಶಿವಭಕ್ತರು! ಶಿವಭಕ್ತರನ್ನೇ ಶೂದ್ರ ಸ್ಥಾನದಲ್ಲಿ ಇಡಲಾಯಿತು. ಶಿವಭಕ್ತರನ್ನು ದಸ್ಯುಗಳೆಂದು, ರಾಕ್ಷಸರೆಂದು ಪುರಾಣಗಳಲ್ಲಿ ಚಿತ್ರಿಸಲಾಯಿತು. ಉದಾ: ರಾವಣ, ಮಹಿಷಾಸುರ, ಹಿರಣ್ಯಕಷ್ಯಪ, ಹಿರಣ್ಯಾಕ್ಷ. ಲಿಂಗಾಯತರಾಗುವುದು ಮತಾಂತರ ಎಂದು ಭಾವಿಸುವ ಪೇಜಾವರ ಶ್ರೀಗಳು ಇವರ ನಾರದನು ಶಿವಭಕ್ತ ದೊರೆಗಳಾಗಿದ್ದ ಹಿರಣ್ಯಕಷ್ಯಪುವಿನ ಹೆಂಡತಿ, ಪ್ರಹ್ಲಾದನ ತಾಯಿಯನ್ನು, ಮಗನನ್ನು ಏಕೆ ವೈಷ್ಣವರನ್ನಾಗಿ ಮತಾಂತರಿಸಲು ಯತ್ನಿಸಿದ್ದು ಎಂಬುದನ್ನು ಅರಿತಿರುವರೆ?

ವಿಚಾರ ದಾಸ್ಯವನ್ನು ಬೋಧಿಸುವ ವೈಷ್ಣವ ದೀಕ್ಷೆ ಎಲ್ಲಿ, ಗುರು ಮುಟ್ಟಿ ಗುರುವಾಗುವ ಲಿಂಗದೀಕ್ಷೆ ಎಲ್ಲಿ. ಪೇಜಾವರ ಶ್ರೀಗಳ ತಂತ್ರ ವಿಭೂತಿಧಾರಕರಾದ ಒಕ್ಕಲಿಗರು, ಕುರುಬರು, ಕುಂಬಾರರು, ಮಡಿವಾಳರು ಇತ್ಯಾದಿ ಇತ್ಯಾದಿ ಜನರನ್ನು ಶಿವಭಕ್ತಿಯಿಂದ ದೂರಮಾಡಿ ವೈಷ್ಣವರನ್ನಾಗಿ ಮಾಡುವುದೇ ಇದ್ದಂತೆ ಕಾಣುತ್ತದೆ. ಹೋಗಲಿ ವೈಷ್ಣವ ದೀಕ್ಷೆ ಕೊಟ್ಟ ಮೇಲೆ ಅವರ ಪೂರ್ವಾಶ್ರಮ ಅಳಿದು ದೀಕ್ಷಿತರು ಮಾಧ್ವ ಬ್ರಾಹ್ಮಣರಾಗುವರೆ? ಅವರನ್ನು ಕೃಷ್ಣ ಪೂಜೆಗೆ ನೇಮಕ ಮಾಡಲಾಗುವುದೆ? ಪೇಜಾವರ ಮಠಕ್ಕೆ ಅಧಿಕಾರಿಯನ್ನಾಗಿ ಮಾಡುವರೆ?

ನಾವು ಯಾರಿಗೆ ಬೇಕಾದರೂ ಮಂತ್ರ ದೀಕ್ಷೆ, ಲಿಂಗದೀಕ್ಷೆ, ಜಂಗಮ ದೀಕ್ಷೆ ಕೊಡುತ್ತೇವೆ.

1. ಮಾಂಸಾಹಾರ ತ್ಯಜಿಸಲು ಸಾಧ್ಯವಿಲ್ಲದವರಿಗೆ ಬಸವಾಯತ ದೀಕ್ಷೆ ಎಂಬ ಮಂತ್ರದೀಕ್ಷೆ ಕೊಡಲಾಗುವುದು.
2. ಸಸ್ಯಾಹಾರಿ ಜೀವನ ಪದ್ಧತಿ ಸ್ವೀಕರಿಸುವವರಿಗೆ ಇಷ್ಟಲಿಂಗ ದೀಕ್ಷೆ ಕೊಡಲಾಗುವುದು.
3. ಆಚಾರ-ಅರಿವು ಅಳವಟ್ಟವರಿಗೆ ಜಂಗಮ ದೀಕ್ಷೆ ಕೊಡಲಾಗುವುದು; ಮಠ ಪೀಠಕ್ಕೆ ಅಧಿಕಾರಿಗಳನ್ನಾಗಿಯೂ ಮಾಡಲಾಗುವುದು.

ಅದೇ ರೀತಿ ಲಿಂಗಾಯತರನ್ನು ಮತಾಂತರ ಮಾಡುವರೆಂದು ಆರೋಪಿಸಿರುವ ಪೇಜಾವರ ಶ್ರೀಗಳು ವೈಷ್ಣವ ದೀಕ್ಷೆಯಲ್ಲಿ ಯಜ್ಞೋಪವೀತ, ಶಿಖೆ, ಗಾಯತ್ರಿ ಮಂತ್ರ ನೀಡಿ ಬ್ರಾಹ್ಮಣರನ್ನಾಗಿ ಮಾಡಿ, ಇನ್ನು ಮುಂದುವರಿದು ಅರ್ಹತೆ ಇದ್ದ ವೈರಾಗ್ಯ ಮೂರ್ತಿಗಳನ್ನು ತಮ್ಮ ಮಾಧ್ವ ಸಂಪ್ರದಾಯದ ಮಠಗಳಿಗೆ ಅಧಿಕಾರಿಯನ್ನಾಗಿ ಮಾಡುವರೆ? ಶೂದ್ರತ್ವವಳಿದು ಬ್ರಾಹ್ಮಣತ್ವ ಪ್ರಾಪ್ತಿಯಾಗದ ಮೇಲೆ ಅಂಥ ವೈಷ್ಣವ ದೀಕ್ಷೆ ಯಾರಿಗೆ ಬೇಕು?

ಈ ಪ್ರಶ್ನೆಗೆ ಉತ್ತರಿಸಿ ನಂತರ ಲಿಂಗಾಯತ ದೀಕ್ಷೆ ಕೊಡುವವರನ್ನು ಟೀಕಿಸಲಿ.

ಲಿಂಗಾಯತರು ಹಿಂದುಗಳಲ್ಲ !

ಪೇಜಾವರ ಶ್ರೀಗಳ ಮಾತು ಮತ್ತೊಂದು ದೃಷ್ಟಿಯಿಂದ ಒಂದು ಪರಮ ಸತ್ಯವನ್ನು ಪ್ರತಿಪಾದಿಸುತ್ತದೆ. "ಲಿಂಗದೀಕ್ಷೆ ಪಡೆಯುವುದು ಮತಾಂತರ" ಎಂಬ ಶ್ರೀಗಳ ಅಭಿಪ್ರಾಯದಲ್ಲಿ ಲಿಂಗಾಯತರು ಹಿಂದುಓಂದ, ಮತಾಂತರಗೊಂಡು ಹೊರಗೆ ಹೋದವರು ಎಂಬ ಸತ್ಯ ಧ್ವನಿಸುತ್ತದೆ. "ಹೋಗು ಅನ್ನಲಾರದೆ ಹೊಗೆ ಹಾಕಿದರು" ಎಂಬ ಗಾದೆಯಂತೆ ಇವರ ಧೋರಣೆ. ಹಿಂದುತ್ವದ ಕಕ್ಷೆಯೊಳಗಿದ್ದು ಶೂದ್ರರು ಎನ್ನಿಸಿಕೊಳ್ಳುವ ಬದಲು ಸ್ವತಂತ್ರ ಧರ್ಮೀಯರೆಂದು ಘೋಷಿಸಿಕೊಳ್ಳುವುದು ಸೂಕ್ತವೆಂಬ ಪ್ರೇರಣೆ ಇದರಿಂದ ದೊರಕುತ್ತದೆ.

1973ಕ್ಕಿಂತ ಮೊದಲು ನಾವು ವಿಶ್ವಹಿಂದು ಪರಿಷತ್ ಶಾಖೆಗಳನ್ನು ತೆರೆಯುವಲ್ಲಿ ಅಪಾರ ಉತ್ಸಾಹ ಹೊಂದಿದ್ದೆವು. ಒಮ್ಮೆ ದೊಡ್ಡಬಳ್ಳಾಪುರದಲ್ಲಿ ಮಿಸೆಸ್ ಜಾನ್ ಎಂಬುವವರ ಶುದ್ಧೀಕರಣ ಏರ್ಪಡಿಸಿದ್ದರು. ಹಿಂದಿನ ದಿನ ಆಕೆಗೆ ಧರ್ಮೋಪದೇಶ ಮಾಡುವಾಗ ಕೇಳಿದಳು, "ನಾನು ಗೃಹಿಣಿ 4 ಮಕ್ಕಳಿವೆ. ಮುಂದೆ ಅವರ ಮದುವೆ ಹೇಗೆ? ಯಾವ ಸಮಾಜದೊಡನೆ ಸಂಬಂಧ ಇಟ್ಟುಕೊಳ್ಳಬೇಕು." ವಿ.ಹಿಂ.ಪ ಸದಸ್ಯರು ಮೌನ ತಳೆದರು. ತಾಲ್ಲೂಕು ಅಧ್ಯಕ್ಷರು ಲಿಂಗಾಯತರೇ ಇದ್ದರು. ಅವರು ಹೇಳಿದರು, "ಲಿಂಗದೀಕ್ಷೆ ಕೊಡಿರಿ, ನಮ್ಮ ಸಮಾಜದಲ್ಲಿ ಸೇರಿಸಿಕೊಳ್ಳುತ್ತೇವೆ." ಆಗ ವಿ.ಹಿಂ.ಪ ಕೆಲ ಪ್ರಮುಖರು ಹೇಳಿದರು, "ಬೇಡ; ಆಕೆ ಹಿಂದುವಾಗಲಿ ಲಿಂಗಾಯತರಾಗುವುದು ಬೇಡ." ಅದೇ ಕೊನೆ. ಮುಂದೆ ವಿಶ್ವ ಹಿಂದು ಪರಿಷತ್ ಸಂಬಂಧ ಬಿಟ್ಟು ಬಿಟ್ಟೆವು. ಅವರಲ್ಲಿ ಮತಾಂತರ ಸಮಸ್ಯೆಗೆ ಪರಿಹಾರವಿಲ್ಲ. ಪರಿಹಾರ ತೋರಿಸಲು ಹೊರಟರೆ ಸಹನೆ ಇಲ್ಲ. ಒಂದು ಸ್ವತಂತ್ರ ಧರ್ಮವನ್ನು ಜಾತಿಯನ್ನಾಗಿ ಮಾಡಿ ಹಿಂದು ಕಕ್ಷೆಯಲ್ಲಿ ಉಳಿದಿರುವ ಲಿಂಗಾಯತರಿಗೆ ಎಂದು ತಿಳುವಳಿಕೆ ಬರುತ್ತದೋ ನೋಡೋಣ.

ಏಪ್ರಿಲ್ - ಮೇ ಸಂಯುಕ್ತ ಸಂಚಿಕೆ

ಬಿಡುವಿಲ್ಲದ ಕಾರ್ಯಕ್ರಮ, ನಿರಂತರ ಪ್ರವಾಸದಿಂದಾಗಿ ಏಪ್ರಿಲ್, 2008ರ ಸಂಚಿಕೆ ಪ್ರಕಟವಾಗಿಲ್ಲ. ಎರಡೂ ತಿಂಗಳ ಸಂಚಿಕೆಯನ್ನು ಒಟ್ಟಾಗಿ ಪ್ರಕಟಿಸಿ ಕಳಿಸಲಾಗಿದೆ.

ಲಿಂಗಾಯತ ಧರ್ಮ ಸಂವಿಧಾನಕ್ಕೆ ಜಗನ್ಮಾತೆ ಅಕ್ಕಮಹಾದೇವಿಯವರ ಕೊಡುಗೆ

(ಜಗನ್ಮಾತೆ ಅಕ್ಕಮಹಾದೇವಿ ಜಯಂತಿ (21-4-2008) ನಿಮಿತ್ತ ವಿಶೇಷ ಲೇಖನ)

-ಶರಣ ಸಚ್ಚಿದಾನಂದ ಚಟನಳ್ಳಿ

ಗೋಮುಖ ವ್ಯಾಘ್ರಂಗಳಂದದ
ಕಾಮ ಮೊದಲಾದಖಿಳ ವಿಷಯ
ಸ್ತೋಮವನು ಮುರಿದಿಕ್ಕಿ ಮುಂಬರಿದಂತರಂಗದಲಿ
ಆ ಮಹಾಶಿವಲಿಂಗ ಸಂಗ
ಪ್ರೇಮಿಯಾಗಿ ಶಿವೈಕ್ಯಪದವನು
ನೇಮಿಸಿದ ಮಹಾದೇವಿಯಕ್ಕಂಗೆ ಶರಣು ಶರಣಾರ್ಥಿ

ಅಕ್ಕಮಹಾದೇವಿ ತಾಯಿಯವರು, ತಮ್ಮ ವಚನಗಳಲ್ಲಿ ಹಾಗು ತಮ್ಮ ಜೀವನದ ಶೈಲಿಯಲ್ಲಿ ಅನೇಕ ವಿಶೇಷವಾದ ತತ್ತ್ವಗಳನ್ನು ಕಲಿಸುತ್ತಾರೆ. ಪ್ರಮುಖವಾಗಿ ಇವರ ವಚನಗಳಲ್ಲಿ ಗಮನಿಸಬೇಕಾದ ಮೂರು ಅಂಶಗಳಿವೆ. 1. ಲಿಂಗದೇವನಲ್ಲಿ ಅನನ್ಯ ಶರಣಾಗತಿ. 2. ಗುರು ಬಸವ ಭಕ್ತಿ. 3. ಶರಣರ ಸಂಗ.

ಪರಮಾತ್ಮನನ್ನು ಹಠಯೋಗದಿಂದ ಒಲಿಸಿಕೊಳ್ಳಲು ಸಾಧ್ಯವಿಲ್ಲ. ನೀನೀಗ ಸಾಕ್ಷಾತ್ಕಾರವಾಗದಿದ್ದಡೆ ನಾನು ಪ್ರಾಣ ಕೊಡುತ್ತೇನೆ, ತಲೆ ಒಡೆದುಕೊಂಡು ಸಾಯುತ್ತೇನೆ ಎನ್ನಲಿಲ್ಲ. ಭಕ್ತಿ ಮಾರ್ಗ ಮತ್ತು ಸಂಪೂರ್ಣ ಶರಣಾಗತಿಯಿಂದ ಒಲಿಸಿಕೊಳ್ಳಲು ಹೇಳುತ್ತಾರೆ.

ಅಯ್ಯಾ, ನೀ ಕೇಳಿದೊಡೆ ಕೇಳು, ಕೇಳದಿರ್ದೊಡೆ ಮಾಣು
ಆನು ನಿನ್ನ ಹಾಡಿದಲದೆ ಸೈರಿಸಲಾರೆನಯ್ಯಾ.
ಅಯ್ಯಾ, ನೀ ನೋಡಿದೊಡೆ ನೋಡು ನೋಡದಿರ್ದಡೆ ಮಾಣು
ಆನು ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ.
ಅಯ್ಯಾ, ನೀನು ಮೆಚ್ಚಿದಡೆ ಮೆಚ್ಚು, ಮೆಚ್ಚದಿರ್ದಡೆ ಮಾಣು
ಆನು ನಿನ್ನನ್ನಪ್ಪಿದಲ್ಲದೆ ಸೈರಿಸಲಾರೆನಯ್ಯಾ.
ಅಯ್ಯಾ, ನೀನು ಒಲಿದೊಡೆ ಒಲಿ, ಒಲಿಯದಿರ್ದಡೆ ಮಾಣು
ಆನು ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ,
ನಾ ನಿಮ್ಮ ಪೂಜಿಸಿ ಹರುಷದೊಳೋಲಾಡುವೆನಯ್ಯಾ.

ಬೆರೆಸುವಡೆ ಬೇಗ ತೋರಾ, ಹೊರ ಹಾಯ್ಕದಿರಯ್ಯಾ
ನಿಮ್ಮಲ್ಲಿಗೆ ಸಲೆಸಂದ ತೊತ್ತಾನು; ಎನ್ನ ಹೊರ ಹಾಯ್ಕದಿರಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ನಂಬಿ ಬೆಂಬಳಿ ಬಂದೆನು, ಇಂಬುಗೊಳ್ಳಯ್ಯಾ ಬೇಗದಲಿ

ಈ ವಚನಗಳಲ್ಲಿ ಅವರು ತಿಳಿಸಿರುವ ಶರಣಾಗತಿಯನ್ನು ನಾವು ಮತ್ತೆಲ್ಲಿಯೂ ಕಾಣುವುದಿಲ್ಲ. "ಕೊಲ್ಲು ಕಾಯಿ ನಿಮ್ಮ ಧರ್ಮ" "ಎನಗುಳ್ಳುದೊಂದು ಮನ, ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ ಎನಗೆ ಭಯವುಂಟೆ?" ಎನ್ನುವ ಅಕ್ಕನ ಶರಣಾಗತಿಯನ್ನು ನಾವು ಅಳವಡಿಸಿಕೊಳ್ಳಬೇಕು. ಹಠಮಾರಿತನ, ಹಠಯೋಗದ ಮುಖಾಂತರ ದೇವನನ್ನು ಒಲಿಸಿಕೊಳ್ಳಲಿಲ್ಲ. ಭಕ್ತಿ ಮಾರ್ಗವನ್ನೇ ಅನುಸರಿಸಿ ಅದನ್ನೇ ನಮಗೂ ಬೋಧಿಸಿದ್ದಾರೆ.

ಆದಿ ಅನಾದಿಯೆನ್ನದೆ ಬಸವಣ್ಣ ಗಣಮೇಳಾಪವಾಗಿ ಬಂದು,
ಅನಂತ ಯುಗಂಗಳಲ್ಲಿಯೂ, ಸಕಲ ಲೋಕದೊಳು
ಚರಿಸುತ್ತಿಪ್ಪ ಸುಳುಹನರಿಯದೆ, ಸಕಲ ನಿಃಕಲರೆಲ್ಲರೂ
ಭ್ರಮೆಗೊಂಡು ಬೀಳುತ್ತೇಳುತ್ತಲಿರ್ದರು
ಇವರೆಲ್ಲರ ಮುಂದೆ ಆ ಗಣಂಗಳ ನಾನರಿದು ಬದುಕಿದೆ ಕಾಣಾ
ಚೆನ್ನಮಲ್ಲಿಕಾರ್ಜುನ.

ಶರಣರ ಸಮೂಹ ಇರುವಲ್ಲಿ ಗುರುಬಸವಣ್ಣನವರ ಚೈತನ್ಯ ಇರುತ್ತದೆ. ಗುರುಬಸವಣ್ಣನವರ ಅಸ್ತಿತ್ವಕ್ಕೆ ಆದಿ ಅನಾದಿಯ ಭೇದವೇ ಇಲ್ಲ. ಅವರು ಶಾರೀರಿಕವಾಗಿ ಗೋಚರಿಸದಿದ್ದರೂ ತಾತ್ವಿಕವಾಗಿ ಎಂದೆಂದಿಗೂ ಶರಣರಿರುವ ಜಾಗದಲ್ಲಿ ಇರುತ್ತಾರೆ ಎನ್ನುತ್ತಾರೆ. ''ಕತ್ತಲಲ್ಲಿ ಕನ್ನಡಿಯ ನೋಡಿ ಕಳವಳಗೊಂಡೆನು, ಬಸವಣ್ಣನ ತೇಜದೊಳಗಲ್ಲದೆ ಆ ನಿನ್ನನೆಂತು ಕಾಂಬೆ ಹೇಳಾ'' ಎಂದು ಲಿಂಗದೇವನಿಗೆ ಕೇಳುವ ಅಕ್ಕನವರು, ಲಿಂಗದೇವನನ್ನು ಗುರುಬಸವಣ್ಣನವರಲ್ಲಿ ಕಾಣಬೇಕು ಎನ್ನುತ್ತಾರೆ. ಆದರೆ ''ಚೆನ್ನ ಮಲ್ಲಿಕಾರ್ಜುನ ಎನಗೊಲಿದನಾಗಿ ನಾನು ಸಂಗನ ಬಸವಣ್ಣನ ಪಾದವ ಕಂಡು ನಮೋ ನಮೋ ಎನುತಿರ್ದೆನು'' ಎನ್ನುವ ಮಾತು ಎಷ್ಟೊಂದು ಆಶ್ಚರ್ಯವನ್ನುಂಟು ಮಾಡುತ್ತದೆ! ಲಿಂಗದೇವನನ್ನು ಗುರು ಬಸವಣ್ಣನವರ ತೇಜದಲ್ಲಿಯೇ ಕಾಣಬೇಕು; ಗುರುಬಸವಣ್ಣನವರು ಲಿಂಗದೇವನ ಒಲುಮೆ -ಯಾದರೆ ಮಾತ್ರ ಸಿಗುತ್ತಾರೆ ಎನ್ನುವ ಎರಡೂ ಮಾತುಗಳಲ್ಲಿ ಗುರುಬಸವ ಭಕ್ತಿ ಅತ್ಯಂತ ಎತ್ತರದಲ್ಲಿದೆ.

ಅಯ್ಯಾ ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯ
ಅಯ್ಯಾ ನಿಮ್ಮ ಶರಣರು ಇದ್ದ ಪುರವೆ ಕೈಲಾಸಪುರವಯ್ಯ
ಅಯ್ಯಾ ನಿಮ್ಮ ಶರಣರು ನಿಂದುದೇ ನಿಜ ನಿವಾಸವಯ್ಯ
ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಬಸವಣ್ಣನಿದ್ದ ಕ್ಷೇತ್ರವೇ
ಅವಿಮುಕ್ತಕ್ಷೇತ್ರವಾಗಿ, ಆನು ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

ಶರಣರು ನೆಲೆಸಿದ ಸ್ಥಾನಗಳು ಪರಮ ಪವಿತ್ರ ಸ್ಥಾನಗಳಾಗುತ್ತವೆ, ಅವಿಮುಕ್ತ ಕ್ಷೇತ್ರಗಳಾಗುತ್ತವೆ.ಲಿಂಗಾಯತ ಧರ್ಮ ಉಳಿಯಲು ಬೆಳೆಯಲು ಇಂಥ ಶರಣರ ಕ್ಷೇತ್ರಗಳನ್ನು ಬೆಳೆಸಬೇಕು ಎಂದು ಹೇಳುವ ಅಕ್ಕನವರು ವಚನ ಧರ್ಮಕ್ಕೆ ಈ ವಚನದ ಮೂಲಕ ಬಹು ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

ಇಷ್ಟಲಿಂಗ ದೀಕ್ಷೆಯನ್ನು ಯಾವ ವಯಸ್ಸಿಗೆ ತೆಗೆದುಕೊಳ್ಳಬೇಕು ಎನ್ನುವ ಅತ್ಯಂತ ಮಹತ್ವದ ಅಂಶವೊಂದು ಅಕ್ಕನವರ ವಚನದಲ್ಲಿ ಸಿಗುತ್ತದೆ.

ಉರಕ್ಕೆ ಜವ್ವನಗಳು ಬಾರದ ಮುನ್ನ
ಮನಕ್ಕೆ ನಾಚಿಕೆಗಳು ತೋರದ ಮುನ್ನ,
ನಮ್ಮವರಂದೇ ಮದುವೆಯ ಮಾಡಿದರು.
ಚೆನ್ನಮಲ್ಲಿಕಾರ್ಜುನಂಗೆ, ಹೆಂಗೂಸೆಂಬ ಭಾವವ ತೋರದ ಮುನ್ನ
ನಮ್ಮವರಂದೆ ಮದುವೆಯ ಮಾಡಿದರು.

ಈ ವಚನವನ್ನು ಗಮನಿಸಿದರೆ ದೀಕ್ಷೆಯನ್ನು 10-12 ವರ್ಷದ ಒಳಗಾಗಿ ಮಾಡಿಸಬೇಕು ಎನ್ನುವುದನ್ನು ಸೂಚಿಸುತ್ತದೆ. ಯೌವ್ವನ ಎನ್ನುವಂಥದ್ದು ಬಾರದ ಮುನ್ನ ದೀಕ್ಷೆಯಾಗಬೇಕು. 12 ವರ್ಷದ ಒಳಗಿನ ಮಕ್ಕಳು, ಗಂಡು - ಹೆಣ್ಣು ಎಂಬ ಬೇಧವಿಲ್ಲದೆ ಆಟ ಆಡುತ್ತಾರೆ. ಅಲ್ಲಿ ಮನಕ್ಕೆ ನಾಚಿಕೆ ಲಜ್ಜೆ ಎನ್ನುವಂಥದ್ದು ಇರುವುದಿಲ್ಲ. ಚಿಕ್ಕ ಚಿಕ್ಕ ಹೆಣ್ಣು ಮಕ್ಕಳು ಹುಡುಗರೊಂದಿಗೆ ಆಟವಾಡುತ್ತಿರುತ್ತಾರೆ,

ಅಲ್ಲಿ ಯಾವುದೇ ಸಂಕೋಚ ಇರುವುದಿಲ್ಲ. ಆದರೆ ಅವರು ದೊಡ್ಡವರಾದ ತಕ್ಷಣ, ಹುಡುಗರಿಂದ ತಮ್ಮನ್ನು ತಾವು ಭಿನ್ನವಾಗಿ ಗುರುತಿಸಿಕೊಳ್ಳುತ್ತಾರೆ. ಲಜ್ಜೆ ನಾಚಿಕೆಗಳು ಸಹಜವಾಗಿಯೇ ಬರುತ್ತವೆ. ಇದೆಲ್ಲಕ್ಕೂ ಮುನ್ನವೇ ಅರ್ಥಾತ್ ಹೆಣ್ಣು ಮಕ್ಕಳು ದೊಡ್ಡವರಾಗುವುದಕ್ಕೆ ಮುನ್ನವೆ ದೀಕ್ಷೆ ಮಾಡಿಸಬೇಕು. ಇನ್ನು ಗಂಡು ಮಕ್ಕಳಿಗೂ ಕೂಡ ಅಷ್ಟೇ ಅವರಿಗೆ ಸ್ವತಂತ್ರವಾಗಿ ಪೂಜೆ ಮಾಡುವ ಸಾಮರ್ಥ್ಯ ಇದ್ದರೆ, ಎಷ್ಟೇ ಚಿಕ್ಕ ವಯಸ್ಸಿನಲ್ಲಿಯೂ ಕೂಡ ದೀಕ್ಷೆ ಮಾಡಿಸಬಹುದು; 12 ವರ್ಷಗಳ ಒಳಗಂತೂ ಕಡ್ಡಾಯವಾಗಿ ಮಾಡಿಸಲೇಬೇಕು.

''ಚೆನ್ನಮಲ್ಲಿಕಾರ್ಜುನಯ್ಯಾ ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ ಲಿಂಗ ಸುಖಿಗಳ ಸಂಗದಲಿ ದಿನ ಕಳೆಯುವೆ'' ಎಂದು ಹೇಳುವ ಅಕ್ಕನವರು ಪ್ರತಿಯೊಬ್ಬರೂ ತಮ್ಮ ಆಯುಷ್ಯ ಇರುವವರೆಗೂ ಶರಣರ ಸಂಗದಲ್ಲಿಯೇ ಇರಬೇಕು ಎನ್ನುತ್ತಾರೆ.

ಆಯುಷ್ಯ ಹೋಗುತ್ತಿದೆ ಭವಿಷ್ಯ ತೊಲಗುತ್ತಿದೆ
ಕೂಡಿರ್ದ ಸತಿ ಸುತರು ತಮತಮಗೆ ಹರಿದು ಹೋಗುತ್ತೈದಾರೆ
ಬೇಡ ಬೇಡವೆಲೆ ಬಂಜೆಯಾಗಿ ಕೆಡಬೇಡ ಬಯಲಿಂಗೆ ಮನವೆ
ಚೆನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ ಹೂಣಿ ಹೊಕ್ಕು ಬದುಕು ಕಂಡಾ ಮನವೇ.

ಸಾಧಕನು ಯಾವುದೇ ಸಿದ್ಧಿಯನ್ನು ಪಡೆದಿರಲಿ, ಎಷ್ಟೇ ಔನ್ನತ್ಯಕ್ಕೇರಿರಲಿ, ಅವನಿಗೆ ಶರಣರ ಸಂಗವೇ ಜೀವನಕ್ಕೆ ಶೃಂಗಾರವೆನ್ನುತ್ತಾರೆ. ''ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ'' ಎಂದು ತಿಳಿಸಿ ನಮ್ಮನ್ನು ಸದಾ ಶರಣರ ಸಂಗದಲ್ಲಿರಬೇಕೆಂದು ಆಜ್ಞಾಪಿಸುತ್ತಾರೆ.

12ನೇ ಶತಮಾನದವರೆಗೆ ಸ್ತ್ರೀಯನ್ನು ಮಾಯೆ ಎಂದು ಕರೆದರು. ಆದರೆ ಶರಣರು, ಸ್ತ್ರೀ ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ ಎಂದರು. ಅಕ್ಕ ಇದಕ್ಕೂ ಮುಂದೆ ಹೋಗಿ, ದುರ್ಬಲ ಮನಸ್ಸಿನ ಪುರುಷನಿಗೆ ಸ್ತ್ರೀ ಮಾಯೆಯಾದರೆ, ದುರ್ಬಲ ಮನಸ್ಸಿನ ಸ್ತ್ರೀಗೆ ಪುರುಷನೂ ಮಾಯೆಯೇ ಎಂದು ಸಾರಿ ಲಿಂಗದೇವನೊಲಿದ ಶರಣರಿಗೆ ಯಾವ ಮಾಯೆಯೂ ಇಲ್ಲವೆನ್ನುತ್ತಾರೆ.

ಪುರುಷನ ಮುಂದೆ ಮಾಯೆ
ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡುವುದು
ಲೋಕವೆಂಬ ಮಾಯೆಗೆ ಶರಣಚಾರಿತ್ರ್ಯ ಮರುಳಾಗಿ ತೋರುವುದು.
ಚೆನ್ನಮಲ್ಲಿಕಾರ್ಜುನಯ್ಯ ನೀನೊಲಿದ ಶರಣಂಗೆ ಮಾಯೆಯಿಲ್ಲ
ಮರಹಿಲ್ಲ ಅಭಿಮಾನವೂ ಇಲ್ಲ.

ಈ ರೀತಿ ಪುರುಷನೂ ಕೂಡ ಮಾಯೆಯಾಗಬಲ್ಲ ಎಂದು ಹೇಳಿದ ಪ್ರಪ್ರಥಮ ವ್ಯಕ್ತಿ ಜಗನ್ಮಾತೆ ಅಕ್ಕಮಹಾದೇವಿ ತಾಯಿಯವರು.

ಲಿಂಗಾಯತ ಧರ್ಮೀಯರಿಗೆ ಇಂದು ಅತೀ ಅವಶ್ಯವಾಗಿ ಬೇಕಾಗಿರುವ ಸಂಗತಿಯೊಂದರ ಬಗ್ಗೆ ಅಕ್ಕ ಅಂದೇ ಹೇಳಿದ್ದಾರೆ.

''ನಾನು ಮಜ್ಜನಕ್ಕೆ ಮಾಡುವ ಮುನ್ನವೆ
ಜಂಗಮಕ್ಕೆ ಮಜ್ಜನವ ಮಾಡಿಸುವೆ

ನಾನು ಮನೆಯೊಳಿಹುದಕ್ಕೆ ಮುನ್ನವೆ
ಜಂಗಮಕ್ಕೆ ಗೃಹವ ಕೊಡುವೆ'' (ಶಿ.ವ. - 255)

ಈ ವಚನದಲ್ಲಿ ಜಂಗಮ ಎಂದರೆ ಸಮಾಜ. ಸಮಾಜಕ್ಕೆ ಗೃಹವ ಕೊಡುವೆ ಎಂದರೆ ಸಮಾಜದ ಬಂಧುಗಳು ಒಂದು ಕಡೆ ಸೇರಲು ಅನುಕೂಲವಾದಂಥ ಮನೆಯನ್ನು ಕಟ್ಟಿಸುತ್ತೇನೆ ಎನ್ನುತ್ತಾರೆ. ಇಂದು ಲಿಂಗಾಯತ ಧರ್ಮೀಯರೂ ಕೂಡ ತಮ್ಮ ಗೃಹ ಕಟ್ಟಿಸಿಕೊಳ್ಳುವುದಕ್ಕಿಂತ ಮುಖ್ಯವಾಗಿ ಜಂಗಮ ಗೃಹಗಳಾದ ಬಸವ ಮಂಟಪಗಳನ್ನು ಕಟ್ಟಿಸಬೇಕು. ಪ್ರತಿಯೊಂದು ಊರಿಗೂ ಬಸವ ಮಂಟಪಗಳಾಗಬೇಕು ಎನ್ನುವ ಸಂದೇಶ ಅಕ್ಕನವರ ವಚನದಲ್ಲಿದೆ.

ಅಕ್ಕನ ಜೀವನ ಶೈಲಿಯೇ ಲಿಂಗಾಯತ ಧರ್ಮಕ್ಕೆ ಬಹುದೊಡ್ಡ ಕೊಡುಗೆ ಎಂದರೂ ತಪ್ಪಾಗಲಿಕ್ಕಿಲ್ಲ. ಜೀವನದಲ್ಲಿ ಬರುವ ಅನೇಕ ಸಂದರ್ಭಗಳಲ್ಲಿ ಹೇಗೆ ವರ್ತಿಸಬೇಕು ಎನ್ನುವುದನ್ನು ಅಕ್ಕನ ಜೀವನವನ್ನು ನೋಡಿ ನಾವು ಕಲಿತುಕೊಳ್ಳಬೇಕಾಗಿದೆ. ಅಂದು ಸಮಾಜದಲ್ಲಿ ರಾಜರು ಹಲವಾರು ಪತ್ನಿಯರನ್ನು ಹೊಂದುವುದು ರೂಢಿಯಲ್ಲಿದ್ದುರಿಂದ ಕೌಶಿಕನು ಮೊದಲಿಗೆ ಅಕ್ಕನನ್ನು ಬಯಸಿರುವುದು ಸಹಜ. ಅವರ ಮನೆಗೆ ಮದುವೆಗಾಗಿ ನಿರೂಪ ಕಳಿಸಿರುವುದು ಅಪರಾಧವೇನಲ್ಲ. ಆದರೆ ಅಕ್ಕನು ಒಪ್ಪಿಕೊಳ್ಳದೇಹೋದಾಗ ರಾಜದಂಡದ ಭೀತಿಯನ್ನು ತೋರಿಸಿ ಅರಮನೆಯ ಬಂಧನದಲ್ಲಿ ಅಕ್ಕನ ತಾಯಿ-ತಂದೆಯರನ್ನು ಇರಿಸಿ, ಬಲವಂತವಾಗಿ ಅಕ್ಕನನ್ನು ಅರಮನೆಗೆ ಕರೆದುಕೊಂಡು ಹೋದುದು ಖಂಡಿತವಾ'ಯೂ ತಪ್ಪು, ಅದು ಅಕ್ಷಮ್ಯ.

ನಂತರ ಅಕ್ಕ ಅರಮನೆಯ ಬಂಧನವನ್ನು ತೊರೆದು ಕಲ್ಯಾಣಕ್ಕೆ ಹೋಗಿ ಗುರು ಬಸವಣ್ಣನವರ ಮಾರ್ಗದರ್ಶನದಲ್ಲಿ ಪರಿಪೂರ್ಣತೆಯನ್ನು ಹೊಂದಿ ಇಚ್ಛಾಮರಣಿಯಾಗಲು ಕದಳಿಯತ್ತ ಸಾಗುತ್ತಾರೆ. ಆ ಕಡೆ ಕೌಶಿಕನಿಗೆ ತನ್ನ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಡುತ್ತಾನೆ. ಅಕ್ಕನ ದರ್ಶನ ಪಡೆದು ಕ್ಷಮೆ ಕೇಳಲು ಕಲ್ಯಾಣಕ್ಕೆ ಹೋಗುತ್ತಾನೆ. ಅಕ್ಕ ಕದಳಿಗೆ ಹೋಗಿರುವುದನ್ನು ತಿಳಿದು, ಅವನೂ ಅಲ್ಲಿಗೆ ಹೋಗಿ ಕೊನೆಗೆ ಅಕ್ಕನಿಗೆ ಭೇಟಿಯಾಗಿ ಅವರ ಪಾದಕ್ಕೆ ಬಿದ್ದು "ನನ್ನನ್ನು ಕ್ಷಮಿಸಿ ತಾಯಿ" ಎಂದು ಅವರಲ್ಲಿ ಕ್ಷಮೆ ಕೇಳುತ್ತಾನೆ. ಆಗ ಅಕ್ಕ "ಏಳು ಮಗು, ನನ್ನ ಪತಿಯ ಮನೆಗೆ ಬಂದ ಅತಿಥಿಗಳು ನೀವು. ನೀವು ನಿಮಿತ್ತ ಮಾತ್ರ ನೀವು ಮಾಡಿದ ಯಾವ ತಪ್ಪು ನನ್ನ ಚಿತ್ತದಲ್ಲಿಲ್ಲ" ಎಂದು ಹೇಳಿ, ಕೌಶಿಕನ ಅಪೇಕ್ಷೆಯಂತೆ ಅವನಿಗೆ ಲಿಂಗದೀಕ್ಷೆಯನ್ನು ನೀಡಿದುದು ಅತ್ಯಂತ ಹೃದಯಸ್ಪರ್ಶಿಯಾದ ಘಟನೆಯಾಗಿದೆ. ಅಕ್ಕ ಹೇಳಿದಂಥ ಮಾತನ್ನು ಬಹುಶಃ ಜಗತ್ತಿನ ಯಾವುದೇ ಹೆಣ್ಣು ಇಂಥ ಸಂದರ್ಭದಲ್ಲಿ ಹೇಳಲಿಕ್ಕೆ ಸಾಧ್ಯವಿಲ್ಲವೇನೋ ಎನಿಸುತ್ತದೆ. ಪ್ರೇಮ ವಿವಾಹಗಳ ಸಂದರ್ಭದಲ್ಲಿಯೇ ಆಗಲಿ ಅಥವಾ ನಿಶ್ಚಿತಗೊಳಿಸಿದ ಮದುವೆಯ ಸಂದರ್ಭಗಳಲ್ಲಿಯೇ ಆಗಲಿ ಯಾವುದೂ ಸಣ್ಣ ಪುಟ್ಟ ತಪ್ಪುಗಳಾದಾಗ, ನೀನು ಮೋಸ ಮಾಡಿದ್ದೀಯಾ, ನಿನ್ನ ಮುಖ ನೋಡುವುದಿಲ್ಲ ಹೋಗು ಎಂದು ಆರೋಪಗಳನ್ನೇ ಹೊರಿಸುತ್ತಾರೆ ಮತ್ತು ಅಮಾನವೀಯವಾಗಿ ನಡೆದುಕೊಳ್ಳುತ್ತಾರೆಯೇ ಹೊರತು ಒಬ್ಬೊರನ್ನೊಬ್ಬರು ಕ್ಷಮಿಸುವಂಥ ಔದಾರ್ಯವನ್ನು ತೋರುವುದಿಲ್ಲ. ರಕ್ತ ಸಂಬಂಧ ನೆರವೇರದಿದ್ದಾಗ ಪವಿತ್ರವಾದ ಭಕ್ತಿಸಂಬಂಧವನ್ನು ಇಟ್ಟುಕೊಳ್ಳುವ ಔದಾರ್ಯವನ್ನೇಕೆ ತೋರಬಾರದು? ಅಕ್ಕ ಒಮ್ಮೆ ಅಲ್ಲ ಈ ರೀತಿ ಎರಡು ಬಾರಿ ಔದಾರ್ಯತೆಯನ್ನು ಮೆರೆದಿದ್ದಾರೆ. ಕಿನ್ನರಯ್ಯನು ಅಕ್ಕನನ್ನು ಮದುವೆಯಾಗುತ್ತೇನೆ ಎಂದು ಬಂದಾಗ ಅಕ್ಕ ತೋರಿದ ವರ್ತನೆಯನ್ನು ಈ ನಾಡಿನ ಸಹೋದರಿಯರು ಕಲಿತುಕೊಳ್ಳಬೇಕು. ಅಕ್ಕನನ್ನು ಕಿನ್ನರಯ್ಯನು ತುಂಬಾ ತೊಂದರೆಕೊಡುವ ರೀತಿಯಲ್ಲಿ ಪರೀಕ್ಷಿಸುತ್ತಾನೆ. ಕೊನೆಗೆ ಕ್ಷಮೆ ಕೇಳಿದಾಗ ಅಕ್ಕ "ಕಿನ್ನರನಂತಪ್ಪ ಸಹೋದರನೆನಗೆ" ಎಂದು ಅವನನ್ನು ಕ್ಷಮಿಸಿ ಅವನಲ್ಲಿ ಸಹೋದರತೆ ಭಾವವನ್ನು ಉದ್ದೀಪಿಸಿಕೊಂಡಿರುವುದು ಅಕ್ಕನ ಮೇರು ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಅಕ್ಕನ ನಾಡಿನಲ್ಲಿ ಜನಿಸಿರುವ ಸಹೋದರಿಯರು ಅಕ್ಕನ ಈ ಗುಣವನ್ನು ಅಳವಡಿಸಿಕೊಂಡರೆ ಮಾತ್ರ ಶರಣತ್ವಕ್ಕೆ ಅರ್ಹರಾಗುತ್ತಾರೆ.

ಬಸವ ವಚನಾಮೃತ: - ಮಾತಾಜಿ

1. ಪಿಂಡಾಂಡದೊಳಗಿರುವ ಆತ್ಮ

ಅಧ್ಯಾತ್ಮ ಜಗತ್ತಿನ ಮೊಟ್ಟ ಮೊದಲ ಪ್ರಶ್ನೆ ನಾನಾರು? ಎಂಬುದು. ನಾನು ಎಲ್ಲಿಂದ ಬಂದೆ? ನಾನು ಎಲ್ಲಿಗೆ ಹೋಗಬೇಕು. ಈ ಮೂರು ಪ್ರಶ್ನೆಗಳ ಮೇಲೆಯೇ ತತ್ವಜ್ಞಾನ, ದರ್ಶನ ಶಾಸ್ತ್ರಗಳು ನಿಂತಿವೆ. ಲಿಂಗಾಯತ ಧರ್ಮದ ದರ್ಶನ ಶಾಸ್ತ್ರವಾದ ಷಟಸ್ಥಲವೂ ಈ ಪ್ರಶ್ನೆಯಿಂದಲೇ ಆರಂಭವಾಗುತ್ತದೆ.

ನಾನಾರು ? ನಾನೆಂದರೆ ಕೈ ಕಾಲು ಕಣ್ಣು ಮೂಗು ಬಾಯಿ ಇವುಗಳಿಂದ ಕೂಡಿರುವ ಈ ಶರೀರವೆ ? ಅಥವಾ ಈ ಶರೀರವೆಂಬ ಯಂತ್ರವನ್ನು ಆಡಿಸುವ ಸೂತ್ರಧಾರಕ ಶಕ್ತಿಯಾದ ಆತ್ಮವೆ ?

ಉದಕದೊಳಗೆ ಬಯ್ಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು;
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು;
ನನೆಯೊಳಗಣ ಪರಿಮಳದಂತಿದ್ದಿತ್ತು;
ಲಿಂಗದೇವರ ನಿಲವು ಕನ್ನೆಯ ಸ್ನೇಹದಂತಿದ್ದಿತ್ತು. ಬ.ವ.ದೀ.01

ಜಲ ತತ್ವ ಮತ್ತು ಅಗ್ನಿ ತತ್ವ ಪರಸ್ಪರ ವಿರುದ್ಧ. ಉರಿಯುವ ಬೆಂಕಿಗೆ ನೀರು ಹಾಕಿದರೆ ಬೆಂಕಿ ಆರುತ್ತದೆ. ಆದರೆ ಬಲು ವಿಲಕ್ಷಣವಾಗಿ ಅಗ್ನಿಯು ನೀರಿನಲ್ಲಿ ಹುದುಗಿಕೊಂಡಿರುತ್ತದೆ.

1. ಶರೀರದಲ್ಲಿ ಜಲ ತತ್ವವಿದೆ. ಅಗ್ನಿ ತತ್ವವೂ ಇದೆ. ಜಠರದಲ್ಲಿ ಅಗ್ನಿ ಇದೆ. ಆದರೆ ಅದು ನಾವು ಕುಡಿಯುವ ನೀರಿನಿಂದ ಆರುವುದಿಲ್ಲ.

2. ನೀರಿನ ಕಣಗಳಿಂದ ಕೂಡಿದ ಮೋಡದಲ್ಲಿ ಅಗ್ನಿಯ ಸೂಕ್ಷ್ಮ ರೂಪವಾದ ಮಿಂಚು, ಸಿಡಿಲು ಅಡಗಿಕೊಂಡಿರುತ್ತವೆ. ಉದಕದೊಳಗಿರುವ ಈ ಅಗ್ನಿಗೆ ಉತ್ಕಟ ಬಯಕೆ ಇದೆ. ಅದೆಂದರೆ ಹೊರಬಂದು ಅಭಿವ್ಯಕ್ತಗೊಳ್ಳಬೇಕು ಎಂಬುದು. ಅಭಿವ್ಯಕ್ತವಾಗುವವರೆಗೆ ಆ ಕಿಚ್ಚು ನೀರಿನಲ್ಲಿ ಗುಪ್ತವಾಗಿ, ಸುಪ್ತವಾಗಿ ಹುದುಗಿಕೊಂಡೇ ಇರುತ್ತದೆ.

3. ಸಮುದ್ರದ ಗರ್ಭದಲ್ಲಿ ಬಡಬಾಗ್ನಿ ಎಂದಿರುತ್ತದೆ ಎಂಬ ನಂಬಿಕೆಯೂ ಇದೆ.

4. ಆಧುನಿಕ ವಿಜ್ಞಾನದ ಪ್ರಕಾರ ನೀರಿನ ಸೂತ್ರ H_2O. H ಎಂದರೆ ಜಲಜನಕ; ಸ್ವತಃ ದಹ್ಯವಾಗುವ ವಸ್ತು. O ಎಂದರೆ ಆಕ್ಸಿಜನ್ ದಹನಾನುಕೂಲಿ. ಎರಡೂ ಸೇರಿ ಬೆಂಕಿಯನ್ನು ಆರಿಸುವ ವಸ್ತು ನೀರು ಆಗುತ್ತದೆ. ನೀರಿನ ಮಧ್ಯೆ ಹೀಗೆ ಬೆಂಕಿ ಹುದುಗಿದೆ.

ಸಸಿಯು ಎಳೆಯದಾಗಿದ್ದರೂ ಅದರ ಒಂದು ಎಲೆಯಿಂದಲೇ ಮುಂದೆ ಯಾವ ರುಚಿಯ ಫಲವನ್ನು ಕೊಡಬಹುದೆಂದು ಊಹಿಸಬಹುದು. ಅಂದರೆ ಫಲದ ರುಚಿಯು ಸಸಿಯೊಳಗೆ ಗುಪ್ತವಾಗಿ ಸುಪ್ತವಾಗಿ ಹುದುಗಿಕೊಂಡಿದೆ. ಕಾಲಾನಂತರದಲ್ಲಿ ಅದು ಪ್ರಕಟಗೊಳ್ಳುತ್ತದೆ.

ಎಳೆಯ ಮೊಗ್ಗಿನಲ್ಲಿ ಸುವಾಸನೆ ಇರದು. ಮೊಗ್ಗು ಬಲಿತಂತೆಲ್ಲ ಒಳಗಿನಿಂದಲೇ ವಿಕಸನಗೊಂಡು ಪರಿಮಳವು ಸೂಸುತ್ತದೆ. ಕಾಲಾನುಕ್ರಮದಲ್ಲಿ ಸುವಾಸನೆ ಬಲಿಯುತ್ತದೆ.

ಅದೇ ರೀತಿ ಕನ್ನೆಯ ಸ್ನೇಹ. ಚಿಕ್ಕ ಮಗುವಿನಲ್ಲಿ ಕಾಮ, ಪ್ರೇಮದ ಯಾವ ಸೋಂಕು ಇರದು. ಅದಕ್ಕೆ ತಾನು ಹೆಣ್ಣು ಅಥವಾ ಗಂಡು ಎಂಬ ಭಾವ ಇರದು. ವಯಸ್ಸು ಬಲಿತಂತೆ ಹೆಣ್ಣು ಗಂಡು ಎಂಬ ಪ್ರಜ್ಞೆ ಮೂಡುತ್ತದೆ. ಹಾಗೆ ದೇವರು ಕನ್ನೆಯೊಳಗಣ ಸ್ನೇಹ (ಕಾಮ)ದಂತೆ ಪ್ರತಿಯೊಬ್ಬನಲ್ಲೂ ಆತ್ಮ ರೂಪದಲ್ಲಿ ಗುಪ್ತ -ಸುಪ್ತವಾಗಿರುವನು. ಸಾಧನೆಯ ಮೂಲಕ ಪ್ರಕಟಗೊಳ್ಳುವನು. ನನ್ನಲ್ಲಿ ದೇವನಿದ್ದಾನೆ ಎಂಬ ಆತ್ಮ ಜಾಗೃತಿ ಮೂಡುವ ಸ್ಥಿತಿಗೆ ಪಿಂಡ ಸ್ಥಲ ಎಂದು ವಚನ ಸಾಹಿತ್ಯಕಾರರು ಕರೆದಿದ್ದಾರೆ.

2. ಎಳೆಯ –ಹಳೆಯ

ಕಾಳಿಯ ಕಂಕಾಳದಿಂದ ಮುನ್ನ,
ತ್ರಿಪುರ ಸಂಹಾರದಿಂದ ಮುನ್ನ,
ಹರಿ ವಿರಿಂಚಿಗಳಿಂದ ಮುನ್ನ,
ಉಮೆಯ ಕಲ್ಯಾಣದಿಂದ ಮುನ್ನ,
ಮುನ್ನ, ಮುನ್ನ, ಮುನ್ನ,

ಅಂದಿಂಗೆಳೆಯ ನೀನು; ಹಳೆಯ ನಾನು,
ಮಹಾದಾನಿ ಲಿಂಗದೇವಾ. ಬ.ವ.ದೀ.02

ಕಾಲ ಮಾನವನ್ನು ಘಟನೆಗಳ ಮೂಲಕ ಅಳೆಯಲು ಯತ್ನಿಸುವುದುಂಟು. ಶಿಕ್ಷಣವಿಲ್ಲದ ವಯೋವೃದ್ಧರು ನಿಮ್ಮ ವಯಸ್ಸೆಷ್ಟು ಎಂದು ಕೇಳಿದಾಗ ಆ ಡೌಗಿ ಬರ ಬಂದಾಗ ನಾನು ಇನ್ನೂ ಪೋಲಕ ತೊಡುತ್ತಿದ್ದೆ ಅಥವಾ ದೇಶಕ್ಕಾಗಿ ಯುದ್ಧ(ಸ್ವಾತಂತ್ರ್ಯ ಹೋರಾಟ) ನಡೆದಾಗ ಎರಡು ಮಕ್ಕಳ ತಾಯಾಗಿದ್ದೆ ಎಂದು ಹೇಳುವುದುಂಟು. ಹಾಗೆಯೇ ಹಿಂದೊಮ್ಮೆ ಕಾಳಿಕಾ ದೇವಿಯು ರಕ್ತ ಬೀಜಾಸುರನನ್ನು ವಧಿ-ಸುವಾಗ ಕಂಕಾಳವೆಂಬ ಆಯುಧವನ್ನು ಧರಿಸಿ ಅವನೊಡನೆ ಸೆಣಸಿದಳು. ಈ ಘಟನೆಗೂ ಮುನ್ನ -

ಇನ್ನೊಂದು ವಿವರ ಹೀಗಿದೆ. ವಾಮನನು ಶಿವಭಕ್ತನಾದ ಬಲಿ ಚಕ್ರವರ್ತಿಯನ್ನು ಪಾತಾಳಕ್ಕೆ ತುಳಿದಾಗ ಭೈರವನು ವಾಮನನ್ನು ವಧಿಸಿದನು. ಅವನ ಬೆನ್ನೆಲುಬ (ಕಂಕಾಳ)ನ್ನು ಶಿವನ ಕೈಯಲ್ಲಿ ಧರಿಸಿದನು. ಈ ಕಥೆ ಸ್ಕಂದ ಪುರಾಣದ ಕಾಳಿಕಾ ಖಂಡದಿಂದ ಬಂದುದರಿಂದ ಇದಕ್ಕೆ ಕಾಳಿಯ ಕಂಕಾಳ ಎಂದು ಬಂದಿರುವ ಸಾಧ್ಯತೆ ಇದೆ ಎಂದು ಕೆಲವರ ಊಹೆ.

ಇನ್ನೊಂದು ಪಾಠಾಂತರದಲ್ಲಿ (ಸಿಂಗಿರಾಜ ಪುರಾಣ, 47) ಕಂಕಣ ಎಂದೂ ಸಹ ಇದೆ. ಈ ಪದದ ಹಿನ್ನೆಲೆಯಲ್ಲಿ, ಕಾಳಿಯನ್ನು ವೀರಭದ್ರನು ವಿವಾಹವಾಗುವ ಮೊದಲು ಎಂದು ಅರ್ಥ ಮಾಡಬಹುದು. ಶಿವನು ತ್ರಿಪುರವನ್ನು ಆಳುತ್ತಿದ್ದ ವೀರ, ವಿದ್ಯುನ್ಮಾಲಿ, ತಾರಕ ಎಂಬ ಮೂವರು ರಾಕ್ಷಸರನ್ನು ಕೊಂದು ಅವರ ಉಪಟಳವನ್ನು ಅಡಗಿಸಿದನು. ಇದಕ್ಕೂ ಮುನ್ನ.....

ಒಮ್ಮೆ ಹರಿ ಮತ್ತು ಬ್ರಹ್ಮರ ನಡುವೆ ಯಾರು ಶ್ರೇಷ್ಠ ಎಂಬ ಅಹಂಭಾವದ ಪ್ರಶ್ನೆ ಎದ್ದಿತು. ಇವರಿಬ್ಬರೂ ವಾದ ವಿವಾದ ಮಾಡುತ್ತಿದ್ದಾಗ ಅವರ ಮಧ್ಯೆ ಜ್ಯೋತಿರ್ಲಿಂಗ ಉದ್ಭವವಾಯಿತಂತೆ. ಅದರ [illegible] ಅಂತ್ಯಗಳನ್ನು ತಿಳಿಯಲು ಹರಿಬ್ರಹ್ಮರು ಅಸಮರ್ಥರಾದಾಗ ಜ್ಯೋತಿರ್ಲಿಂಗದ ವಾಣಿ ಯಾಯಿತು. "ನಿಮ್ಮೆಲ್ಲರನ್ನೂ ಮೀರಿದ ಶಕ್ತಿ ನಾನು" ಎಂಬುದಾಗಿ. ಈ ಘಟನೆ ಸಂಭವಿಸುವ ಮುನ್ನ....

ದಕ್ಷ ಬ್ರಹ್ಮನ ಯಾಗದಲ್ಲಿ ಸತಿದೇವಿ ಅರ್ಥಾತ್ ದಾಕ್ಷಾಯಣಿ ಆತ್ಮಾಹುತಿ ಮಾಡಿಕೊಂಡ ಬಳಿಕ ವಿರಕ್ತಿ ತಾಳಿದ ಶಿವನು ತಪೋಮಗ್ನನಾದಾಗ ಆತನ ಅನುಯಾಯಿಗಳು ಆತನ ಮನಸ್ಸನ್ನು ಬಹಿರ್ಮುಖಿಗೊಳಿಸಲು ತಂತ್ರ ಹೂಡಿದರು ಅಪಾರ ಸುಂದರಿಯಾದ ಪರ್ವತರಾಜನ ಪುತ್ರಿ ಪಾರ್ವತಿಯನ್ನು ಸೇವೆಗೆ ನಿಯೋಜಿಸಲಾಯಿತು. ಫಾಲ್ಗುಣ ಮಾಸದ ಪೌರ್ಣಿಮೆಯಂದು, ಕಣ್ತೆರೆದು ನೋಡಿದ ಶಿವನು ಅಪ್ರತಿಮ ಸುಂದರಿ ಪಾರ್ವತಿಯ ಸೌಂದರ್ಯ ಕಂಡು ಕ್ಷಣಕಾಲ ವಿಚಲಿತನಾದರೂ ತಕ್ಷಣವೇ ಎಚ್ಚೆತ್ತು ಆ ಸ್ಥಳದಿಂದ ಎದ್ದು ಇನ್ನೂ ದಟ್ಟವಾದ ಅರಣ್ಯಕ್ಕೆ ಹೋದನು. ಶಿವನನ್ನು ಒಲಿಸಿ ಕೊಳ್ಳಲಾರದೆ ಹತಾಶಳಾದ ಉಮೆಯು ಕಠಿಣ ತಪಸ್ಸಿನಲ್ಲಿ ತೊಡಗಿದಳು. ಅವಳ ತಪಸ್ಸಿಗೆ ಒಲಿದ ಶಿವನೊಡನೆ ಉಮೆಯ ವಿವಾಹ ನೆರವೇರಿತು. ಇದು ಭಾರತೀಯ ಸಮಾಜದ ಇತಿಹಾಸದಲ್ಲಿ ನಡೆದ ಪುರಾತನ ಘಟನೆ. ಇದಕ್ಕೂ ಮುನ್ನ.........

"ಅಂದಿಂಗೆಳೆಯ ನೀನು ಹಳೆಯ ನಾನು" - ಎಂಬ ವಾಕ್ಯವೇ ಈ ವಚನದಲ್ಲಿ ಮಹತ್ವಪೂರ್ಣ.

1. ಇತಿಹಾಸದಲ್ಲಿ ಗುರುತಿಸಲ್ಪಟ್ಟ ಮೊಟ್ಟ ಮೊದಲ ಅವತಾರ ಪುರುಷ ಶಿವನು. ಆದರೂ ಸೃಷ್ಟಿಕರ್ತನ ದೃಷ್ಟಿಯಿಂದ ಆತನು ಎಳೆಯ. ಇವರೆಲ್ಲರಿಗೆ ಸೃಷ್ಟಿಗೆ ಕಾರಣೀಭೂತನಾದ ದೇವನು ಹಳೆಯ.

2. ಸ್ವಯಂಭು ಸ್ಥಿತಿಯಿಂದ ಸೃಷ್ಟಿಕರ್ತನ ಹಂತಕ್ಕೆ ದೇವರು ಬರುತ್ತಾನೆ. ಸೃಷ್ಟಿಯನ್ನು ಮಾಡುತ್ತಾನೆ. ಪಾಲನೆ ಮಾಡುತ್ತಾನೆ. ನಂತರ ಲಯವನ್ನು ಮಾಡುತ್ತಾನೆ. ಪ್ರತಿಬಾರಿ ಸೃಷ್ಟಿಯಾದಾಗಲೂ ಸೃಷ್ಟಿಕರ್ತನು (Cosmic Soul) ಎಳೆಯನೆ! ಸ್ವಯಂಭು, ನಿಷ್ಕಲ ಪರಶಿವ (Transcendental Soul)ನು ಮಾತ್ರ ಹಳೆಯನು. ಇಲ್ಲಿ "ಹಳೆಯ ನಾನು" ಎಂಬ ಮಾತು ವ್ಯಕ್ತಿ ಬಸವಣ್ಣನವರಿಗೆ ಅನ್ವಯಿಸದೆ ನಿಷ್ಕಲ ಲಿಂಗ ತತ್ವಕ್ಕೆ ಅನ್ವಯಿಸುತ್ತದೆ.

ಅಂಥ ನಿತ್ಯ ಸತ್ಯವಾದ ಪರಮ ಚೈತನ್ಯದ ಅಂಶವೇ ನಾನು. ನನ್ನ ಆದಿ ಈ ದೇಹದ ಹುಟ್ಟಿಗೆ ಅಂತ್ಯವು ಸಾವಿಗೆ ಸಂಬಂಧಿಸಿಲ್ಲ ಎಂದು ಹೇಳಿ ಆತ್ಮನು ವಿಶ್ವಚೈತನ್ಯ ಅವಿನಾಶಿಯಾದ ದೇವನ ಅಂಶ ಎಂಬ ಮಾತು ಪಿಂಡಜ್ಞಾನ ಸ್ಥಲದ ಈ ವಚನದಲ್ಲಿ ಅಭಿವ್ಯಕ್ತವಾಗಿದೆ. ಪಿಂಡ ಸ್ಥಲದಲ್ಲಿ ನಾನು ಯಾರು? ಎಂಬ ಚಿಂತನೆ ಆರಂಭವಾಗಿ ನಾನೆಂದರೆ ಕಣ್ಣು ಕಿವಿ ಮೂಗು ಬಾಯಿ ಕೈ ಕಾಲುಗಳನ್ನು ಹೊಂದಿದ ದೇಹವಲ್ಲ; ಇದನ್ನಾಡಿಸುವ ಆತ್ಮವೇ ನಾನು ಎಂಬ ಅರಿವು ಮೂಡಿದರೆ, ಪಿಂಡ ಜ್ಞಾನ ಸ್ಥಲದಲ್ಲಿ ಈ ಆತ್ಮವು ದೇವನ ಒಂದು ಅಂಶ, ನಿತ್ಯ ಮತ್ತು ಶಾಶ್ವತ ಎಂಬ ಅರಿವು ಮೂಡುತ್ತದೆ. ದೇಹವು ಈ ಜನ್ಮದಲ್ಲಿ ಈಗಿನ ತಾಯಿ ತಂದೆಗಳಿಂದ ಬಂದುದು ಎಳೆಯದು; ಆತ್ಮವೋ ಎಂದಿನಿಂದಲೋ ಜಗದ ತಂದೆಯಾದ

ದೇವನಿಂದ ಬಂದುದು ಹಳೆಯದು. ಇದು ಮಹಾದಾನಿಯಾದ ಲಿಂಗದೇವನ ಕೊಡುಗೆ.

3. ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ
ನಾನು ಜ್ಞಾನವೆಂಬ ವಾಹನವಾಗಿದ್ದೆ ಕಾಣಾ
ಅಯ್ಯಾ, ನೀನು ನಾಟ್ಯಕ್ಕೆ ನಿಂದಲ್ಲಿ
ನಾನು ಚೈತನ್ಯವೆಂಬ ವಾಹನವಾಗಿದ್ದೆ ಕಾಣಾ
ಅಯ್ಯಾ, ನೀನು ಆಕಾರವಾಗಿರ್ದಲ್ಲಿ
ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ
ಅಯ್ಯಾ, ನೀನೆನ್ನ ಭವವ ಕೊಂದಿಹೆನೆಂದು
ಜಂಗಮ ಲಾಂಛನವಾಗಿ ಬಂದಡೆ
ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ, ಲಿಂಗದೇವಾ

- ಬ.ವ.ದೀ. 03

ಸೃಷ್ಟಿಯಾಗುವ ಪೂರ್ವದಲ್ಲಿ ದೇವನು ಸ್ವಯಂಭು ಸ್ಥಿತಿಯಲ್ಲಿ ಅರ್ಥಾತ್ ನಿಷ್ಕಲಲಿಂಗ ಸ್ಥಿತಿಯಲ್ಲಿ ಅನಂತ ಕಾಲ ಇದ್ದನು. ಅಲ್ಲಿ ಕಾಲದ ಲೆಕ್ಕಾಚಾರವಿಲ್ಲ. ಆಗ ಒಂದು ದಿನ ದೇವನಲ್ಲಿ ಒಂದು ಸ್ಫುರಣ (*Intuition*) ವಾಯಿತು. ಅದುವೇ ಜ್ಞಾನ ಶಕ್ತಿಯ ಆವಿರ್ಭಾವ. ಇನ್ನೂ ಸೃಷ್ಟಿಕರ್ತನಾಗದ ದೇವನು ನಿರಾಕಾರನು, ನಿರ್ಗುಣನೂ ಆಗಿದ್ದಾಗ ಉದಿಸಿದ, ಅಭಿವ್ಯಕ್ತಗೊಂಡ ಈ ಚಿಚ್ಛಕ್ತಿಯ ಉದಯ ಮೊದಲನೆಯ ಹಂತ. ನಂತರ ದೇವನು ನಾಟ್ಯಕ್ಕೆ ನಿಂತ. ಅಂದರೆ ಸೃಷ್ಟಿಯು ರೂಪುಗೊಳ್ಳುವ ಕ್ರಿಯೆ ನಡೆಯಿತು. ಆಗ ದೇವನಲ್ಲಿ ಉದಿಸಿತು ಚೈತನ್ಯ ಶಕ್ತಿ. ತದನಂತರ ಸೃಷ್ಟಿಯು ಆಕಾರ ತಳೆಯಿತು. ಸೃಷ್ಟಿಯಲಿ ಜಡವಾದ, ಪಂಚಭೂತಗಳಿಂದ ಆಗಿರುವ ಅಚರ ವಿಭಾಗ, ಜೀವಾತ್ಮರುಗಳ ಸೃಷ್ಟಿಯಾದಾಗ ಅವರುಗಳ ಉದ್ಧಾರಕ್ಕಾಗಿ ಧರ್ಮ ವೃಷಭದ ಅಗತ್ಯ ಬೀಳುತ್ತದೆ.

"ವೃಷಭ" - ಧರ್ಮದ ಸಂಕೇತ. ಶಿವನನ್ನು ದೇವರ ಸಂಕೇತ (*Symbol*) ಎಂದು ಭಾವಿಸಿದರೆ ದೇವರಿಗೆ ವಾಹನವಾಗುವುದು ಧರ್ಮ. ಇನ್ನೊಂದು ಅರ್ಥವನ್ನು ಹೀಗೆ ಮಾಡಬಹುದು. ಮೊದಲ ಹಂತದಲ್ಲಿ ದೇವರು ನಿರಾಕಾರ ಸ್ಥಿತಿಯಲ್ಲಿದ್ದಾಗ ಅವನಲ್ಲಿ ಅಂತರ್ಗತವಾಗಿದ್ದ ಶಕ್ತಿ (*Cosmic-staic Energy*) ಜ್ಞಾನ ಶಕ್ತಿಯಾಗಿ ಸ್ಫುರಣಗೊಂಡಿತು. ನಂತರ ಸೃಷ್ಟಿ ಮಾಡಲು ತೊಡಗಿದಾಗ ಶಕ್ತಿಯು ಚೈತನ್ಯ (*Dynamic*) ಶಕ್ತಿಯಾಗಿ ವಿಕಸನಗೊಂಡಿತು.

ಸೃಷ್ಟಿಯು ಆಕಾರ ತಳೆದು, ಜೀವಾತ್ಮರುಗಳೂ ಮೈದಳೆದಾಗ ಆಗ ದೇವರು ಯೋಗಿರಾಜ ಶಿವನೆಂಬ ಮಹಾಗುರುವಾಗಿ ಲೋಕೋದ್ಧಾರಕ್ಕೆ ನಿಂತನು. ಆಗ ಶಕ್ತಿ ತತ್ವವು ಧರ್ಮ ವೃಷಭವಾಗಿ ಕಾರ್ಯ ಮಾಡತೊಡಗಿತು. ಭಕ್ತನ ಭವವ ಕಳೆಯಲೆಂದು ದೇವನು ಜಂಗಮ ಲಾಂಛನಧಾರಿಯಾಗಿ ಬಂದಾಗ ಶಕ್ತಿ ತತ್ವವು (ಭಕ್ತನೆಂಬ) ವಾಹನವಾಗಿ ಕಾರ್ಯ ಮಾಡುತ್ತದೆ.

ಲಿಂಗಾಯತ ಧರ್ಮದ ಶೂನ್ಯ ಸಿದ್ಧಾಂತದ ಸಾರ ಈ ವಚನದಲ್ಲಿದೆ. ಲಿಂಗ ಎಂದರೆ ಪರಮಾತ್ಮನು ತನ್ನ ಲೀಲಾ ವಿನೋದಕ್ಕಾಗಿ ಜಗತ್ತನ್ನು ಸೃಷ್ಟಿಸುವನು. ಅವನಲ್ಲಿರುವ ಶಕ್ತಿಯು ಅಂಗ ಅರ್ಥಾತ್ ಜೀವಾತ್ಮವಾಗಿ ಅವತರಣವಾಗುತ್ತದೆ. ಮೂಲ ಚೈತನ್ಯದಿಂದ 36 ಹಂತಗಳಲ್ಲಿ ಅವತರಣವಾಗುವ ಜೀವಾತ್ಮವು ತನ್ನ ಮೂಲ ನೆಲೆಯನ್ನು ಸೇರಲು ಹಂಬಲಿಸಿ ಸಾಗುವ ದಾರಿಯಲ್ಲಿ ಜಂಗಮನು ದೇವನ ಪ್ರತಿನಿಧಿಯಾಗಿ ಬಂದು ಭಕ್ತನನ್ನು ಶುದ್ಧೀಕರಿಸಿ, ದೈವೀಕರಿಸಿ ಲಿಂಗದೇವನೊಡನೆ ಬೆರೆಯಲು ಸಹಕರಿಸುವನು.

ಇಲ್ಲಿ ದಾರ್ಶನಿಕ ಚೇತನರಾದ ಬಸವಣ್ಣನವರು "ನಾನು" ಎಂದು ಹೇಳುವಲ್ಲಿ ವ್ಯಕ್ತಿ ಬಸವಣ್ಣನವರನ್ನು ಉದ್ದೇಶಿಸಿ ಹೇಳದೆ ಶಕ್ತಿ ತತ್ವದ ವಿಕಸನವನ್ನು ಕುರಿತು ಹೇಳುವರೆಂಬುದು ಗಮನಾರ್ಹ!

4. ಅಯ್ಯಾ, ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ! ನಿಮ್ಮ ಪ್ರಸಾದಕ್ಕಲ್ಲದೆ ಬಯ್ದಿರೆಯೆನಯ್ಯಾ,
ಪ್ರಥಮ ಭವಾಂತರದಲ್ಲಿ
ಶಿಲಾದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ,
ಎರಡನೆಯ ಭವಾಂತರದಲ್ಲಿ

ಸ್ಕಂದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಕಾರುಣ್ಯವ ಮಾಡಿ(ರಿಸಿ) ಕೊಂಡಿರ್ದಿರಯ್ಯಾ,
ಮೂರನೆಯ ಭವಾಂತರದಲ್ಲಿ
ನೀಲಲೋಹಿತನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿರ್ದಿರಯ್ಯಾ,
ನಾಲ್ಕನೆಯ ಭವಾಂತರದಲ್ಲಿ
ಮನೋಹರನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು
ನಿಮ್ಮ ಮನಃಪ್ರೇರಕನಾಗಲೆಂದಿರಿಸಿಕೊಂಡಿರ್ದಿರಯ್ಯಾ,
ಐದನೆಯ ಭವಾಂತರದಲ್ಲಿ
ಕಾಲಲೋಚನನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು
ಸರ್ವಕಾಲ ಸಂಹಾರವ ಮಾಡಲೆಂದಿರಿಸಿಕೊಂಡಿರ್ದಿರಯ್ಯಾ
ಆರನೆಯ ಭವಾಂತರದಲ್ಲಿ
ವೃಷಭನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮಗೇರಲು ವಾಹನವಾಗಲೆಂದಿರಿಸಿಕೊಂಡಿರ್ದಿರಯ್ಯಾ,
ಏಳನೆಯ ಭವಾಂತರದಲ್ಲಿ
ಬಸವನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿಕೊಂಡಿರ್ದಿರಯ್ಯಾ
ಇದು ಕಾರಣ ಲಿಂಗದೇವಾ
ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ.

ಈ ವಚನದ ಅಂತರಾರ್ಥದ ಬಗ್ಗೆ ಬಹಳಷ್ಟು ಜನರು ಬಹಳಷ್ಟು ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ. ಧರ್ಮಪಿತ ಬಸವಣ್ಣನವರು ಹಿಂದೆ ಆರು ಅವತಾರಗಳನ್ನು ಎತ್ತಿದ್ದಾರೆ. 12ನೆಯ ಶತಮಾನದ್ದು 7ನೆಯ ಅವತಾರ ಎಂದು ಕೆಲವರ ಊಹೆ. ತಮ್ಮ ಹಿಂದಿನ ಜನ್ಮಗಳನ್ನು ಕುರಿತು ಹೇಳಿದ್ದಾರೆ ಎಂದು ಕೆಲವರ ತರ್ಕ.

ಭಾರತ ದೇಶದಲ್ಲಿ ಶಿವ ಸಂಸ್ಕೃತಿ ಬಹಳ ಪುರಾತನ. ಹರ -ಅಪ್ಪ, ಮೊಹೆಂಜೋದಾರೋ ನಾಗರೀಕತೆಯ ವೇಳೆಗೆ ಮುನ್ನವೇ ಶಿವನು ಪ್ರಭಾವಶಾಲಿ ಗುರುವಾಗಿದ್ದ, ಆರಾಧ್ಯ ದೈವವಾಗಿದ್ದ, ಏಕಮೇವಾರಾಧ್ಯನಾಗಿದ್ದ ಶಿವನ ಪರಂಪರೆಯನ್ನು ಕೆಲವು ಮುಖ್ಯ ವ್ಯಕ್ತಿಗಳು ಉಳಿಸಿಕೊಂಡು, ಬೆಳೆಸಿಕೊಂಡು ಬಂದರು. ಪ್ರಥಮ ಗುರು ಶಿವ ಓಂಕಾರ ದ್ರಷ್ಟಾರ ಮಂತ್ರ ಪುರುಷ. ವಾಮದೇವ ಋಷಿ ಓಂ ನಮ: ಶಿವಾಯ ಮಂತ್ರದ ದ್ರಷ್ಟಾರ. ಅಂತಹ ಶಿವ ಪೀಠದ ಅಧಿಕಾರಿಗಳಾಗಿ ಅನೇಕರು ಆಗಿ ಹೋಗಿದ್ದಾರೆ. ಪ್ರಭುದೇವರ ವಚನ ನೋಡಿರಿ.

ರುದ್ರನೆಂಬಾತನೊಬ್ಬ ಗಣೇಶ್ವರನು, ಭದ್ರನೆಂಬಾತನೊಬ್ಬ ಗಣೇಶ್ವರನು
ಶಂಕರನೆಂಬಾತನೊಬ್ಬ ಗಣೇಶ್ವರನು, ಶಶಿಧರನೆಂಬಾತನೊಬ್ಬ ಗಣೇಶ್ವರನು
ಪೃಥ್ವಿಯೆ ಪೀಠ, ಆಕಾಶವೆ ಲಿಂಗ - ಅಂತಹನೊಬ್ಬ ಗಣೇಶ್ವರನು
ಬಲ್ಲಾಳನ ವಧುವ ಬೇಡಿದಾತನೊಬ್ಬ ಗಣೇಶ್ವರನು
ಸಿರಿಯಾಳನ ಮಗನ ಬೇಡಿದಾತನೊಬ್ಬ ಗಣೇಶ್ವರನು
ಕಾಮದಹನವ ಮಾಡಿದಾತನೊಬ್ಬ ಗಣೇಶ್ವರನು
ಬ್ರಹ್ಮಕಪಾಲ ವಿಷ್ಣುಕಂಕಾಳವನಿಕ್ಕಿ ಆಡುವಲ್ಲಿ
ನೀಲಕಂಠನೆಂಬಾತನೊಬ್ಬ ಗಣೇಶ್ವರನು
ಇವರೆಲ್ಲರು ನಮ್ಮ ಗುಹೇಶ್ವರಲಿಂಗದಲ್ಲಿ ಅಡಗಿಪ್ಪರು.

ಹೀಗೆ ಶಂಕರ, ಶಶಿಧರ, ನೀಲಕಂಠ ಮುಂತಾದ ಅನೇಕರು ಶಿವ ಪೀಠದ ಅಧಿಕಾರಿಗಳು. ಅವರ ನಿಷ್ಠಾವಂತ ಸೇವಕರು, ಭೃತ್ಯರು ಶಿವಗಣಗಳಾದ ನೀಲಲೋಹಿತ, ಮನೋಹರ, ಕಾಲಲೋಚನ, ವೃಷಭ ಮುಂತಾದವರು. ಹೀಗೆ ಮುಂದುವರಿದ ಶಿವ ಪರಂಪರೆಯಲ್ಲಿ ಬಸವಣ್ಣನವರು ತಾವೂ ಒಬ್ಬ ಗಣೇಶ್ವರ ಎಂಬುದನ್ನು ಗುರುತಿಸಿಕೊಳ್ಳುತ್ತಾರೆ. ಈ ವಚನವು ಗುರು ಬಸವಣ್ಣನವರು ಹೊಸ ಧರ್ಮ ದ್ರಷ್ಟಾರರಾಗುವ ಪೂರ್ವದಲ್ಲಿ ಎಂತಹ ಉತ್ಕಟ ಶಿವಭಕ್ತಿಯನ್ನು ಹೊಂದಿದ್ದರೆಂಬುದನ್ನು ಹೇಳುವುದಲ್ಲದೆ ಶಿವನು ಒಬ್ಬನೇ ಅಲ್ಲ ಆ ಪರಂಪರೆಯಲ್ಲಿ ವಿವಿಧ ಹೆಸರಿನ ಅನೇಕ ಶಿವರು ಆಗಿ ಹೋಗಿದ್ದರೆಂಬ ಐತಿಹಾಸಿಕ ಸತ್ಯವನ್ನು

ನುಡಿಯುತ್ತದೆ.

ಈ ಜನ್ಮಾಂತರಗಳು ಸಾಮಾನ್ಯರ ಜನ್ಮಗಳಂತೆ ಪಾಪ -ಪುಣ್ಯಗಳ ಮೇಲೆ ಆಧಾರಿತವಾಗದೆ ದೇವರ ವಿಶೇಷ ಅನುಗ್ರಹಕ್ಕೆ ಪಾತ್ರವಾದವು ಎಂಬುದನ್ನು ಪ್ರಸ್ತುತ ವಚನವು ನಿರೂಪಿಸುತ್ತದೆ.

5. ಮಹಾಮಹಿಮ ಚನ್ನಬಸವಣ್ಣ

ಅಯ್ಯಾ, ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ
ನೆನೆನೆನೆದು ಸುಖಿಯಾಗಿ ಆನು ಬದುಕಿದೆನಯ್ಯಾ
ಅದೇನು ಕಾರಣ ತಂದೆ ಎಂದರಿದೆನಯ್ಯಾ
ಎನ್ನ ಕಾರಣ ತಂದೆ ಎಂದರಿದೆನಯ್ಯಾ
ಅರಿದರಿದು ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು
ಕಣ್ದೆರೆದೆನಯ್ಯಾ ಲಿಂಗದೇವಾ. ಬ.ವ.ದಿ.4

ಈ ವಚನದಲ್ಲಿ ಧರ್ಮಪಿತ ಬಸವಣ್ಣನವರು ಯಾವ ಶರಣರ ಹೆಸರನ್ನು ಹೇಳಿಲ್ಲ. ಅವರಿಗೇ ಅನ್ವಯಿಸಿ ಹೇಳಿಕೊಂಡರೋ ಎಂಬ ಸಂದೇಹ ಬರುತ್ತದೆ. ಜೀವನದಲ್ಲಿ ಅಪೂರ್ವವಾದುದನ್ನು ಸಾಧಿಸಿದ ಸಂತೃಪ್ತಿಯುಂಟಾದಾಗ ಮೊದಲು ನನ್ನನ್ನು ಏಕೆ ಹುಟ್ಟಿಸಿದೆ ತಂದೆ; ಇಹಲೋಕ ದುಃಖಿಯ, ಪರಲೋಕ ದೂರನ ಎಂದು ಹಲುಬಿದವರು ಈ ವಚನದಲ್ಲಿ ದೇವಾ, ನಿಮ್ಮ ಪ್ರೀತಿಯ ಕಂದನಾದ ನನ್ನನ್ನು ಈ ಮರ್ತ್ಯಕ್ಕೆ ತಂದೆ. ಇದನ್ನು ನೆನಪಿಸಿಕೊಂಡಾಗ ಅಪಾರ ಆನಂದವಾಗುತ್ತದೆ. ನನ್ನ ಉದ್ಧಾರಕ್ಕಾಗಿಯೇ ನನ್ನನ್ನು ಹುಟ್ಟಿಸಿದೆ ಎಂದು ಹರ್ಷಿಸುತ್ತೇನೆ. ಆದರೆ ಮುಂದಿನ ವಾಕ್ಯದಲ್ಲಿ ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು ಎಂಬ ಮಾತು ಧರ್ಮಪಿತರು ಬೇರೆಯವರನ್ನು ಕುರಿತು ಹೇಳಿರಬಹುದು ಎಂಬ ಸುಳಿವು ನೀಡುತ್ತದೆ. ಇನ್ನು ಸಾಮೂಹಿಕ ವಾಚಕವಾಗಿಯೂ ಶರಣರು ಎಂದು ಹೇಳಿಲ್ಲ. ಆದ್ದರಿಂದ ಯಾರೋ ಒಬ್ಬರನ್ನೇ ಕುರಿತು ಸಂತೋಷದಿಂದ ಮಾತನಾಡಿದ್ದಾರೆ ಎನ್ನಿಸುವುದು. ಶರಣ ಚನ್ನಬಸವಣ್ಣನನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಂಡು ಈ ವಚನವನ್ನು ಪುನರ್‌ರಚಿಸಿದರೆ ಈ ವಚನಕ್ಕೆ ಬಹಳಷ್ಟು ಮೌಲ್ಯ ಬರುವುದು.

ಅಯ್ಯಾ, ನಿಮ್ಮ ಶರಣ(ಚನ್ನಬಸವಣ್ಣ)ನ ಮರ್ತ್ಯಕ್ಕೆ ತಂದೆಯಾಗಿ
ನೆನೆನೆನೆದು ಸುಖಿಯಾಗಿ ಆನು ಬದುಕಿದೆನಯ್ಯಾ
ಅದೇನು ಕಾರಣ ತಂದೆ ಎಂದರಿದೆನಯ್ಯ
ಎನ್ನ ಕಾರಣ ತಂದೆ ಎಂದರಿದೆನಯ್ಯಾ
ಅರಿದರಿದು ನಿಮ್ಮ ಶರಣ(ಚನ್ನಬಸವಣ್ಣ)ನು
ಆಚರಿಸುವ ಆಚರಣೆಯ ಕಂಡು
ಕಣ್ದೆರೆದೆನಯ್ಯಾ ಲಿಂಗದೇವಾ !

ಮನೆಗೆ ಬೆಳಕಾಗುವ ಸೋದರಳಿಯ ಸಿಕ್ಕನೆಂದಲ್ಲ ಮನಕ್ಕೆ ಮುದ ನೀಡುವ ಸುಜ್ಞಾನ ಮೂರ್ತಿ ದೊರೆತನೆಂದು ಬಸವಣ್ಣನವರಿಗೆ ಅಪಾರ ಆನಂದ. ವಯಸ್ಸಿನಲ್ಲಿ ಸಣ್ಣವನಾದರೂ ಅರಿವು - ಅನುಭಾವ -ದಲ್ಲಿ ನಿಸ್ಸೀಮರಾದ ಚನ್ನಬಸವಣ್ಣನವರನ್ನು ದೇವರು ಹುಟ್ಟಿಸಿರುವುದು ನನ್ನ ಒಳ್ಳಿತಿಗಾಗಿಯೆ! ಎಂಥಾ ಉಪಕಾರವನ್ನು ದೇವನು ಮಾಡಿದ್ದಾನೆ. ನನಗಾಗಿಯೇ ಹುಟ್ಟಿಬಂದಂತೆ ತೋರುತ್ತದೆ. ಸಮ್ಯಕ್ ಜ್ಞಾನಿ ಚನ್ನಬಸವಣ್ಣನ ನಡೆ -ನುಡಿ, ಆಚರಣೆ ಅಪಾರ ಮಾರ್ಗದರ್ಶಕವಾಗಿವೆ. ವಯಸ್ಸಿಗೆ ಮೀರಿದ ಅವಿರಳ ಜ್ಞಾನಿಯ ಆಚರಣೆ ಕಂಡು ನನಗೆ ಆನಂದದೊಡನೆ ಆಶ್ಚರ್ಯವೂ ಆಗುತ್ತಿದೆ ಎಂದು ಈ ವಚನದಲ್ಲಿ ಧರ್ಮಪಿತ ಬಸವಣ್ಣನವರು ಉದ್ಗರಿಸುತ್ತಿದ್ದಾರೇನೋ ಎನ್ನಿಸುತ್ತದೆ.

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

ಸರ್ವ ಧರ್ಮ ಬಂಧುಗಳಿಗೆ ಪ್ರಣಾಮಗಳು.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯಾ.
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯಾ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯ.

ಈ ರೀತಿ ಶ್ರೇಷ್ಠ ಸಮಾಜ ಸುಧಾರಕರು, ಲಿಂಗಾಯತ ಧರ್ಮ ಸಂಸ್ಥಾಪಕರು ಆದ 12ನೇ ಶತಮಾನದ ಗುರು ಬಸವಣ್ಣನವರು ಹೇಳುತ್ತಾರೆ.

ಮಾನವ ಸಮಾಜದಲ್ಲಿ ಹಲವಾರು ಬಗೆಯ ವರ್ಗೀಕರಣವನ್ನು, ಭೇದವನ್ನು ಕಲ್ಪಿಸಿಕೊಳ್ಳಲಾಗಿದೆ. ಜಾತಿ, ವರ್ಗ, ಬಣ್ಣ, ಜನಾಂಗ ಮತ್ತು ಲಿಂಗ- ಇವುಗಳ ಆಧಾರದ ಮೇಲೆ ಮೇಲು ಕೀಳು ಎಂಬ ವಿಂಗಡಣೆಯನ್ನು ಮಾಡಲಾಗಿದೆ. ಸೃಷ್ಟಿಕರ್ತನಾದ ದೇವರು ಎಲ್ಲ ಮಾನವರನ್ನು ಒಂದೇ ರೀತಿಯಲ್ಲಿ ಸೃಷ್ಟಿಸಿದ್ದಾನೆ. ಇದನ್ನರಿತು, ಇವನು ಯಾರು ? ಎಂದು ಯಾರಲ್ಲಿಯೂ ಭೇದವನ್ನೆಣಿಸದೆ, ಇವರು ನಮ್ಮವರು ಎಂಬ ಆದರ ಭಾವದಿಂದ ಕಾಣುತ್ತಾರೋ ಅವರು ದೇವರ ಮಕ್ಕಳು ಆಗುವರು; ಈ ಜಗತ್ತು ಎಂಬ ಮಹಾಮನೆಯ ಮಗ ಎನ್ನಿಸಿಕೊಳ್ಳುವರು. ಹೀಗೆ ಶ್ರೇಷ್ಠ ಪ್ರವಾದಿ ಬಸವಣ್ಣನವರು ದೇವನ ಪಿತೃತ್ವವನ್ನು ಮತ್ತು ಮಾನವರ ಭ್ರಾತೃತ್ವವನ್ನು ಸಾರುತ್ತಾರೆ.

ಸರ್ವ ಧರ್ಮ ಸಂಸತ್, ಎಲ್ಲ ಧರ್ಮಗಳ ಮಧ್ಯೆ ಧಾರ್ಮಿಕ ಸಾಮರಸ್ಯವನ್ನು, ಸಾಮಾಜಿಕ ಶಾಂತಿಯನ್ನು ಸ್ಥಾಪಿಸಲೋಸುಗ ಹುಟ್ಟಿಕೊಂಡ ಸಂಸ್ಥೆಯಾಗಿದ್ದು, ವಿವಿಧ ಧರ್ಮಗಳವರಲ್ಲಿ ಪರಸ್ಪರ ಸೌಹಾರ್ದ ಮನೋಭಾವ ಹುಟ್ಟಿಸುವ ಸಲುವಾಗಿ ಈ ಚಿಂತನ ಗೋಷ್ಠಿಯನ್ನು ಏರ್ಪಡಿಸಿದೆ. ವಿಶ್ವ ಭ್ರಾತೃತ್ವದ ಸಂದೇಶವನ್ನು ಸಾರುವ ಈ ಸಂಸ್ಥೆಯು ಇಂದಿನ ಸಮಾಜವನ್ನು, ರಾಷ್ಟ್ರವನ್ನು ಮತ್ತು ಜಗತ್ತನ್ನು ಪೀಡಿಸುತ್ತಿರುವ 7 ಸಾಮಾಜಿಕ - ಧಾರ್ಮಿಕ ಸಮಸ್ಯೆಗಳನ್ನು ಕುರಿತು ಗಂಭೀರವಾಗಿ ಚಿಂತನೆ ಮಾಡಲು ಮತ್ತು ಪರಿಹಾರವನ್ನು ಸಹ ಹುಡುಕಲು ಈ ಮೂಲಕ ಪ್ರಯತ್ನಿಸುತ್ತಿದೆ.

ಜಗತ್ತಿನಲ್ಲಿ ಕೊಡಲ್ಪಟ್ಟಿರುವ ವಿವಿಧ ಧರ್ಮಗಳು ವ್ಯಕ್ತಿ ಮತ್ತು ಸಮಾಜವನ್ನು ಮೇಲೆತ್ತಲು ಸೃಷ್ಟಿಕರ್ತನಾದ ದೇವರು ಪ್ರವಾದಿಗಳು, ಸಂತರ ಮೂಲಕ ಕೊಡಲ್ಪಟ್ಟ ಕೊಡುಗೆಗಳಾಗಿವೆ. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಅಲ್ಲಿಯ ಪರಿಸರಕ್ಕೆ ಅನುಗುಣವಾಗಿ ದೇವನು ತನ್ನ ದಿವ್ಯ ಸಂದೇಶವನ್ನು ಮಹಾತ್ಮರ ಮೂಲಕ ಜಗತ್ತಿನ ಮಾನವರ ಬಗ್ಗೆ ಅಪಾರವಾದ ಕರುಣೆ ಇಟ್ಟು ನೀಡಿದ್ದಾನೆ. ಪ್ರತಿ ಧರ್ಮಕ್ಕೂ ಧಾರ್ಮಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳ ಮೂಲಕ ಮಾನವ ಸಮಾಜವನ್ನು ಉತ್ಥಾನಿಸುವ ಕಳಕಳಿ ಇದೆ. ದೇವರಿಂದ ಕೊಡಲ್ಪಟ್ಟ ಸಂದೇಶಗಳು ಆರಂಭದಲ್ಲಿ ಪರಿಶುದ್ಧವಾಗಿದ್ದರೂ ಕಾಲಾನಂತರದಲ್ಲಿ ಕೆಲವೊಂದು ಕಲುಷಿತಗೊಳಿಸಲ್ಪಟ್ಟಿರಲೂ ಸಾಕು. ಕಾಲಮಾನಕ್ಕನುಸಾರವಾಗಿ ಬದಲಾದ ಪರಿಸರಕ್ಕೆ ಅನುಗುಣವಾಗಿ ಕೆಲವೊಂದು ನಂಬಿಕೆ ಮತ್ತು ಆಚರಣೆಗಳು ಅರ್ಥವನ್ನು ಕಳೆದುಕೊಂಡಿರಲೂ ಬಹುದು. ಅಂಥ ಸನ್ನಿವೇಶದಲ್ಲಿ ಮಾನವ ಸಮಾಜದ ಹಿತದೃಷ್ಟಿಯಿಂದ ಕೆಲವೊಂದು ನಂಬಿಕೆ ಮತ್ತು ಆಚರಣೆಗಳಲ್ಲಿ ಸುಧಾರಣೆ ಮತ್ತು ತಿದ್ದುಪಡಿ ಅಗತ್ಯವೆನಿಸುತ್ತದೆ.

ಸರ್ವ ಧರ್ಮ ಸಂಸತ್ ಅಂಥ ಏಳು ವಿಷಯಗಳನ್ನು ತೆಗೆದುಕೊಂಡು ಚಿಂತನೆ ಮಾಡುತ್ತಿದೆಯಲ್ಲದೆ, ಈ ಏಳು ಸಾಮಾಜಿಕ - ಧಾರ್ಮಿಕ ಪೀಡೆಗಳಿಗೆ ಪರಿಹಾರ ಹುಡುಕಲು ಸಹ ಪ್ರಯತ್ನಿಸುತ್ತಿದೆ.

1. ಜಾತಿ ಮುಕ್ತ ಸಮಾಜ

ಮಾನವ ಸಮಾಜದಲ್ಲಿ ಜಾತಿ, ವರ್ಗ, ಜನಾಂಗ, ಬಣ್ಣ ಇತ್ಯಾದಿಗಳ ಆಧಾರದ ಮೇಲೆ ಹುಟ್ಟಿನಿಂದಲೇ ವ್ಯಕ್ತಿಗಳನ್ನು ಶ್ರೇಷ್ಠ ಹಾಗೂ ಕನಿಷ್ಠ ಎಂದು ವರ್ಗೀಕರಿಸುವ, ವಿಭಜಿಸುವ ಕೆಲಸ ನಡೆಯುತ್ತದೆ. ಅದರಲ್ಲಿಯೂ ಭಾರತ ದೇಶದಲ್ಲಿ ಜಾತಿ ಪದ್ಧತಿ ಅದರ ವಿಷ ಫಲವಾದ ಅಸ್ಪೃಶ್ಯತೆಯ ಆಚರಣೆ ಒಂದು ಮಹತ್ತರ ಶಾಪವಾಗಿದೆ. ಈ ಸಾಮಾಜಿಕ ಪದ್ಧತಿಯು ಮನುಷ್ಯ ಮನುಷ್ಯರ ನಡುವೆ, ಸಮುದಾಯಗಳ ಮಧ್ಯೆ ವಿಭಜನೆಯ ಗೋಡೆಗಳನ್ನು ನಿರ್ಮಿಸಿದೆ. ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ಆಚರಣೆಯು ಭಾರತ ದೇಶದ ಪ್ರಗತಿಗೆ ಮಾರಕವಾಗಿದೆ ಎಂದರೆ ಉತ್ಪ್ರೇಕ್ಷೆಯಾಗದು. ಧರ್ಮ ಶಾಸ್ತ್ರಗಳಲ್ಲಿ ನಂಬಿಕೆ ಇಟ್ಟ ಸಾಮಾನ್ಯ ಮನುಷ್ಯನು ಜಾತಿ ವ್ಯವಸ್ಥೆಯು ದೇವರಿಂದ ನಿರ್ಮಾಣವಾಗಿರುವುದಾಗಿಯೂ ಇದು ಅಪರಿವರ್ತನೀಯ ಎಂದೇ ನಂಬಿರುತ್ತಾನೆ. ಇದನ್ನು ಉಲ್ಲಂಘಿಸುವುದು ದೇವ ವಿರೋಧಿ ಕಾರ್ಯ ಎಂದು ಭಾವಿಸುತ್ತಾನೆ. ನಮ್ಮ ಸಂವಿಧಾನವು ಇದನ್ನು ಟೀಕಿಸಿದ್ದರೂ ಸಹ ಜನ ಸಾಮಾನ್ಯರಲ್ಲಿ ಮಾತ್ರ ಜಾತಿ ಪದ್ಧತಿ ದೇವ ನಿರ್ಮಿತ ಎಂಬ ನಂಬಿಕೆ ತುಂಬಿದೆ.

ಆದ್ದರಿಂದ ಇಂದು ಪ್ರಜ್ಞಾವಂತರು ಜನ ಜಾಗೃತಿ ಅಭಿಯಾನ ಹಾಕಿಕೊಂಡು ಜಾತಿ ಪದ್ಧತಿ ದೇವ ನಿರ್ಮಿತವಲ್ಲ ಮಾನವ ಕಲ್ಪಿತ ಎಂಬುದನ್ನು ಶ್ರೀ ಸಾಮಾನ್ಯರಿಗೆ ಮನಗಾಣಿಸಿಕೊಡಬೇಕು. ಶ್ರೇಷ್ಠ ಸಮಾಜ ಸುಧಾರಕರಾದ 12ನೆಯ ಶತಮಾನದ ಬಸವಣ್ಣನವರು ಹೇಳುತ್ತಾರೆ:

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ
ಫಲವೊಂದೆ ಷಡುದರ್ಶನ ಮುಕ್ತಿಗೆ
ನಿಲುವೊಂದೆ ಲಿಂಗದೇವಾ ನಿಮ್ಮನರಿದವಂಗೆ

ಅಸ್ಪೃಶ್ಯತೆಯ ಆಚರಣೆ ಅತ್ಯಂತ ಅಮಾನವೀಯ ಮತ್ತು ಅಪಮಾನಕರ. ಮಾನವ ಕುಲಕ್ಕೆ ಅವಹೇಳನಕಾರಿ. ಆದ್ದರಿಂದ ಇವೆರಡರ ವಿರುದ್ಧ ಹೋರಾಟ, ಜನ ಜಾಗೃತಿಯು ಅತ್ಯಗತ್ಯವಾಗಿದೆ.

2. ನಾರಿ ಉತ್ಪೀಡನ ಮುಕ್ತ ಸಮಾಜ

ಮಹಿಳೆ ಪುರುಷ ಜೀವನದ ಅವಿಭಾಜ್ಯ ಅಂಗ, ಸೃಷ್ಟಿಯ ಅರ್ಧಭಾಗ. ಆದರೂ ಮಹಿಳೆಯನ್ನು ಎರಡನೆಯ ದರ್ಜೆಯ ನಾಗರಿಕಳಂತೆ ನೋಡಲಾಗುತ್ತಿದೆ. ಅನೇಕ ಕಟ್ಟುಪಾಡು, ನಿಯಮ, ಬಂಧನಗಳನ್ನು ಧರ್ಮದ ಹೆಸರಿನಲ್ಲಿ ಹೇರಲಾಗಿದೆ. ವರದಕ್ಷಿಣೆ, ಸ್ತ್ರೀ ದಹನ, ಕನ್ಯಾ ಭ್ರೂಣ ಹತ್ಯೆ, ಸತಿ ಸಹಗಮನ, ಬಹು ಪತ್ನಿತ್ವ, ವಿಧವಾ ವಿವಾಹ ನಿಷೇಧ - ಇಂತಹ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿವೆ. 12ನೆಯ ಶತಮಾನದಲ್ಲಿ ಶ್ರೇಷ್ಠ ಸಮಾಜ ಸುಧಾರಕರಾದ ಬಸವಣ್ಣನವರು ಮಹಿಳೆಯರಿಗೆ ಪುರುಷರಷ್ಟೆ ಸಮಾನವಾದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಹಕ್ಕುಗಳನ್ನು ನೀಡಿದರು. ಅವರು ನಿರ್ಮಿಸಿದ ಅನುಭವ ಮಂಟಪದಲ್ಲಿ ಮಹಿಳೆಯರಿಗೆ ವಿಚಾರ, ವಾಕ್, ಆಚಾರ ಸ್ವಾತಂತ್ರ್ಯ ಮತ್ತು ಸಮಾನ ಸ್ಥಾನವನ್ನು ನೀಡಲಾಯಿತು.

ಆದರೆ ಕಾಲಾನಂತರದಲ್ಲಿ ಪುನಃ ಪುರುಷರೇ ಅವಕಾಶಗಳನ್ನು ಪಡೆದುಕೊಂಡರಲ್ಲದೆ ಮಹಿಳೆಯರಿಗೆ ಗುರು ಸ್ಥಾನವನ್ನು ಕೊಡಲಿಲ್ಲ. ಇದನ್ನು ಪ್ರತಿಭಟಿಸಿ ನಾನು 1970ರಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಧಾರ್ಮಿಕ ಪೀಠವನ್ನು ಮಹಿಳೆಯರಿಗಾಗಿಯೇ ಮಾಡಿದೆ. ಮಹಿಳೆಯರ ಶೋಷಣೆ ಕಡಿಮೆಯಾಗಬೇಕೆಂದಿದ್ದರೆ ಅವರಿಗೆ ಶಿಕ್ಷಣ ಕೊಡುವುದಕ್ಕೆ, ಅವರು ಸ್ವಾವಲಂಬಿಯಾಗಿ ಬದುಕುವುದಕ್ಕೆ ವಾತಾವರಣ ನಿರ್ಮಿಸಬೇಕು. ಹಳ್ಳಿಗಳಲ್ಲಿ ಇಂದಿಗೂ ಹೆಣ್ಣು ಹುಡುಗಿಯರನ್ನು ಶಾಲೆಗೆ ಕಳಿಸುವುದೇ ಇಲ್ಲ. ಗಂಡು ಮಕ್ಕಳಷ್ಟೆ ಹೆಣ್ಣು ಮಕ್ಕಳಿಗೂ ಶಿಕ್ಷಣ ಅತ್ಯಗತ್ಯ ಎಂಬ ಜಾಗೃತಿಯನ್ನು ನಾವು ಕೈಗೊಳ್ಳಬೇಕು. ಜೀತ ಪದ್ಧತಿ, ಬಾಲ ಕಾರ್ಮಿಕ ಪದ್ಧತಿಗಳು ಸಮಾಜಕ್ಕೆ ಬಹಳ ಹಾನಿಕಾರಕ. ತಂದೆಯು ಕುಡುಕನಾಗಿ, ಬೇಜವಾಬ್ದಾರಿಯಿಂದ ವರ್ತಿಸುವುದು ಮಕ್ಕಳ ಜೀತಕ್ಕೆ ಮತ್ತು ಬಾಲ ಕಾರ್ಮಿಕ ವೃತ್ತಿಗೆ ಅವಕಾಶ ಮಾಡಿಕೊಡುತ್ತದೆ. ಬಡತನದ ಬವಣೆಗಾಗಿ ತಾಯಿಯು ಮಕ್ಕಳನ್ನು ದುಡಿಯಲು ಹಚ್ಚುತ್ತಾಳೆ. ವಿದ್ಯೆ ಮನುಷ್ಯನಿಗೆ ಕಣ್ಣಿದ್ದಂತೆ. ಆದ್ದರಿಂದ ಮಕ್ಕಳಿಗೆ ಸೂಕ್ತ ಶಿಕ್ಷಣ ನೀಡಲು ಜನ ಜಾಗೃತಿ ಅಗತ್ಯವಿದೆ.

3. ಮತಾಂಧತೆ ಮತ್ತು ಹಿಂಸಾವಾದ ಮುಕ್ತ ಸಮಾಜ

ಧರ್ಮದ ಹೆಸರಿನಲ್ಲಿ ಹಿಂಸೆಯನ್ನು ಪ್ರೋತ್ಸಾಹಿಸುವುದು ಅಧರ್ಮ ಮಾತ್ರವಲ್ಲ ದೇವರ ಇಚ್ಛೆಗೆ ವಿರುದ್ಧವಾದ ನಡತೆ. ಏಕೆಂದರೆ ದೇವರು ಅಪಾರವಾದ ಕರುಣೆಯಿಂದ ಈ ಜಗತ್ತನ್ನು ಸೃಷ್ಟಿಸಿದನು. ಸೃಷ್ಟಿಸಿ ಹಾಗೆಯೇ ಬಿಡಲಿಲ್ಲ .ಅಪಾರ ದಯೆಯಿಟ್ಟು ಅನೇಕ ಪ್ರವಾದಿಗಳನ್ನು, ಮಹಾತ್ಮರನ್ನು ತನ್ನ ಕಾರ್ಯಕ್ಕೆ ಆಯ್ಕೆ ಮಾಡಿಕೊಂಡು, ಅವರಿಗೆ ಅನುಗ್ರಹ ನೀಡಿದುದಲ್ಲದೆ ದಿವ್ಯ ಸಂದೇಶವನ್ನು ಅನುಗ್ರಹಿಸಿದ್ದಾನೆ. ದೇವರ ಇಚ್ಛೆ ಸತ್ತ ನಂತರ ಸ್ವರ್ಗ, ಕೈಲಾಸ, ವೈಕುಂಠಗಳನ್ನು ಪ್ರವೇಶಿಸುವುದಕ್ಕಿಂದಲೂ ಈ ಭೂಮಿಯ ಮೇಲೆಯೇ ದೇವರ ರಾಜ್ಯವನ್ನು ನಿರ್ಮಾಣ ಮಾಡುವುದಾಗಿರುತ್ತದೆ. ಆದ್ದರಿಂದ ದೇವರ ಹೆಸರಿನಲ್ಲಿ ಯಾವುದೇ ಜೀವಿಯನ್ನು ಕೊಲ್ಲುವುದು ದೇವರಿಗೆ ಕೋಪವನ್ನು ತರಿಸುತ್ತದೆ. ಅದಕ್ಕಾಗಿಯೇ ಬಸವಣ್ಣನವರು ಹೀಗೆ ಹೇಳುತ್ತಾರೆ.

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ,
ದಯವೇ ಧರ್ಮದ ಮೂಲವಯ್ಯ
ಲಿಂಗದೇವನಂತಲ್ಲದೊಲ್ಲನಯ್ಯಾ

ತಾನು ನಂಬಿದುದೇ ಸತ್ಯ ಎಂದು ಸಾಧಿಸುವುದು ಮತಾಂಧತೆ, ಸತ್ಯವನ್ನು ನಂಬುವುದು ಮತಿವಂತಿಕೆ. ದಯೆ-ಮಾನವೀಯತೆಗಳೇ ಧರ್ಮದ ಎರಡು ಕಣ್ಣುಗಳು ಎಂಬುದನ್ನು ನಾವು ಅರಿಯಬೇಕು.

4. ನಶಾ ಮುಕ್ತ ಸಮಾಜ

ಸಿಗರೇಟು, ಲಿಕ್ಕರ್, ಅಫೀಮು, ಹೆರಾಯಿನ್ ಮುಂತಾದ ಮಾದಕ ವಸ್ತುಗಳ ದಾಸರಾಗಿ ಜನರು ವೈಯಕ್ತಿಕವಾಗಿ ಹಾಳಾಗುತ್ತಿರುವುದಲ್ಲದೆ ಕೌಟುಂಬಿಕ ನೆಮ್ಮದಿಯನ್ನು, ಸಾಮಾಜಿಕ ಸ್ವಾಸ್ಥ್ಯವನ್ನು ಕೆಡಿಸುತ್ತಿರುವರು. ತಂದೆ - ತಾಯಿಯರು ದುರ್ವ್ಯಸನ, ದುರ್ನೀತಿಗೆ ಬಲಿಯಾಗುವುದರಿಂದ ಮಕ್ಕಳು ಅನಾಥರಾಗುವರು ಇಲ್ಲವೇ ಅಭದ್ರತೆಯ ಭಾವನೆಯಿಂದ ಅಪ್ರಾಪ್ತ ವಯಸ್ಸಿನ ಮಕ್ಕಳೇ ಅಪರಾಧ ಕೃತ್ಯಗಳಲ್ಲಿ ತೊಡಗುವರು. ಹೀಗಾಗಿ ಬಾಲಾಪರಾಧಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕುದುರೆ ಜೂಜು, ಸಟ್ಟಾ ಬಾಜಿಯಿಂದ ಆಸ್ತಿ ಪಾಸ್ತಿ, ಮನೆ-ಸಂಪತ್ತು ಕಳೆದುಕೊಳ್ಳುವರು. ಟಿ.ವಿ ಮತ್ತು ಸಿನಿಮಾಗಳಲ್ಲಿ ತೋರಿಸುವ ಹಿಂಸೆಯ ವೈಭವೀಕರಣದ

ದೃಶ್ಯದಿಂದ ಪ್ರಚೋದನೆಗೊಂಡು ಕೊಲೆ, ಲೂಟಿ ಮತ್ತು ಲೈಂಗಿಕ ಸ್ವೇಚ್ಛಾಚಾರದಲ್ಲಿ ಮಕ್ಕಳು, ಯುವಕರು ತೊಡಗುತ್ತಿದ್ದಾರೆ. ತಂದೆ ಜವಾಬ್ದಾರಿ ರಹಿತ ವ್ಯಕ್ತಿಯಾದಾಗ ಮಕ್ಕಳನ್ನು ಜೀತಕ್ಕಿಡುವನು, ಬಾಲ ಕಾರ್ಮಿಕ ವೃತ್ತಿಗೆ ಬಿಡುವರು. ಸಾಮಾಜಿಕ ಪಿಡುಗುಗಳಾದ ಕುಡಿತ, ಜೂಜು, ಮಾದಕ ಪೇಯ ಸೇವನೆ, ಲೈಂಗಿಕ ಸ್ವೇಚ್ಛಾಚಾರ ನಿಲ್ಲದ ಹೊರತು ಪರಿಶುದ್ಧ ಸಮಾಜವನ್ನು ಕಟ್ಟಲು ಸಾಧ್ಯವಿಲ್ಲ ಎಂಬುದನ್ನು ಎಲ್ಲರೂ ಮನಗಾಣಬೇಕು.

5. ಸಂಪ್ರದಾಯ ಮತ್ತು ಅಂಧ ಶ್ರದ್ಧೆ

ಕೆಲವೊಂದು ಸಂಪ್ರದಾಯಗಳನ್ನು ಕುರುಡು ನಂಬಿಕೆಯಿಂದ ಯಾಂತ್ರಿಕವಾಗಿ ಅನುಸರಿಸುವ ಅಂಧ ಶ್ರದ್ಧೆಯು ಭಾರತೀಯ ಸಮಾಜದ ಹಿನ್ನಡೆಗೆ ಕಾರಣವಾಗಿದೆ. ಯಾವುದೇ ಧಾರ್ಮಿಕ ಆಚರಣೆಯನ್ನು ಏಕೆ ಮತ್ತು ಹೇಗೆ ಎಂದು ಪ್ರಶ್ನಿಸದೆ ಹಿಂದಿನಿಂದ ಬಂದ ಸಂಪ್ರದಾಯ ಎಂದು ಆಚರಣೆ ಮಾಡುವುದನ್ನು ಕಾಣುತ್ತೇವೆ. ಐತಿಹಾಸಿಕ ಹಿನ್ನೆಲೆ, ತತ್ವಜ್ಞಾನದ ಸಮರ್ಥನೆ ಏನೂ ಇಲ್ಲದ ಹಲವಾರು ದೇವತೆಗಳನ್ನು, ಕ್ಷುದ್ರ ದೈವಗಳನ್ನು ಪೂಜಿಸುವುದು; ದೇವತೆಗಳಿಗೆ ಪ್ರಾಣಿ ಬಲಿಯನ್ನು ಕೆಲವೊಮ್ಮೆ ನರ ಬಲಿಯನ್ನೂ ಕೊಡುವುದನ್ನು ಕಾಣುತ್ತೇವೆ. ಪ್ಲೇಗ್, ಕಾಲರಾ, ಸಿಡುಬು ರೋಗ, ಚಿಕ್ಕನ್ ಗುನ್ಯಾ ಮುಂತಾದ ರೋಗಗಳಿಗೂ ಸಹ ದೈವಗಳನ್ನು ಕಲ್ಪಿಸಿಕೊಂಡು ಗುಡಿ ಕಟ್ಟಿಸುವುದನ್ನು ಕಾಣುತ್ತೇವೆ. ಅಜ್ಞಾನವು ಶೋಷಣೆಗೆ, ವಿಚಾರ ದಾಸ್ಯಕ್ಕೆ ಆಸ್ಪದ ಮಾಡಿಕೊಡುತ್ತದೆ. ಗಿಡ-ಮರ ,ಪ್ರಾಣಿಗಳು ಮುಂತಾದವನ್ನೆಲ್ಲ ಪೂಜಿಸುತ್ತ ಮೂಢತನದ ಜೊತೆಗೆ ಹಿಂಸೆಗೂ ಮುಂದಾಗುವರು. ಆದ್ದರಿಂದ ದೇವರು ಒಬ್ಬ, ಅವನು ಕರುಣಾನಿಧಿ ದಯಾಸಾಗರ ಎಂಬುದನ್ನು ಬೋಧಿಸುತ್ತ ದೇವರ ಹೆಸರಿನಲ್ಲಿ ನಡೆಯುವ ಹಿಂಸೆ ಮತ್ತು ಅಂಧ ಶ್ರದ್ಧೆಯನ್ನು ನಿವಾರಿಸಲು ಪ್ರಯತ್ನ ಮಾಡುವುದು ಅತ್ಯಗತ್ಯವಾಗಿದೆ.

6. ಭ್ರಷ್ಟಾಚಾರ ಮುಕ್ತ ಸಮಾಜ

ಭೌತಿಕ, ನೈತಿಕ ಮತ್ತು ಅಧ್ಯಾತ್ಮಿಕ ಮೌಲ್ಯಗಳಿಂದ ಕೂಡಿದ ವ್ಯಕ್ತಿ ಮತ್ತು ಸಮಾಜವು ಪರಿಪೂರ್ಣ ಸಮಾಜ. ಭ್ರಷ್ಟಾಚಾರ, ಸ್ವಾರ್ಥ ಮತ್ತು ಸ್ವಜನ ಪಕ್ಷಪಾತಗಳಿಂದಾಗಿ ನಮ್ಮ ಸಮಾಜ ಮತ್ತು ರಾಷ್ಟ್ರಗಳು ಹಿಮ್ಮುಖ ನಡಿಗೆಯಲ್ಲಿವೆ. ವ್ಯಕ್ತಿಗಳು ಅನುಸರಿಸುವ ಧರ್ಮವು ಯಾವುದೇ ಇರಲಿ ಪ್ರತಿಯೊಬ್ಬ ನಾಗರೀಕನು ಸ್ವಚ್ಛ ಸಮಾಜ ರಚನೆಗಾಗಿ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ಉತ್ತಮ ಮೌಲ್ಯಗಳಾದ ಪ್ರಾಮಾಣಿಕತೆ, ರಾಷ್ಟ್ರಪ್ರೇಮ, ಸಮರ್ಪಣ ಮನೋಭಾವ, ಶ್ರದ್ಧೆಯನ್ನು ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಒಂದು ಉತ್ತಮ ಸುಖೀರಾಜ್ಯ ಅಥವಾ ಕಲ್ಯಾಣ ರಾಜ್ಯವನ್ನು ನಿರ್ಮಾಣ ಮಾಡಲು ಸಾಧ್ಯ.

ನಾಗರಿಕ ಸೇವೆ ಮತ್ತು ನ್ಯಾಯಾಂಗ ವ್ಯವಸ್ಥೆಯು ಇಂಗ್ಲೀಷ್‌ಮಯ ವಾಗಿರುವುದರಿಂದ ಜನರಿಗೆ ಸತ್ಯವು ತಿಳಿಯದೆ ತಮ್ಮ ಹಕ್ಕುಗಳಿಗಾಗಿ ಹೋರಾಡುವುದು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕಾರ್ಯಾಂಗ ಮತ್ತು ನ್ಯಾಯಾಂಗವು ಪ್ರಾದೇಶಿಕ ಭಾಷೆಯಲ್ಲಿ ವ್ಯವಹರಿಸಬೇಕು. ಇಂಗ್ಲೀಷನ್ನು ಒಂದು ಭಾಷೆಯಾಗಿ ಕಲಿಸಬೇಕೇ ವಿನಾ ಶಿಕ್ಷಣವು ಆಂಗ್ಲ ಮಾಧ್ಯಮದಲ್ಲಿ ಆಗಕೂಡದು. ಆಗ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಸಾಧ್ಯವಾಗುವುದು.

7. ಶೋಷಣೆ ಮುಕ್ತ ಸಮಾಜ

ಸಬಲರು ದುರ್ಬಲರನ್ನು ತುಳಿಯುವ ಯಾವುದೇ ಬಗೆಯ ಶೋಷಣೆ ಇರದಂತಹ ಸಮಾಜವು ನಿರ್ಮಾಣವಾಗಬೇಕು. ಬಾಲ ಕಾರ್ಮಿಕ ವೃತ್ತಿ, ಕಡಿಮೆ ಹಣಕ್ಕೆ ದುಡಿಸಿಕೊಳ್ಳುವಿಕೆ, ಜೀತ ಪದ್ಧತಿ, ಮೂಕ ಪ್ರಾಣಿ ಪಕ್ಷಿಗಳ ಹಿಂಸೆ ಮುಂತಾದವು ಇಲ್ಲದ ಸರ್ವರಿಗೂ ಸಮಬಾಳು,

ಸರ್ವರಿಗೂ ಸಮಪಾಲು ಎಂಬ ಸಮಾಜ ನಿರ್ಮಾಣವಾಗಬೇಕು.

ಸಮಾರೋಪ

ಈ ಜಗತ್ತು ಪರಮಾತ್ಮನು ಕೊಟ್ಟ ಶ್ರೇಷ್ಠ ವರ, ಬದುಕುವುದು ಒಂದು ಕಲೆ. ವಿವಿಧ ಧರ್ಮಗಳು ಒಂದೇ ಪರಮ ಸತ್ಯವಾದ ಪರಮಾತ್ಮನ ಕಡೆಗೆ ಸಾಗುವ ಬೇರೆ ಬೇರೆ ಮಾರ್ಗಗಳು. ನಮ್ಮ ದೇಶವು ಹಲವು ಧರ್ಮಗಳ ಒಂದು ಹೂಮಾಲೆಯಂತೆ. ವಿವಿಧ ಬಣ್ಣ, ಆಕಾರಗಳ ಹೂಗಳೆಲ್ಲ ಸೇರಿ ಸುಂದರವಾದ ಹೂಮಾಲೆಯನ್ನು ರಚಿಸುವಂತೆ ಎಲ್ಲರೂ ಸಹಕರಿಸಿ ರಾಷ್ಟ್ರೀಯ ಏಕತೆಯನ್ನು ಪ್ರದರ್ಶಿಸಬೇಕು. ಒಂದು ತೋಟದಲ್ಲಿ ಹೇಗೆ ವಿವಿಧ ಮರಗಳಿದ್ದು ಬೇರೆ ಬೇರೆ ರುಚಿಯ ಹಣ್ಣು ಕೊಡುತ್ತವೋ ಹಾಗೆ ನಮ್ಮ ದೇಶದಲ್ಲಿ, ಈ ಜಗತ್ತಿನಲ್ಲಿ ಎಲ್ಲ ಧರ್ಮಗಳ ಸಂದೇಶಗಳು ಕಾರ್ಯ ಮಾಡಬೇಕು.

ಹಬ್ಬದ ದಿನದಂದು ತಟ್ಟೆಯಲ್ಲಿ ಹಲವು ಬಗೆಯ ಭಕ್ಷ್ಯಗಳನ್ನು ಇಟ್ಟುಕೊಂಡು ಊಟಕ್ಕೆ ಕೂರುತ್ತೇವೆ. ಒಂದು ಸಿಹಿ ಇದ್ದರೆ ಮತ್ತೊಂದು ಕಾರವಾಗಿರುತ್ತದೆ. ಹಲ್ವಾದ ರುಚಿಯೇ ಬೇರೆ ಹಪ್ಪಳದ ರುಚಿಯೇ ಬೇರೆ. ಆದರೂ ಅವು ತಟ್ಟೆಯಲ್ಲಿ ಕುಳಿತು ಜಗಳವಾಡುವುದಿಲ್ಲ. ಒಂದು ಕೈಯಿಂದ ಕಲಸುತ್ತೇವೆ. ಅಲ್ಲೂ ಜಗಳವಾಡುವುದಿಲ್ಲ. ಒಂದೇ ನಾಲಿಗೆ, ದಂತ ಪಂಕ್ತಿಯಿಂದ ಸುರಿಸುತ್ತೇವೆ. ಆಗಲೂ ಜಗಳವಾಡುವುದಿಲ್ಲ. ಎಲ್ಲವೂ ಸೇರಿ ಜಠರಾಂಗವನ್ನು ಪ್ರವೇಶಿಸುತ್ತವೆ. ಆಗಲೂ ಜಗಳವಾಡುವುದಿಲ್ಲ. ನಂತರ ಜೀರ್ಣವಾಗಿ, ರಕ್ತವಾಗಿ, ಶಕ್ತಿಯಾಗಿ ಪರಿವರ್ತನೆಗೊಳ್ಳುತ್ತವೆ. ಹಾಗೆಯೇ ಭಾರತ ದೇಶದ ತಟ್ಟೆಯಲ್ಲಿ ವಿವಿಧ ಧರ್ಮಗಳ ಸಂತರು ಕೊಟ್ಟಿರುವ ದಿವ್ಯ ಸಂದೇಶಗಳೆಂಬ ಭಕ್ಷ್ಯಗಳಿವೆ. ಅವೆಲ್ಲವೂ ಸೇರಿ ದೇಶಕ್ಕೆ ಶಕ್ತಿಯನ್ನು ಕೊಡಬೇಕೇ ವಿನಾ ವಿಘಟನೆಯನ್ನಲ್ಲ. ವಿವಿಧ ಧರ್ಮಗಳ ನಾವೆಲ್ಲರೂ ಸೇರಿ ಶಾಂತಿ ಮತ್ತು ಧಾರ್ಮಿಕ ಸೌಹಾರ್ದತೆಯನ್ನು ಸ್ಥಾಪಿಸುವಲ್ಲಿ ಮಹತ್ತರವಾದ ಹೊಣೆಗಾರಿಕೆಯನ್ನು ಹೊತ್ತು ಈ ಭೂಮಿಯ ಮೇಲೆ ಕಲ್ಯಾಣ ರಾಜ್ಯ, ಆಧ್ಯಾತ್ಮಿಕ ಅರ್ಥದಲ್ಲಿ ದೈವೀ ರಾಜ್ಯವನ್ನು ನಿರ್ಮಾಣ ಮಾಡೋಣ. ಅದಕ್ಕಾಗಿಯೇ ಗುರು ಬಸವಣ್ಣನವರು ಹೇಳುತ್ತಾರೆ:

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ !
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ;
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ ಲಿಂಗದೇವಾ

ಭಕ್ಷ್ಯಗಳ ವಿವಿಧ ರುಚಿಯು ಆಹಾರದ ಸಿರಿಯನ್ನು ಹೆಚ್ಚಿಸುವಂತೆ ಬಗೆ ಬಗೆಯ ಬಣ್ಣದ ಹೂಗಳು ಹೂ ಮಾಲೆಯ ಸೌಂದರ್ಯವನ್ನು ವರ್ಧಿಸುವಂತೆ, ನಾವು ಪರಸ್ಪರರ ಧರ್ಮಗಳನ್ನು ಅರಿಯಲೆತ್ನಿಸಬೇಕು, ಭಿನ್ನಾಭಿಪ್ರಾಯಗಳಿದ್ದರೆ ಸಹಿಸಿಕೊಳ್ಳಬೇಕು, ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುವ ಸಹನ ಶೀಲತೆಯನ್ನು ಬೆಳೆಸಿಕೊಳ್ಳಬೇಕು.

ಈ ಭೂಮಿಯ ಮೇಲೆ ಸಮೃದ್ಧ ಮತ್ತು ಸಂತೃಪ್ತವಾದ ಪರಿಶುದ್ಧ **"ಕಲ್ಯಾಣ ರಾಜ್ಯ"**ವನ್ನು ನಿರ್ಮಾಣ ಮಾಡಲು ನಾವೆಲ್ಲರೂ ಕೈ ಜೋಡಿಸೋಣ.

ಶರಣು ಶರಣಾರ್ಥಿ

ನವ ದೆಹಲಿಯ ಕಾನ್‌ಸ್ಟಿಟ್ಯೂಷನ್ ಕ್ಲಬ್‌ದಲ್ಲಿ ಸರ್ವ ಧರ್ಮ ಸಂಸತ್
ದಿ. 29-3-2008ರಂದು ಏರ್ಪಡಿಸಿದ ಚಿಂತನ ಗೋಷ್ಠಿಯಲ್ಲಿ
ಪೂಜ್ಯ ಮಾತಾಜಿ ಸಿದ್ಧಪಡಿಸಿದ ಲೇಖನ.

ಸರ್ವ ಧರ್ಮ ಸಂಸತ್‌ನ ಚಿಂತನಗೋಷ್ಠಿ
ಮನ ಸೆಳೆದ ಮಾತಾಜಿಯವರ ಹಾಡುಗಳು

ನವದೆಹಲಿಯ ಕಾನ್ಸ್ಟಿಟ್ಯೂಷನ್ ಕ್ಲಬ್‌ನ ಸ್ಪೀಕರ್ಸ್ ಹಾಲ್‌ದಲ್ಲಿ ಸರ್ವಧರ್ಮ ಸಂಸತ್ (Parliament of Religions)ನ ವತಿಯಿಂದ ದಿ.29-3-2008ರಂದು ಬೆಳಿಗ್ಗೆ9ರಿಂದ ಮಧ್ಯಾಹ್ನ 3-30ರವರೆಗೆ ಚಿಂತನ ಗೋಷ್ಠಿಯು 3 ಅಧಿವೇಶಗಳಲ್ಲಿ ನಡೆಯಿತು. ಲಿಂಗಾಯತ ಧರ್ಮದ ಪ್ರತಿನಿಧಿಯಾಗಿ ಮತ್ತು ಮಹಿಳಾ ಜಗದ್ಗುರುವಾಗಿ ಪೂಜ್ಯ ಮಾತಾಜಿಯವರು ಮಾಡಿದ ಭಾಷಣ ಮತ್ತು ಹಿಂದಿಯಲ್ಲಿ ಹಾಡಿದ ಎರಡು ಗೀತೆಗಳು ಎಲ್ಲರ ಗಮನ ಸೆಳೆದು ಮೆಚ್ಚುಗೆಗೆ ಪಾತ್ರವಾದವು.

1. ಹೇ ಪರಮಾತ್ಮಾ........... ಕಾರ್ಯಕ್ರಮದ ಆರಂಭದಲ್ಲಿ ಹಾಡಿದರೆ ಅದರಲ್ಲಿ ಬರುವ "ವೇದಾಂತಿಗಳು ಪರಬ್ರಹ್ಮನೆಂಬರು, ಆಗಮಿಕರು ಪರಶಿವನೆಂಬರು, ಅಲ್ಲಹ ಯಹೋವ ಸುಪ್ರೀಮ್ ಗಾಡ್, ಲಿಂಗದೇವಾ ನಿನ್ನಯ ಹೆಸರು." ಎಂಬ ಚರಣ ಎಲ್ಲ ಧರ್ಮೀಯರಿಗೂ ಸಂತೋಷ ತಂದುಕೊಟ್ಟಿತು.

2. ಇನ್ನೊಂದು ಗೀತೆ "ಹೇ ಶರಣ ಬಂಧುಗಳೇ" ದಾಟಿಯಲ್ಲಿದೆ. ಹಿಂದಿಗೆ ತರ್ಜುಮೆ ಮಾಡಿದ ಈ ಗೀತೆಯನ್ನು ಕನ್ನಡ ಲಿಪಿಯಲ್ಲಿ ಕೊಡಲಾಗಿದೆ. ಇದನ್ನು ಭಾಷಣದ ಕೊನೆಯಲ್ಲಿ ಪೂಜ್ಯ ಮಾತಾಜಿ ಹಾಡಿದರು.

ಹೇ ಧರ್ಮ ಬಂಧು ಜನೋ ಧರ್ಮ ಧ್ವಜ್ ಲೆಹರಾ ರಹಾಹೈ
ಶಾಂತಿ ಧ್ವನಿ ಗೂಂಜ್ ರಹೀ ಹೈ
ಆವೋ ಆವೋ ಆವೋ ಸಾರೆ ಭೇದಭಾವ ಛೋಡಕರ್ ॥ ಪ ॥

ಜಾತೀಯತಾ ಕೋ ಮಿಟಾಕರ್ ಧರ್ಮ ತತ್ವಕೋ ಅಪನಾಕರ್
ಸಮತಾ ಧ್ವಜ್ ಕೋ ಪ್ರೇಮ್ ಸೆ ವಿರಾಜಕರ್
ಮಾನವತಾ ಕೀ ಆಂಕ್ ಖೋಲ್‌ಕೆ ದಾನವತಾಕಾ ದಮನಕರಕೆ
ಆದರ ಭಾವ್ ಸೆ ಸಬ್ ಓ ಅಪನಾಕರ್ ॥ 1 ॥

ಧರ್ಮ ಹಮಾರಾ ಸದ್ಧರ್ಮ್, ಹಮಾರಾ ಹೈ ಮಾನವ ಧರ್ಮ
ಹಮಾರಾ ಹೈ ರಾಷ್ಟ್ರಧರ್ಮ, ಹಮಾರಾ ಹೈ ವಿಶ್ವ ಧರ್ಮ
ಮನ್ ಕೋ ವಿಶಾಲ್ ಕರಕೆ ಜಗವಿಶಾಲದ ನಭ ವಿಶಾಲ್
ಧರ್ಮವಾನ್ ಬನ್‌ಕರ್ ಹಮ್ ದಬ್ ಕೋ ಆಶ್ರಯ ದೇಂಗೆ ॥ 2 ॥

ಶಿವಜಿ ಬಸವ ಶಂಕರ ಮಹಾದೇವಿ ಮೀರಾಬಾಯಿ
ಗುರುನಾನಕ್, ದಯಾನಂದ ಕೀ ಭವ್ಯ ಪರಂಪರಾ ಹಮಾರಿ
ಬಾಪು ಬುದ್ಧ ಮಹಾವೀರ ಅರವಿಂದ ವಿವೇಕಾನಂದ
ಧರ್ಮ ಸಂದೇಶ್ ದಿಯಾ ಹುವಾ ಸಂತೋಂಕಾ ದೇಶ್ ಹಮಾರಾ ॥ 3 ॥

ಹಿಂದು ಕ್ರೈಸ್ತ ಮುಸಲ್ಮಾನ ಲಿಂಗಾಯತ ಸಿಖ್ ಜೈನ
ಬೌದ್ಧ ಘಾರಸಿ ಯಹೂದಿಯೋಂಕಾ ಧಾಮ್ ಹೈ ಹಮಾರಾ ದೇಶ್
ಸಂಕುಚಿತ ಭಾವ್ ಮಿಟಾಕೆ ಪ್ರೇಮ ಭಾವ್ ಕೋ ಜಗಾಕೆ
ಸಬ್ ಕಾ ಸಮ್ಮಾನ್ ಕರೇಂಗೆ ಸಚ್ಚಿದಾನಂದ ಪುತ್ರ ಕಹಕೆ ॥ 4 ॥

ಪೂಜ್ಯ ಮಾತಾಜಿ ಕಂಚಿನ ಕಂಠದಿಂದ ಹಾಡಿದ ಗೀತೆ ಬಹಳಷ್ಟು ಪ್ರಭಾವ ಬೀರಿತು. ಮುಸಲೀಮ್ ಮೌಲ್ವಿಗಳು, ಆರ್ಯ ಸಮಾಜದ ಸ್ವಾಮಿಗಳು, ಕ್ರೈಸ್ತ ಪಾದ್ರಿಗಳು ಎರಡೂ ಹಾಡುಗಳ ಪ್ರತಿ ಕೇಳಿದರು. ತಮ್ಮ ಮದರಸಾದಲ್ಲಿ ಕಲಿಸುವುದಾಗಿ ಕೂಡ ಹೇಳಿದರು.

ಸ್ವಾಮಿ ಅಗ್ನಿವೇಶ್‌ಅವರು ಸಂಯೋಜಕರಾಗಿರುವ ಸರ್ವ ಧರ್ಮ ಸಂಸತ್ ನೋಂದಾಯಿತ ಸಂಸ್ಥೆ. ಎಲ್ಲ ಧರ್ಮಗಳ ಮುಖಂಡರು ಈ ಸಂಸ್ಥೆಯಲ್ಲಿ ಸಕ್ರಿಯ ಸದಸ್ಯರಾಗಿದ್ದಾರೆ. ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಸಹ ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಕಾಯಂ ಸದಸ್ಯರಾಗಿದ್ದಾರೆ. ದಿ. 29-3-2008ರಂದು ನಡೆದ ಅಧಿವೇಶನದಲ್ಲಿ 7 ಸಾಮಾಜಿಕ -ಧಾರ್ಮಿಕ ಪಿಡುಗು ಕುರಿತು ಎಲ್ಲ ಧರ್ಮಗಳ ಪ್ರತಿನಿಧಿಗಳು ಮುಕ್ತ ಮನಸ್ಸಿನಿಂದ ಚರ್ಚಿಸಿದರು.

ಶರಣ. ಸುಭಾಷ್ ಪಾಟೀಲರು ಇನ್ನಿಲ್ಲ

ಆಂಧ್ರಪ್ರದೇಶ್ ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷರಾಗಿ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಿ, ಇತ್ತೀಚೆಗೆ ಅನಾರೋಗ್ಯದ ನಿಮಿತ್ತ ಆ ಹೊಣೆಗಾರಿಕೆಯನ್ನು ಶರಣ. ಧನರಾಜ ಜೀರಗೆ ಅವರಿಗೆ ವಹಿಸಿಕೊಟ್ಟು ತಾವು ಪೋಷಕಾಧ್ಯಕ್ಷರಾಗಿ ಮಾರ್ಗದರ್ಶನ ಮಾಡುತ್ತಿದ್ದ ಶರಣ. ಸುಭಾಷ್ ಅಣ್ಣಪ್ಪ ಪಾಟೀಲರು ದಿ. 1-4-2008ರಂದು ಮಧ್ಯಾಹ್ನ 1-30ರವರೆಗೆ ನಮ್ಮ ಜೊತೆಗೇ ಇದ್ದು ದೆಹಲಿಯಿಂದ ಹೈದರಾಬಾದಿಗೆ ಬಂದು ಅಲ್ಲಿಂದ ಬೀದರಿಗೆ ಹೊರಟ ನನ್ನನ್ನು ಲವಲವಿಕೆಯಿಂದ ಬೀಳ್ಕೊಟ್ಟವರು, ದಿ. 4-4-2008ರಂದು ಆಸ್ಟ್ರೇಲಿಯಾದಲ್ಲಿರುವ ಮಗಳು ಗೌರಿಯ ಮನೆಗೆ ಹೊರಟಿರುವುದಾಗಿ ತಿಳಿಸಿದರು. ಹಿಂದಿನ ಒಂದೆರಡು ತಿಂಗಳ ಮೊದಲು ಬೆನ್ನು ನೋವಿನಿಂದ ಬಹಳ ವೇದನೆ ಅನುಭವಿಸುತ್ತಿದ್ದವರು ಈಗ ಸ್ವಲ್ಪ ಆರಾಮವಾದಂತೆ ಲವಲವಿಕೆಯಿಂದ ಮಾತನಾಡಿದರು.

ಇಂತಹ ಚಟುವಟಿಕೆಯ ವ್ಯಕ್ತಿ ಆಸ್ಟ್ರೇಲಿಯಾದಲ್ಲಿ ದಿ. 13-4-2008ರಂದು ಮಗಳ ಮನೆಯ ಗೃಹಪ್ರವೇಶದಲ್ಲಿ ಬಸವೇಶ್ವರ ಪೂಜಾವ್ರತ ಎಲ್ಲ ಪೂರೈಸಿ, ಸಮಾವೇಶವಾದವರೊಡನೆ ಮಾತನಾಡಿ, ಪ್ರಸಾದ ಪೂರೈಸಿ ಏಕೋ ಕಸಿವಿಸಿಯಾಗುತ್ತಿದೆ ಎಂದು ಹೇಳಿ ಮಲಗಿಕೊಂಡವರು ಮೇಲೇಳಲೇ ಇಲ್ಲ. ಈ ಸುದ್ದಿ ಎಲ್ಲೆಡೆ ಕಾಡ್ಗಿಚ್ಚಿನಂತೆ ಹಬ್ಬಿತು. ಎಲ್ಲ ಸಂಘ-ಸಂಸ್ಥೆಗಳೊಡನೆ ಸೌಹಾರ್ದಯುತ ಸಂಬಂಧವನ್ನು ಅವರು ಇಟ್ಟುಕೊಂಡಿದ್ದರು. ಅವರ ಮನೆಯವರು ಬಂಧು ಬಾಂಧವರಿಗೆ ಸುದ್ದಿ ಮುಟ್ಟಿಸಿದರೆ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಧನರಾಜ್ ಜೀರಿಗೆಯವರು ಎಲ್ಲ ರಾ.ಬ.ದಳದವರ ದೂರವಾಣಿಗಳಿಗೆ ಕರೆ ಮಾಡಿ ಸುದ್ದಿ ಮುಟ್ಟಿಸಿದರು. ಈ ವಿಷಾದಕರ ಹಾಗೂ ಆಘಾತಕರ ಸುದ್ದಿ ಕೇಳಿ ಕಣ್ಣೀರು ಹಾಕದವರೇ ಇಲ್ಲ. ಒಬ್ಬ ಯಶಸ್ವಿ ಉದ್ಯಮಿಯಾಗಿದ್ದ ಸುಭಾಷ್ ಪಾಟೀಲರು ಸ್ವಂತ ಪ್ರತಿಭೆ ಪರಿಶ್ರಮದಿಂದ ಹೈದರಾಬಾದಿನಲ್ಲಿ ಪಟೇಲ್ ಟ್ರಾನ್ಸ್‌ಪೋರ್ಟ್ ಎಂಬ ಸಾರಿಗೆ ಸಂಸ್ಥೆಯನ್ನು ಬೆಳೆಸಿದರು.

ಸುಭಾಷ್ ಪಾಟೀಲರ ತತ್ವನಿಷ್ಠೆ ವ್ಯಕ್ತಗೊಂಡುದು 1997ರಲ್ಲಿ. 1996ರಲ್ಲಿ ಬಸವ ವಚನ ದೀಪ್ತಿ ಬಿಡುಗಡೆಗೊಂಡಾಗ (ನಿತ್ಯವೂ ವಿರಕ್ತ ಸ್ವಾಮಿಗಳು ಗಣಪತಿ ಪೂಜೆ, ಹೋಮ-ಹವನ, ನವಗ್ರಹ ಪ್ರತಿಷ್ಠಾಪನೆ-ಪೂಜೆ ಇತ್ಯಾದಿ ಮಾಡುತ್ತಿದ್ದರೂ ಇವು ಲಿಂಗಾಯತ ಧರ್ಮಕ್ಕೆ ಸಲ್ಲದ ಆಚರಣೆಗಳೆಂದು ಪ್ರತಿಭಟಿಸದೆ ಇರುವ) ಹಲವರು ಮಠಾಧೀಶರು ಮತ್ತು ಮುಂದಾಳುಗಳು ಭಯಂಕರ ಗದ್ದಲ ಎಬ್ಬಿಸಿ ನಮ್ಮ ವಿರುದ್ಧ ಜನರನ್ನು ಎತ್ತಿಕಟ್ಟಲು ಹವಣಿಸಿದರು. ಆಗ ಬೀದರ್ ರಾ.ಬ.ದಳದ ಕೆಲವರು ಮತ್ತು ಹೈದರಾಬಾದ್ ರಾ.ಬ.ದಳದವರು ಅತ್ಯಂತ ಧೈರ್ಯವಾಗಿ ಪರಿಸ್ಥಿತಿ ನಿಭಾಯಿಸಿದ್ದು ಶರಣ. ಸುಭಾಷ್ ಪಾಟೀಲರ ನೇತೃತ್ವದಲ್ಲಿ. ಬೀದರ್ ಜಿಲ್ಲೆಗೂ ನಮಗೂ ಭಾವನಾತ್ಮಕ ನಿಕಟ ಸಂಬಂಧ ಉಂಟು. ನಮ್ಮ ಮೇಲೆ ಅವರಿಗೆ ಭಕ್ತಿ, ಅವರ ಮೇಲೆ ನಮಗೆ ಉತ್ಕಟ ಅಭಿಮಾನ. ಕೆಲವರುಗಳು ಉರಿಯುವ ಮನೆಯಿಂದ ಹಿರಿಯುವ ಪ್ರಯತ್ನ ಮಾಡಿದರು. ಬೀದರ ಜಿಲ್ಲೆಗೆ ನಾವು ಬರಬಾರದೆಂದು ಕೆಲವರ ಸಂಚು. ಆಗ ಪೂಜ್ಯ ಮಾತೆ ಗಂಗಾದೇವಿಯವರು, "ಆಗಲಿ ಬಿಡಿ ಪಾಟೀಲರೇ ಧರ್ಮ ಪ್ರಚಾರಕರಿಗೆ ಜಗತ್ತು ವಿಶಾಲವಾಗಿದೆ." ಎಂದಾಗ, ಶ್ರೀ ಸುಭಾಷ್ ಪಾಟೀಲರು ಪೂಜ್ಯ ಗಂಗಾಮಾತಾಜಿಯವರಿಗೆ ಹೇಳಿದ ಮಾತು ಮನನಾರ್ಹ. "ಬೀದರ್ ಜಿಲ್ಲೆಯಲ್ಲಿ ಬಸವ ತತ್ವದ ಗಂಧಗಾಳಿಯೂ ಇಲ್ಲದಾಗ ಪಾದಯಾತ್ರೆ ಮೂಲಕ ಬಸವ ತತ್ವವನ್ನು ಬಿತ್ತಿದವರು ಪೂಜ್ಯ ಲಿಂಗಾನಂದ ಅಪ್ಪಾಜಿ. ಅದನ್ನು ಬೆಳೆಸಿದವರು ಪೂಜ್ಯ ಮಾತಾಜಿ. ಹೀಗಾಗಿ ಅವರು ನಮ್ಮ ಬೀದರ್ ಜಿಲ್ಲೆಯ ಗುರುಗಳು. ನೀವು ನಮ್ಮ ಬೀದರ್ ಜಿಲ್ಲೆಯ ಮಗಳು; ಅಂದಾಗ ನಿಮ್ಮನ್ನು ಬರಬಾರದೆಂದು ಅನ್ನುವ ದಾರ್ಷ್ಟ್ಯ ಯಾರಿಗಿದೆ? ನಾವಿರುವದು ಏತಕ್ಕಾಗಿ?".

ಸುಭಾಷ್ ಪಾಟೀಲರ ಆತ್ಮಬಲ ಎಂತಹುದು ನೋಡಿರಿ. ಅವರ ಧೈರ್ಯ, ತತ್ವನಿಷ್ಠೆ ಅಪಾರ, ವ್ಯವಹಾರ ಜ್ಞಾನ ಬಹಳ. ಉತ್ತಮವಾದ ಸಲಹೆಗಳನ್ನು ನೀಡುತ್ತಿದ್ದರು. ಕಾಲಿನ ತೊಂದರೆ ಇದ್ದರೂ ನಮ್ಮ ಎಲ್ಲ ಸಮ್ಮೇಳನ, ಕಾರ್ಯಕ್ರಮಗಳಲ್ಲಿ ತಪ್ಪದೆ ಭಾಗಿಯಾಗುತ್ತಿದ್ದರು. ವಯಸ್ಸು 55 ದಾಟಿರಲಿಲ್ಲ; ಅನಿರೀಕ್ಷಿತವಾದ ಸಾವಿನ ಸೆಳವಿಗೆ ಸಿಕ್ಕಿದ್ದು ಅವರ ಕುಟುಂಬಕ್ಕೆ ಮಾತ್ರವಲ್ಲ ಸಮಾಜಕ್ಕೆ ಮುಖ್ಯವಾಗಿ ರಾಷ್ಟ್ರೀಯ ಬಸವ ದಳಕ್ಕೆ ಭರಿಸಲಾಗದ ನಷ್ಟ. ಪ್ರತಿ ವರ್ಷದ ಶರಣ ಮೇಳಕ್ಕೆ 5000, ಕಲ್ಯಾಣ ಪರ್ವಕ್ಕೆ 5000ರೂಗಳ ದೇಣಿಗೆ ಕೊಡುತ್ತಿದ್ದುದಲ್ಲದೆ ಬಸವ ಕಲ್ಯಾಣದಲ್ಲಿ ಜಮೀನು ಖರೀದಿಸುವಾಗ, ದೆಹಲಿಯಲ್ಲಿ ಕಟ್ಟಡ ಖರೀದಿಸುವಾಗ ಐವತ್ತು ಐವತ್ತು ಸಾವಿರ ನೀಡಿದರು.

ಆಸ್ಟ್ರೇಲಿಯಾದಲ್ಲಿ ಮರಣವಾದುದರಿಂದ ಪಾರ್ಥಿವ ಶರೀರವನ್ನು ಕಾನೂನು ಬದ್ಧವಾಗಿ ಕೊಡಲು

ಅಲ್ಲಿಯ ಆಡಳಿತ ಬಹಳಷ್ಟು ಸಮಯ ತೆಗೆದುಕೊಂಡಿತು. ದಿ.13ರಂದು ಪ್ರಾಣ ಹೋಯಿತಾದರೂ ದಿ.19ರಂದು ಶರೀರವನ್ನು ವಾರಸುದಾರರಿಗೆ ಕೊಡಲಾಯಿತು. ಹೈದರಬಾದಿಗೆ ಬರುವಷ್ಟರಲ್ಲಿ ರಾತ್ರಿ ಒಂದುಗಂಟೆ. ಹೈದರಾಬಾದ್ ಬಸವ ಮಂಟಪದಲ್ಲಿಟ್ಟು ಶ್ರದ್ಧಾಂಜಲಿ ಸಲ್ಲಿಸಲಾಯಿತು. 20-4-2088ರಂದು ಬೀದರಿನ ಮನೆಯ ಮುಂದೆ ದರ್ಶನಕ್ಕೆ ಜನ ಸಾಗರವೇ ಹರಿದು ಬಂದಿತು. ನಂತರ ಬೀದರಿನ ಬಸವ ಮಂಟಪಕ್ಕೆ ಒಯ್ದು, ನಂತರ ಅವರ ಸ್ವಂತ ಸ್ಥಳ ಗಾದಗಿಗೆ ಒಯ್ಯಲಾಯಿತು. ಅಂದು ಅಕ್ಕಮಹಾದೇವಿ ಜಯಂತಿ. ನೀಲಗಿರಿ ಜಿಲ್ಲೆಯ ಸಕಲಟ್ಟಿಯಲ್ಲಿ ನೂತನ ಬಸವ ಮಂಟಪ ಉದ್ಘಾಟನೆ ಮತ್ತು ಬಸವ ಮೂರ್ತಿಯ ಪ್ರತಿಷ್ಠಾಪನೆ ಇದ್ದುದರಿಂದ ಅನಿವಾರ್ಯವಾಗಿ ನಾನು ಸಕಲಟ್ಟಿಗೆ ಬಂದಿದ್ದೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ಪೂಜ್ಯ ಶ್ರೀ ಸದ್ಗುರು ಚನ್ನಬಸವಾನಂದ ಸ್ವಾಮಿಗಳು ಮತ್ತು ರಾಷ್ಟ್ರೀಯ ಬಸವ ದಳದ ಪ್ರಮುಖರು ಅಂತ್ಯ ಸಂಸ್ಕಾರವನ್ನು ನೆರವೇರಿಸಿದರು. ಲಿಂ॥ ಸುಭಾಷ್ ಪಾಟೀಲರ ಆತ್ಮಕ್ಕೆ ಚಿರಶಾಂತಿ ಪ್ರಾಪ್ತವಾಗಲಿ, ಅವರ ಕುಟುಂಬ ವರ್ಗದವರಿಗೆ ಪಾಟೀಲರ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಸೃಷ್ಟಿಕರ್ತ ಲಿಂಗದೇವ ಹಾಗೂ ಧರ್ಮಗುರು ಬಸವಣ್ಣನವರು ದಯಪಾಲಿಸಲೆಂದು ಪ್ರಾರ್ಥಿಸೋಣ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಬಸವ ಧರ್ಮ ಪೀಠ
ಕೂಡಲ ಸಂಗಮ

ಶರಣ ವಾಣಿ

ಅಕ್ಷರ ಗಣಿತ ಗಾಂಧರ್ವ ಜ್ಯೋತಿಷ ಆತ್ಮವಿದ್ಯೆ ತರ್ಕ ವ್ಯಾಕರಣ
ಅಮರಸಿಂಹ ಛಂದಸ್ಸು ನಿಘಂಟು ಶಾಲಿಗೋತ್ರ ಗ್ರಹವಾದ ಗಾರುಡ
ದ್ಯೂತ ವೈದಿಕ ಶಾಸ್ತ್ರ ಸಾಮುದ್ರಿಕ ಶಾಸ್ತ್ರ ಲಕ್ಷಣ ಶಾಸ್ತ್ರ ಅಶ್ವಶಿಕ್ಷೆ
ಗಜಶಿಕ್ಷೆ ಗೋಕರ್ಣ ದಾಡಾಬಂಧ ಮೂಲಿಕಾಸಿದ್ಧಿ ಭೂಚರಚ
ಖೇಚರತ್ವ ಅತೀತ ಅನಾಗತ ವರ್ತಮಾನ ಸ್ಥೂಲ ಸೂಕ್ಷ್ಮ
ಇಂದ್ರಜಾಲ ಮಹೇಂದ್ರಜಾಲ ವಶ್ಯಾನಚೇಷ್ಟೆ ಪರಕಾಯಪ್ರವೇಶ
ದೂರದೃಷ್ಟಿ ದೂರಶ್ರವಣ ಋಗ್ಯಜುಃ ಸಾಮಾಥರ್ವಣ ಶ್ರುತಿ ಸ್ಮೃತಿ
ಆಯರ್ದಾಯ ನಷ್ಟಿಕಾಮುಷ್ಟಿ ಚಿಂತನೆ ಚೋರವಿದ್ಯೆ ಅಮೃತೋದಯ
ಭಾಷಾಪರೀಕ್ಷೆ ವೀಣಾವಿದ್ಯೆ ಭೃಂಗಿವಿದ್ಯೆ ಮಲ್ಲವಿದ್ಯೆ ಶಾಸ್ತ್ರವಿದ್ಯೆ
ಧನುರ್ವಿದ್ಯೆ ಅಗ್ನಿಸ್ತಂಭ ಜಲಸ್ತಂಭ ವಾಯುಸ್ತಂಭ ವಾದವಶ್ಯ
ಅಂಜನಾಸಿದ್ಧಿ ಘುಟಿಕಾಸಿದ್ಧಿ ಮಂತ್ರ ತಂತ್ರ ಸಿದ್ಧಿ
ಇವೆಲ್ಲವ ಕಲಿತಡೇನು ಅರವತ್ನಾಲ್ಕು ವಿದ್ಯಾಪ್ರವೀಣನೆನಿಸಿಕೊಂಬನಲ್ಲದೆ
ಲಿಂಗವಂತನೆನಿಸಿಕೊಂಬುದಿಲ್ಲ. ಲಿಂಗವುಳ್ಳ ಶಿವಭಕ್ತಂಗೆ
ಇವರೆಲ್ಲರೂ ಕೂಡಿ ಸರಿಬಾರದೆಂದ ನಮ್ಮ ಕಲಿದೇವರದೇವ.

\- ವೀರ ಗಣಾಚಾರಿ ಮಡಿವಾಳ ಮಾಚಿದೇವರು

ನೀಲಗಿರಿಯ ನಿಸರ್ಗ ವೈಭವ

ನಳನಳಿಸುತ್ತಿದೆ ನೀಲಗಿರಿಯ ನಿಲುವು
ಮೇಳೈಸಿಕೊಂಡು ಪರಶಿವ ಚೆಲುವನು ॥ ಪಲ್ಲವಿ ॥

ಮುಗಿಲನು ಮುಟ್ಟುವ ಗಿರಿ ಶೃಂಗಗಳಿಂ। ಸೊ
ಬಗಿನಿಂ ಚುಂಬಿಪ ಮೇಘಾಳಿಗಳಿಂ ॥ ಅ.ಪ ॥

ಸುಯ್ಯನೆ ತಾಡಿಸಿ ಗಿರಿಗಳ ಭೇರಿಯ
ರೊಯ್ಯನೆ ಬಡಿದು ನಾದವ ಮಿಡಿಸುವ
ತಣ್ಣನೆ ಬೀಸುತ ತಂಪನ್ನೆರೆಯುವ
ಸುಣ್ಣನೆ ಅಲೆಯುವ ಕುಳಿರ್ಗಾಳಿಗಳಿಂ ॥ 1 ॥

ಗಿರಿದ್ವಯ ಮಧ್ಯದ ಬೈತಲೆಯಲ್ಲಿ ಒ
ಯ್ಯಾರದಿ ಬಳುಕುವ ಸುಂದರ ಝರಿಗಳು
ಜುಳು ಜುಳು ಮಿಡಿವ ಶೃತಿಯ ಹಿನ್ನೆಲೆಯಲ್ಲಿ
ಚಿಲಿಪಿಲಿ ಹಾಡುವ ಹಕ್ಕಿಯ ಗಾನದಿಂ ॥ 2 ॥

ಧೂಪದ ಹೊಗೆಯೊಲು ತೆರೆತೆರೆಯಾಗಿ
ಮೋಪಿನಿಂ ತೇಲುತ ಬೆಟ್ಟವ ಬಳಸುವ
ತಿಳಿ ಬಿಳಿ ಮೋಡದ ಸುಂದರ ಸೆರಗು
ರವಿ ಮೊಗ ಮುಚ್ಚುವ ಮುಸುಕಾಗಿರಲು ॥ 3 ॥

ಸೊಂಪಾದ ಹಸುರಿನ ಪತಲ ಉಟ್ಟು
ಕೆಂಪಾದ ಸೂರ್ಯನ ಹಣೆ ಬೊಟ್ಟನಿಟ್ಟು
ಸಚ್ಚಿದಾನಂದನ ಸೊಬಗಿನ ಮಡದಿ
ಉದಕ ಮಂಡಲದಲ್ಲಿ ನೀಲಗಿರಿ ನೀರೆ ॥ 4 ॥

ಸಕಲಟ್ಟಿಯಲ್ಲಿ ಬಸವ ಮೂರ್ತಿಯ ಪ್ರತಿಷ್ಠಾಪನೆ

ಅಕ್ಕಮಹಾದೇವಿ ಜಯಂತಿ ಚೈತ್ರ ಮಾಸದ ಪೌರ್ಣಮೆಯಂದು. ಅಂದು ದೇವವಾರವೂ ಒದಗಿತ್ತು. ನೀಲಗಿರಿ ಜಿಲ್ಲೆಯ ಸಕಲಟ್ಟಿ ಗ್ರಾಮದಲ್ಲಿ ಬಸವ ಮಂಟಪದ ಉದ್ಘಾಟನೆ ಮತ್ತು ಬಸವ ಮೂರ್ತಿಯ ಪ್ರತಿಷ್ಠಾಪನೆ. ಇದು ನಮ್ಮ ಮತ್ತು ನೀಲಗಿರಿ ಜಿಲ್ಲೆಯ ಶರಣರ ಬಹುದಿವಸಗಳ ಕನಸು. ಅತ್ಯುತ್ಸಾಹದಿಂದ ನಮ್ಮನ್ನು ಆಹ್ವಾನಿಸಿ ಆ ಶರಣರು ಸಂಭ್ರಮದ ಸಿದ್ಧತೆಯಲ್ಲಿ ತೊಡಗಿದ್ದರು.

ದಿ.18ರಂದು ಬೆಂಗಳೂರಿನಿಂದ ಹೊರಟೆನು. ಮೈಸೂರು ಮಾರ್ಗವಾಗಿ ಸಾಗಿ ಗುಂಡ್ಲುಪೇಟೆ ದಾಟಿ, ಬಂಡೀಪುರಕ್ಕೆ ಬಂದಾಗ ಆಗಲೇ ರಾತ್ರಿ 7 ಗಂಟೆ. ಹೆದ್ದಾರಿಯ ಮೇಲೆ ಒಂದು ತಾಯಿ ಆನೆ ತನ್ನ ಮರಿಯೊಡನೆ ನಿಂತಿತ್ತು ಗಾಡಿ ನಿಲ್ಲಿಸಿ ನಿಂತೆವು. ನಿಧಾನವಾಗಿ ಪಕ್ಕದ ಕಾಡಿನಲ್ಲಿ ಮರೆಯಾಯಿತು ರಸ್ತೆಯ ಎರಡೂ ಬದಿಗಳಲ್ಲಿ ಜಿಂಕೆಗಳು ಹತ್ತಾರು ಸಂಖ್ಯೆಯಲ್ಲಿ ಮೇಯುತ್ತಿದ್ದವು. ಕಾರಿನ ಲೈಟು ನೋಡುತ್ತಿದ್ದವು. ಅವಕ್ಕೆಲ್ಲ ರೂಢಿಯಾಗಿದೆ ಯಾದ್ದರಿಂದ ವಾಹನಗಳ ಶಬ್ದದಿಂದ ಅವು ವಿಚಲಿತವಾಗಲಿಲ್ಲ.

ಬಂಡೀಪುರ ದಾಟಿದ ಮೇಲೆ ತಮಿಳುನಾಡು ಗಡಿ, ಅಲ್ಲಿ ಮಧುಮಲೈ ಅರಣ್ಯ. ಹೋಗುತ್ತ ಹೋಗುತ್ತ ಅರಣ್ಯವು ದಟ್ಟವಾಗುತ್ತದೆ. ದಾರಿಯಲ್ಲಿ "ಹುಲಿಗಳು ಸಂಚರಿಸುವ ಪ್ರದೇಶ, ಆನೆಗಳು ಸಂಚರಿಸುವ ಪ್ರದೇಶ. ಎಚ್ಚರಿಕೆಯಿಂದ ಸಾಗಿರಿ." ಎಂದೆಲ್ಲ ಸೂಚನಾ ಫಲಕಗಳಿರುತ್ತವೆ. ಮುಂದೆಲ್ಲ ಬೆಟ್ಟವನ್ನು ಏರುತ್ತ ಸಾಗಬೇಕು. ಗುಡಲೂರು ಮೇಲೆ ಒಂದು ಮಾರ್ಗವಿದೆ. ಮಾಸನಗುಡಿ, ಕಲ್ಲತ್ತಿ ಮಾರ್ಗವಾಗಿ ಒಂದು ದಾರಿಯಿದೆ. ಎರಡನೆಯದೇ ಸಮೀಪದ ದಾರಿ. ಅದರಲ್ಲೇ ಸಾಗಿದೆವು. ಮಾಸನಗುಡಿ, ಕಲ್ಲತ್ತಿ, ಹಿಟ್ಟಕಲ್ಲು, ಇಳಿ ತೊರೈ - ಇವೆಲ್ಲ ಕನ್ನಡ ಪದಗಳೆ. ಇವೆಲ್ಲ ಟಿಪ್ಪು ಸುಲ್ತಾನನ ಆಡಳಿತಕ್ಕೆ ಒಳಪಟ್ಟ ಅಚ್ಚ ಕನ್ನಡದ ಪ್ರದೇಶಗಳೇ ಆಗಿದ್ದವು. ಹೇರ್‌ಪಿನ್ ತಿರುವು, ಹಾವಿನ ನಡಿಗೆಯ ರಸ್ತೆಯಲ್ಲಿ ಗಾಡಿ ನಿರಂತರವಾಗಿ ಏರುತ್ತ ಹೋಗಬೇಕು. ಅತ್ಯಂತ ಎತ್ತರವಾದ ಬೆಟ್ಟಗಳು ಒಂದು ಕಡೆ, ಆಳವಾದ ಕಣಿವೆ ಮತ್ತೊಂದು ಕಡೆ; ಬೃಹದಾಕಾರದ ಹೆಮ್ಮರಗಳು.

ಊಟಿ ಮತ್ತು ಕೂನೂರು ಎರಡು ನಗರಗಳು. ಇವುಗಳ ಮಧ್ಯೆ ಕ್ರಾಸ್‌ನಲ್ಲಿ ಇಳಿದು ಸಕಲಟ್ಟಿಗೆ ಹೋಗಬೇಕು. ಆಗಲೇ ರಾತ್ರಿ ಹತ್ತೂವರೆ ಆಗಿತ್ತು. ಅಂಥ ಗುಡ್ಡಗಳ ತುದಿಯವರೆಗೂ ವಿದ್ಯುತ್ ದೀಪಗಳ

ವ್ಯವಸ್ಥೆಯಾಗಿದೆ. ಹೀಗಾಗಿ ಬೃಹದಾಕಾರದ ಬೆಟ್ಟಗಳಲ್ಲಿ ಕೆಳಗಿನಿಂದ ಮೇಲಿನ ತನಕ ಅಲ್ಲಲ್ಲೇ ಇರುವ ಹಟ್ಟಿಗಳಲೆಲ್ಲ ಬೀದಿ ದೀಪದ ಪ್ರಖರ ಬೆಳಕಿನಿಂದ ಇಡೀ ಬೆಟ್ಟಕ್ಕೆ ವಿದ್ಯುತ್ ಅಲಂಕಾರ ಮಾಡಿದಂತೆ ಕಾಣುತ್ತದೆ. ಜೊತೆಗೆ ತುಂಬು ಚಂದ್ರನ ನಿರ್ಮಲ ಬೆಳಕು ಗುಡ್ಡದ ಮೇಲೆ, ಕಣಿವೆಯ ಮೇಲೆಲ್ಲ ಹರಡಿತ್ತು. ಕಡಿದಾದ ಇಳಿಜಾರಿನಲ್ಲಿ ಸಾಗಿ, ಪುನಃ ಏರಿನಲ್ಲಿ ಸಕಲಟ್ಟಿಗೆ ಸಾಗಬೇಕಾಗಿತ್ತು. ಶರಣ ಚಂದ್ರಶೇಖರ ಸ್ವಾಮಿ ಮತ್ತು ಮಿತ್ರರು ಊಟಿಯ ಮುಖ್ಯ ರಸ್ತೆಗೆ ಜೀಪಿನಲ್ಲಿ ಬಂದು ನಮ್ಮನ್ನು ಮುನ್ನಡೆಸಿದರು. ರಾತ್ರಿ ಹನ್ನೊಂದು ಗಂಟೆಗೆ ಸಕಲಟ್ಟಿಗೆ ಬಂದೆವು. ಬಸವ ಮಂಟಪದಲ್ಲಿ ನಡೆಯುತ್ತಿದ್ದ ವಚನಗಳ ಭಜನೆಯ ಧ್ವನಿ ಗಾಳಿಯಲ್ಲಿ ತೇಲಿ ಬರುತ್ತಿತ್ತು. ಮುಂದಿನ ರಸ್ತೆ ತೀರಾ ಏರು. ನಮ್ಮ ಗಾಡಿ ಹತ್ತಲಿಲ್ಲ. ಜೀಪಿನವರು ಬಂದು ನಮ್ಮನ್ನು ಹತ್ತಿಸಿಕೊಂಡರು. ಶರಣ ಬಂಧುಗಳು ಸ್ವಾಗತಿಸಿ, ಶರಣ. ಜೆ.ರಾಜು ಅವರ ಮನೆಗೆ ಕರೆದೊಯ್ದರು.

ಮರುದಿನ ಸುಪ್ರಭಾತದಲ್ಲಿ ಎದ್ದು ಕಿಟಕಿಯಿಂದ ಹೊರಗೆ ಕಣ್ಣು ಹಾಯಿಸಿದರೆ ಅದ್ಭುತವಾದ ದೃಶ್ಯ ವೈಭವ ಕಣ್ಣಿಗೆ ಕಟ್ಟಿತು. ನಾವಿದ್ದುದು ಎತ್ತರವಾದ ಬೆಟ್ಟದ ಮಧ್ಯಭಾಗದಲ್ಲಿ. ಎದುರಿನ ಪೂರ್ವ ದಿಕ್ಕಿನಿಂದ ಸೂರ್ಯ ಮೆಲ್ಲನೆ ಏರುತ್ತ ಬಂದಂತೆ ಕೆಳಗಿನ ಊರುಗಳು ಮತ್ತು ಟೀ ತೋಟ, ಎತ್ತರವಾದ ಹಸಿರಿನಿಂದ ಕೂಡಿದ ಬೆಟ್ಟಗಳ ಮೇಲೆ ತನ್ನ ಕೆಂಬಣ್ಣದ ನಂತರ ಹೊಂಬಣ್ಣದ ಕಿರಣಗಳ ಚೆಲ್ಲತೊಡಗಿದೆ. ಮಾನವನ ಸಾಹಸ ಮೆಚ್ಚಬೇಕು. ಅಂಥ ಎತ್ತರವಾದ ಗುಡ್ಡಗಳ ತುದಿಯವರೆಗೂ ಕಾಡು ಕಡಿದು ಟೀ ತೋಟ ಮಾಡಿದ್ದಾನೆ. ಒಂದೇ ಎತ್ತರಕ್ಕೆ ಕತ್ತರಿಸಲ್ಪಟ್ಟ ಟೀ ಗಿಡಗಳು ಹಸಿರು ಬಣ್ಣದ ದಪ್ಪನಾದ ರತ್ನಗಂಬಳಿ ಹಾಸಿದಂತೆ ತೋರುತ್ತದೆ. ಟೀ ತೋಟದ ಮಧ್ಯೆ ಕಟ್ಟಲ್ಪಟ್ಟ ಮನೆಗಳು, ಗ್ರಾಮಗಳು ಮಧ್ಯೆ ಮಧ್ಯೆ ಬೆಂಕಿ ಪೊಟ್ಟಣ ಜೋಡಿಸಿದಂತೆ ಕಾಣುತ್ತದೆ. ವರ್ಷದಲ್ಲಿ ಏಪ್ರಿಲ್ -ಮೇ ಎರಡು ತಿಂಗಳು ಅತ್ಯಂತ ಉತ್ತಮ ಹವೆ ಇರುತ್ತದೆ, ಅದಕ್ಕೆ ಮೊದಲು ವಿಪರೀತ ಚಳಿ. ಜೂನ್ ನಂತರ ವಿಪರೀತ ಮಳೆ. ಈಗ ಹವೆಯು ಸಮಶಿತೋಷ್ಣದಲ್ಲಿ; ರಾತ್ರಿ ಚಳಿ ಅನ್ನಿಸಲಿಲ್ಲ.

ಬೆಳಿಗ್ಗೆ 8 ಗಂಟೆಗೆ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ ಬಸವೇಶ್ವರ ಪೂಜಾವ್ರತವನ್ನು ಆರಂಭಿಸಿದರು. ಒಂಬತ್ತೂವರೆಯಿಂದ ಮಂತ್ರಪಠಣ ಮಾಡಿ ನಾನು ಶ್ರೀ ಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಪುಷ್ಪವೃಷ್ಟಿ ಮಾಡಿಸಿ, ಆರತಿ ಮಾಡಿ ಪ್ರತಿಷ್ಠಾಪನೆ ಮಾಡಿದೆನು. ಮೂರ್ತಿಯು ಬಹಳ ಸುಂದರವಾಗಿ ಮೂಡಿ ಬಂದಿದೆ. ಅಮೃತ ಶಿಲೆಯ ಹಾಸುಗಲ್ಲು ಹಾಕಿರುವ ಬಸವ ಮಂಟಪವು ಬಹಳ ಸುಂದರವಾಗಿದೆ. ನಂತರ ತೆರೆದ ಜೀಪಿನಲ್ಲಿ ಮೆರವಣಿಗೆಯ ಮೂಲಕ ಶರಣರು ಹಾಡುತ್ತ ನರ್ತಿಸುತ್ತ ನನ್ನನ್ನು ವೇದಿಕೆಗೆ ಭಕ್ತಿಯಿಂದ ಕರೆದೊಯ್ದರು.

ಉದ್ಯಮಿ ಶರಣ.ನಾಗರಾಜ ಅವರಿಂದ ಧರ್ಮಪಿತ ಬಸವಣ್ಣನವರ ಪೂಜೆಯು ನಡೆಯಿತು. ಸಮಾಜದ ಹಿರಿಯರು, ಶ್ರೀಮಂತರು, ದಾನಿಗಳೂ ಆದ ಶರಣ ನಂಜಯ್ಯ ಬಸವ ಧ್ವಜವನ್ನು ಆರೋಹಣ ಮಾಡಿದರು. ಸಕಲಟ್ಟಿ ರಾಷ್ಟ್ರೀಯ ಬಸವ ದಳದ ಸಚೇತಕ ಶಕ್ತಿಯಾದ ಶರಣ. ಚಂದ್ರಶೇಖರ ಅವರು ಎಲ್ಲರಿಗೂ ಸ್ವಾಗತಿಸಿದರಲ್ಲದೆ ಶಾಲು ಹೊದ್ದಿಸಿ ಮಾಲಾರ್ಪಣೆ ಮಾಡಿ ಗೌರವಿಸಲಾಯಿತು. ನಂತರ ಸಾಮೂಹಿಕ ಪ್ರಾರ್ಥನೆಯನ್ನು ಮಾಡಿಸಿದೆನು. ಅಲ್ಲಿಯ ಶರಣೆಯರು ಸುಶ್ರಾವ್ಯವಾಗಿ ಹಿಮ್ಮೇಳದಲ್ಲಿ ಹಾಡಿದರು. ಟೀ ಫ್ಯಾಕ್ಟರಿಯ ಮಾಲಿಕರು, ಉದ್ಯಮಿಗಳು ಆದ ಸಮಾಜದ ಮುಖಂಡ ಶರಣ.ಎಂ. ಭೋಜರಾಜನ್ ಅವರು ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

"ನೀಲಗಿರಿಯ ಪ್ರದೇಶದಲ್ಲಿ ಇರುವ ಲಿಂಗಾಯತರು ಶರಣ ಸಂಸ್ಕೃತಿಯ ವಾರಸುದಾರರು, ಸಂರಕ್ಷಕರೂ ಕೂಡ ಅಹುದು. ಇಂದು ಕನ್ನಡದಲ್ಲಿ ಬಳಕೆಯಲ್ಲಿಲ್ಲದ ವಚನ ಸಾಹಿತ್ಯದ ಪದಗಳು ನಿಮ್ಮಲ್ಲಿ ಉಳಿದುಕೊಂಡು ಬಂದಿರುವುದು ಗಮನಾರ್ಹ. ಕಲ್ಯಾಣ ಕ್ರಾಂತಿಯ ನಂತರ ಚದುರಿಬಂದ ಸಮುದಾಯ ನೀವು." ಎಂದು ನಾನು ಹೇಳಿದೆ.

"ಪ್ರತಿಯೊಂದು ಹಟ್ಟಿಯಲ್ಲೂ(Camp) ಒಂದು ಬಸವ ಮಂಟಪ ಆಗಬೇಕು. ಯಾವುದೇ ಕಾರ್ಯ ಮಾಡುವಾಗ ಬಸವ ಪೂಜೆ ಮಾಡಿ, ಬಸವ ದರ್ಶನ ಪಡೆಯುವ ಪರಿಪಾಠ ಬೆಳೆಯಬೇಕು. ಹಿಂದುಗಳಿಗೆ ಮಂದಿರ, ಕ್ರೈಸ್ತರಿಗೆ ಚರ್ಚ್, ಮುಸಲೀಮರಿಗೆ ಮಸೀದಿ, ಸಿಖ್ಖರಿಗೆ ಗುರುದ್ವಾರಗಳಿರುವಂತೆ ಲಿಂಗಾಯತರಿಗೆ ಬಸವ ಮಂಟಪಗಳು ಇರಬೇಕು." ನಾನು ಒಂದು ಮಾತು ಹೇಳಿದೆ, "ಬಸವಣ್ಣನವರು ಯಾವ್ಯಾವುದೋ ಜಾತಿಯವರಿಗೆ ಲಿಂಗಕಟ್ಟಿ, ಲಿಂಗಕಟ್ಟಿಯೂ ಮಾಂಸಾಹಾರ ಮಾಡಬಹುದೆಂದು ಹೇಳಿ ನಮ್ಮ ಧರ್ಮದ ಶುಚಿತ್ವ ಕೆಡಿಸಿದರು." ಎಂದು ಕೆಲವರು ಅಪಪ್ರಚಾರ ಮಾಡಿ ನಿಮ್ಮಲ್ಲಿ ಅಂತರ್ಗತವಾಗಿರುವ ಬಸವ ಭಕ್ತಿಯನ್ನು ಕೆಡಿಸುತ್ತಿದ್ದಾರೆ ಎಂಬುದಾಗಿ.

ಯಾಕೋ ಅಪಕ್ವ ಬುದ್ಧಿಯ ಸ್ವಾಮಿಗಳು ಲಿಂಗಕಟ್ಟಿಯೂ ಮಾಂಸಾಹಾರ ಮಾಡಬಹುದು ಎಂದು ಹೇಳಿದರೆ ಇದನ್ನು ಬಸವ ಸಿದ್ಧಾಂತ ಎಂದು ನೀವು ಭಾವಿಸಬಾರದು. ಶುದ್ಧ ಸಸ್ಯಾಹಾರಿ ಧರ್ಮವನ್ನು ಬಸವಣ್ಣನವರು ಬೋಧಿಸಿದ್ದಾರೆ. ಇಷ್ಟಲಿಂಗ ಕೊಟ್ಟವರು ಬಸವಣ್ಣನವರು.

ಆದರೆ ಒಂದು ಮಾತು ಧರ್ಮಗುರು ಬಸವಣ್ಣನವರು ಎಲ್ಲ ಜಾತಿ ಮತ ಪಂಥಗಳವರಿಗೆ ಇಷ್ಟಲಿಂಗ ದೀಕ್ಷೆ ಕೊಟ್ಟುದು ದೂರಾಲೋಚನೆಯಿಂದ. ನೀಲಗಿರಿ ಜಿಲ್ಲೆಯನ್ನೇ ನೋಡಿರಿ ಕ್ರೈಸ್ತ ಧರ್ಮ ಹೇಗೆ ಬೆಳೆಯುತ್ತಿದೆ, ಇಸ್ಲಾಂ ಸಿಕ್ಕಾಪಟ್ಟೆ ಬೆಳೆಯುತ್ತಿದೆ. ಅವರು ಮತಾಂತರ ಮಾಡುತ್ತಾರೆ ಎಂದು ನಾವು ದೂಷಿಸುವುದರಲ್ಲಿ ಏನೂ ಅರ್ಥವಿಲ್ಲ. ಮೇಲ್ಜಾತಿಯವರೆಂದು ಬೀಗುವವರು ಅನೇಕ ಜಾತಿಗಳವರನ್ನು ಅಸ್ಪೃಶ್ಯರನ್ನಾಗಿ ಕಂಡುದರಿಂದ ಅವರು ತಿರಸ್ಕಾರ ಸಹಿಸಿಕೊಳ್ಳಲಾರದೆ ಮತಾಂತರ ಹೊಂದುತ್ತಾರೆ. ದಲಿತರ ದಾಸಪ್ಪ ಬಂದರೆ ದೂರವಿಡುವ ನೀವು ಆತ ಮತಾಂತರ ಹೊಂದಿ ಕ್ರಿಶ್ಚಿಯನ್ನರ ಜೋಸೆಫ್ ಆಗಿ ಬಂದರೆ ಕೈ ಕುಲುಕುತ್ತೀರಿ. ಅಂದಾಗ ಅವರು ಏಕೆ ಮತಾಂತರವಾಗುವುದಿಲ್ಲ? ಆದ್ದರಿಂದ ಅಂತರವಲೋಕನ ಮಾಡಿಕೊಳ್ಳಿರಿ. ಎಂತೆಂಥವರಿಗೋ ದೀಕ್ಷೆ ಕೊಡಲು ನಾನು ಹೇಳುವುದಿಲ್ಲ. ಅವರ ಹೃದಯ ಪರಿವರ್ತನೆ ಮಾಡಿ, ಸದಾಚಾರಕ್ಕೆ ತಂದು ಏಕೆ ದೀಕ್ಷೆ ಕೊಡಬಾರದು. ನಮಗೆ ಸಿಕ್ಕಿರುವ ಲಿಂಗಾಯತ ಧರ್ಮದ ಹಣ್ಣನ್ನು ಹಂಚಿಕೊಂಡು ಏಕೆ ತಿನ್ನಬಾರದು ?'' ಎಂದು ಹೇಳಿದೆ.

ಅಲ್ಲಿರುವ ಲಿಂಗಾಯತರಲ್ಲಿರುವ ಒಂದು ಗುಂಪಿನವರು ಬಸವಣ್ಣನವರ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಹಿನ್ನೆಲೆಯಲ್ಲಿ ಈ ಮಾತು ಹೇಳಿದೆ. ಐ.ಎ.ಎಸ್ ತರಬೇತಿ ಅಕ್ಯಾಡಮಿ, ಕೊಯಿಮತ್ತೂರಿನ ಡೀನ್ ಆದ ಡಾ|| ಎಂ.ಪದ್ಮನಾಭನ್ ಅವರು ಮಾತನಾಡಿ, ಮಾತಾಜಿಯವರ ಭಾಷಣ ಬಹಳ ಸ್ಫೂರ್ತಿದಾಯಕವಾಗಿತ್ತು. ಅದರಲ್ಲಿ ಧಾರ್ಮಿಕ ಪ್ರಜ್ಞೆ ಮಾತ್ರವಲ್ಲ ರಾಷ್ಟ್ರೀಯ ಪ್ರಜ್ಞೆ ಕೂಡ ಇದೆ ಎಂದು ಹೇಳಿದರಲ್ಲದೆ ಲಿಂಗಾಯತ ಧರ್ಮ ಇನ್ನಷ್ಟು ಪ್ರಗತಿ ಪರ, ವೈಚಾರಿಕ ಧರ್ಮ ಎಂಬುದು ಇಂದು ತಿಳಿಯಿತು ಎಂದರು. ಬಸವಣ್ಣನವರು ಕಾರ್ಲ್‌ಮಾರ್ಕ್ಸ್‌ಗಿಂತಲೂ ಮುಂದುವರಿದ ವಿಚಾರಧಾರೆಯವರು. ನಾನು ಈ ಬಗ್ಗೆ ವಿಶೇಷ ಅಧ್ಯಯನ ಮಾಡಲಿರುವೆ.'' ಎಂದರು.

ದೂರದರ್ಶನದ ನಿರ್ದೇಶಕರಾದ ಎಸ್.ಆನಂದನಾರಾಯಣನ್ ಮಾತನಾಡಿ, ಇಂಥ ಒಂದು ಸಣ್ಣ ಗ್ರಾಮ (ಹಟ್ಟಿ)ದಲ್ಲಿ ಇಷ್ಟು ದೊಡ್ಡ, ಅರ್ಥಗರ್ಭಿತ ಸಮಾರಂಭ ನಡೆಸಿದ್ದು ಅಭಿನಂದನೀಯ. ಜನರಲ್ಲಿ ಎಂತಹ ಭಕ್ತಿ ಶ್ರದ್ಧೆ ಇದೆ! ನಾನು ಈ ಕಾರ್ಯಕ್ರಮದ ಸಮಗ್ರ ಚಿತ್ರಣವನ್ನು ದೂರದರ್ಶನದಲ್ಲಿ ಕೊಡುತ್ತೇನೆ. ಇಲ್ಲಿಯ ಜನರ ಶಿಸ್ತು ಮತ್ತು ಸಾತ್ವಿಕತೆ ನನ್ನನ್ನು ಮಂತ್ರ ಮುಗ್ಧಗೊಳಿಸಿವೆ.'' ಎಂದರು.

ಕಾರ್ಯಕ್ರಮದ ನಂತರ ಮಹಾಪ್ರಸಾದ ವಿತರಣೆಯಾಯಿತು. ಮರುದಿನ ಕೂನೂರಿನ ಸುಪ್ರಸಿದ್ಧ ಸಿಮ್ಸ್‌ಪಾರ್ಕ್ ನೋಡಿದೆವು. 150 ವರ್ಷಗಳಿಗೂ ಹಿಂದಿನ ಹೆಮ್ಮರಗಳನ್ನು ನೋಡಿದೆವು. ನಂತರ ಲ್ಯಾಂಬ್ಸ್‌ರಾಕ್, ಡಾಲ್ಫಿನ್ ನೋಸ್, ಕ್ಯಾಥರೀನ್ ಫಾಲ್ಸ್ ಮುಂತಾದ ರಮಣೀಯ ಸ್ಥಳಗಳನ್ನು ನೋಡಿದೆವು. ಅತ್ಯಂತ ಹೆಚ್ಚಿನ ಎತ್ತರದ ಒಂದು ಗಿರಿಯ ಸಾಲು ಇದೆ. ದೊಡ್ಡ ಬೆಟ್ಟ ಅತಿ ಎತ್ತರದ ಪಾಯಿಂಟ್ ಅಲ್ಲಿ ನಿಂತರೆ ದೂರದಲ್ಲಿರುವ ಮೆಟ್ಟುಪಾಳ್ಯಮ್, ಕೊಯಮತ್ತೂರು ಮುಂತಾಗಿ ಕಾಣ ಬರುತ್ತವೆ. ಗಿರಿಗಳ ಗರ್ಭದಲ್ಲಿ ಅಲ್ಲಲ್ಲೇ ಧುಮುಕುವ ದಬೆದಬೆಗಳು ದೂರದರ್ಶಕದಲ್ಲಿ ಕಾಣಿಸುತ್ತವೆ. ಮರುದಿವಸ ಊಟಿಯಲ್ಲಿರುವ ಸರೋವರದಲ್ಲಿ ಬೋಟಿಂಗ್‌ಗೆ ಹೋದೆವು. ಶರಣ ಬಂಧುಗಳಲ್ಲಿ ಒಬ್ಬರು ದೊಡ್ಡ ಹುದ್ದೆಯಲ್ಲಿ ಇರುವುದರಿಂದ ಸ್ವತಃ ಮೇನೇಜರ್ ದೊರೈ ಅವರೇ ಬಂದು ಎಲ್ಲೆಡೆ ತೋರಿಸಿದರು. ಮಕ್ಕಳ ಪಾರ್ಕ್‌ದಲ್ಲಿ ಅಡ್ಡಾಡಿ ಬಂದೆವು. ಶ್ರೀ ಕೃಷ್ಣಮೂರ್ತಿ ಎಂಬುವವರ ಟೀ ಮ್ಯುಸಿಯಮ್ ಅನ್ನು, ಹಸಿ ಸೊಪ್ಪನ್ನು ತಂದು ಯಂತ್ರದಿಂದ ಒಣಗಿಸಿ ಪುಡಿಮಾಡಿ ಹೇಗೆ ಪ್ಯಾಕೆಟ್ ಮಾಡಲಾಗುವುದು ಎಂಬುದನ್ನು ತೋರಿಸಿದರು.

ದಿ.22.4.2008ರಂದು ಸಂಜೆ ಡಾ|| ಶಾಂತಾ ಅವರ ಮನೆಯನ್ನು ಸಂದರ್ಶಿಸಿ ಅಲ್ಲಿಂದ ಹೊರಟೆವು. ಬೆಳಿಗ್ಗೇನೆ ಶರಣ ಬಂಧುಗಳೆಲ್ಲ ಬಂದು ಭಾವುಕರಾಗಿ ಬೀಳ್ಕೊಟ್ಟಿದ್ದರು. ರಾತ್ರಿ ಎಂಟಕ್ಕೆ ಹೊರಟವರು ಬೆಳಗಿನ ಜಾವ ಮೂರುವರೆಗೆ ಬೆಂಗಳೂರು ತಲ್ಪಿದೆವು.

ಸಕಲಟ್ಟಿಯ ಶರಣರ ಭಕ್ತಿ 12ನೆಯ ಶತಮಾನದ ಶರಣರ ಭಕ್ತಿಯನ್ನು ನೆನಪಿಗೆ ತರುತ್ತದೆ. ಗುರು ನಿಷ್ಠೆ - ಲಿಂಗ ನಿಷ್ಠೆ - ಜಂಗಮ ನಿಷ್ಠೆ ಸಂಗನ ಬಸವಣ್ಣನ ಸಂತತಿಗಲ್ಲದೆ ಸಾಧ್ಯವಾಗದು ಎಂಬ ಶರಣರ ಮಾತಿನಂತೆ ತ್ರಿವಿಧ ನಿಷ್ಠೆ ತುಂಬಿ ತುಳುಕುತ್ತದೆ. ಶರಣರು, ಶರಣೆಯರು, ಮಕ್ಕಳು ಎಲ್ಲರೂ ಸಾಮೂಹಿಕವಾಗಿ ಭಕ್ತಿ ಪರವಶರಾಗಿ ಭಜನೆ ಮಾಡುವುದಂತೂ ಸ್ಮರಣೀಯ. ಬಂದವರಿಗೆ ಮಾಡುವ ಉಪಚಾರ, ವಿನಯ ಅನುಪಮ. ಹಿರಿಯರನ್ನು ಅಯ್ಯಾ ಎಂದು ಗೌರವಿಸುತ್ತಾರೆ. ಪರಸ್ಪರ ಭೇಟಿಯಾದಾಗ ಶರಣು ಶರಣಾರ್ಥಿ ಹೇಳುತ್ತಾರೆ. ಕೆಲಸಗಳನ್ನು ಹಂಚಿಕೊಂಡು ಮಾಡುತ್ತಾರೆ. ಅಂದಿನ ಕಲ್ಯಾಣದ ಶರಣರ ಮಾದರಿಯಾಗಿ ಕಾಣಬರುತ್ತಾರೆ.

ವಚನ ದುಂದುಭಿ -14

- ಶರಣ ಸಚ್ಚಿದಾನಂದ ಚಟನಳ್ಳಿ

1. ಕಾರ್ತಿಕದ ಕತ್ತಲಲ್ಲಿ ಆಕಾಶದೀಪವಾಗಿ ನೀ ಬಂದೆ, ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ ಎಂಟು ಶತಮಾನಗಳ ಹಿಂದೆ ಎಂದು ಯಾರು ಯಾರ ಬಗ್ಗೆ ಹೇಳಿದ್ದಾರೆ?
2. ''ಲಿಂಗಾಂಗಿಗಳಲ್ಲದವರ ಶರಣರ ಸಂಗವಿಲ್ಲದವರ ಕಂಡಡೆ ನಾಚುವೆ; ಅವರ ನುಡಿ ಎನಗೆ ಸಮನಿಸದಯ್ಯ'' ಇದು ಯಾರ ವಚನದ ನುಡಿ?
3. ''ನಾನು ನಿರ್ವಾಣದಲ್ಲಿ ನಿಂದು ಅಗಮ್ಯನಾದೆನೆಂದಡೆ ಭಕ್ತಿ ಕಂಪಿತನೆನಿಸಿ ಎನ್ನ ತನ್ನಲ್ಲಿಗೆ ಬರಿಸಿಕೊಂಡನೊಬ್ಬ ಶರಣ'' ಭಕ್ತಿ ಕಂಪಿತನೆನಿಸಿ ಯಾರು ಯಾರಿಗೆ ಬರಿಸಿಕೊಂಡರು?
4. ''ಕಾಯದಲ್ಲಿ ಕಳವಳವಿರಲು, ಪ್ರಾಣದಲ್ಲಿ ಮಾಯೆಯಿರಲು ಏತರ ಮನ? ಇದೇತರ ನಿರ್ವಾಣ? ಮಹಾಲಿಂಗ ತ್ರಿಪುರಾಂತಕನು ನಿನ್ನ ಸಂಸಾರಿಯೆಂಬನಲ್ಲದೆ ಸಜ್ಜನೆಯೆಂದು ಕೈವಿಡಿವವನಲ್ಲ ಕೇಳಾ ಮರುಳೆ?'' ಎಂದು ಯಾರು ಯಾರಿಗೆ ಹೇಳಿದರು?
5. ''ಕಾಮಿಯಾಗಿ ನಿಃಕಾಮಿಯಾದಳು, ಸೀಮೆಯಲ್ಲಿದ್ದು ನಿಸ್ಸೀಮೆಯಾದಳು ಭವಿಯ ಸಂಗವ ತೊರೆದು, ಭವಬಾಧೆಯ ಹರಿದಳು, ಬಸವಣ್ಣ ಗತಿಯೆಂದು ಬರಲು ನಾನು ಮಡಿಯ ಹಾಸಿ ನಡೆಸಿದೆ, ನಡೆವುದಕ್ಕೆ ಹಾಸಿದ ಮಡಿಯ ಸರ್ವಾಂಗಕ್ಕೆ ಹೊದ್ದಳು''? ಎಂದು ಯಾರು ಯಾರ ಬಗ್ಗೆ ಹೇಳಿದ್ದಾರೆ?
6. ಗುರು ಬಸವಣ್ಣನವರ ಮಹಾಘನದ ನಿಲುವಿನ ಪ್ರಭೆಯನ್ನುಟ್ಟು ತಳುವೆಳಗಾದ ಸ್ವಯಂಜ್ಞಾನಿ ಯಾರು?
7. ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ-ಇದು ಯಾರ ವಚನಾಂಕಿತ?
8. ''ಅನಿಮಿಷಂಗೆ ಲಿಂಗವ ಕೊಟ್ಟಾತ ಬಸವಣ್ಣ ಆ ಲಿಂಗ ನಿನಗೆ ಸೇರಿತ್ತಾಗಿ ಬಸವಣ್ಣನ ಸಂಪ್ರದಾಯದ ಕಂದನು ನೋಡಾ ನೀನು'' ಎಂದು ಯಾರು ಯಾರಿಗೆ ಹೇಳಿದರು?
9. ಸುಯಿಧಾನ ಸುಗ್ರಂಥ ಮಾಲೆಯಿಂದ ಮಾರ್ಚ್‌ನಲ್ಲಿ ಬಿಡುಗಡೆಯಾದ ಗ್ರಂಥ ಯಾವುದು?
10. ಇಷ್ಟಲಿಂಗವನ್ನು ದೇಹದಿಂದ ಅಗಲಿಸಿದರೆ ಅದು ಫಲ ಕೊಡಲಾರದೆಂದು ಹೇಳಿರುವ ಚನ್ನಬಸವಣ್ಣನವರ ವಚನ ಯಾವುದು?
11. ಇಷ್ಟಲಿಂಗ ಪೂಜೆಯಲ್ಲಿ ಎಷ್ಟು ಭಾಗಗಳಿವೆ? ಅವು ಯಾವುವು?
12. ಸಿದ್ಧರಾಮ ಚರಿತೆಯನ್ನು ಯಾರು ಬರೆದಿದ್ದಾರೆ?
13. ಸಹಸ್ರಾರ ಚಕ್ರ ದೇಹದ ಯಾವ ಭಾಗದಲ್ಲಿರುತ್ತದೆ?
14. ಕಲ್ಯಾಣದಲ್ಲಿ ದನಗಳನ್ನು ಕಾಯುವ ಕಾಯಕ ಮಾಡುತ್ತಿದ್ದ ಶರಣ ಯಾರು?
15. ಶರಣೆ ರೇಕಮ್ಮನವರ ವಚನಾಂಕಿತವೇನು?

ವಚನ ದುಂದುಭಿ -12ರ ಸರಿ ಉತ್ತರಗಳು

1. ಸಮುಚಿತ್ತತೆ 2.ಡೋಹಾರ ಕಕ್ಕಯ್ಯ. 3.ಕಣ್ಣಿಗೆ ಶೃಂಗಾರ ಗುರು ಹಿರಿಯರ ನೋಡುವುದು, ಕಿವಿಗೆ ಶೃಂಗಾರ ಶರಣರ ಸುಗೀತಂಗಳ ಕೇಳುವುದು, ಕೈಗಳಿಗೆ ಶೃಂಗಾರ ಗುರು ಹಿರಿಯರ ನೋಡುವುದು
4. ಹರ ಭಜನೆ ಗುರುಸೇವೆ ಉರುತರದಿ ಮಾಡುತಲಿ
ಶರಣ ಗಣ ಸೇರಿ ಉಳುವೆಯೊಳು। ಮರುದಿನವೆ
ಮೆರೆಸಿದರು ತತ್ವ ಮಂಟಪವ||
5. ಬಸವಣ್ಣ ಪ್ರಿಯ ನಾಗೇಶ್ವರಲಿಂಗ 6. ನಿರ್ಭೀತ ನಿಜಲಿಂಗ
7. ಉತ್ತಂಗಿ ಚೆನ್ನಪ್ಪ 8. ಗುರು ಪ್ರಸಾದ, ಲಿಂಗ ಪ್ರಸಾದ, ಜಂಗಮ ಪ್ರಸಾದ, ಪ್ರಸಾದಿ ಪ್ರಸಾದ, ಆಪ್ಯಾಯನ ಪ್ರಸಾದ, ಸಮಯ ಪ್ರಸಾದ, ಪಂಚೇಂದ್ರಿಯವಿರಹಿತ ಪ್ರಸಾದ, ಅಂತಃಕರಣ ಚತುಷ್ಟಯ ವಿರಹಿತ ಪ್ರಸಾದ, ಸದ್ಭಾವ ಪ್ರಸಾದ, ಸಮತಾ ಪ್ರಸಾದ, ಜ್ಞಾನಪ್ರಸಾದ.
9. ಮೂಗಿನ ತುದಿಯನ್ನು ನೋಡುತ್ತ ಕಣ್ಣು ಮುಚ್ಚಿದರೆ ದೃಷ್ಟಿಯು ಹೃದಯ ಕಮಲದಲ್ಲಿ ನಿಲ್ಲುತ್ತದೆ
10. ಪೂಜ್ಯ-ಪೂಜಕ-ಪೂಜೆ ಎನ್ನುವ ಭಾವವನ್ನು ಅಳಿಯುವುದು.
11. 3-ರಾಕ್ಷಸರು ಆಕಾಶದಲ್ಲಿ ರಚಿಸಿದರೆಂದು ಹೇಳುವ ಕಬ್ಬಿಣ, ಬೆಳ್ಳಿ ಮತ್ತು ಬಂಗಾರದ ಪುರಗಳು
12. ಸಂಸಾರ ಹೇಯಸ್ಥಲ. 13. ಗುರು ಬಸವಣ್ಣನವರ ವಚನ. 14. ಅಕ್ಕಮಹಾದೇವಿ
15.

ವಚನ ದುಂದುಭಿ -12ರ ಸರಿ ಉತ್ತರ ಕೊಟ್ಟವರು

1. ಶರಣೆ ನಿರ್ಮಲಾ ಜಯದೇವ
2. ರತ್ನಮ್ಮ ಜಯಣ್ಣ, ಮೈಸೂರು

ಸೃಷ್ಟಿಕರ್ತನು ಧರ್ಮವನ್ನು ಸ್ಥಾಪಿಸುವನೆ?

ಗೆ,
ಪೂಜ್ಯ ಶ್ರೀ ಜಗದ್ಗುರು ಅನ್ನದಾನೀಶ್ವರಸ್ವಾಮಿಗಳು
ಶ್ರೀ ಅನ್ನದಾನೀಶ್ವರ ಮಠ, ಮುಂಡರಗಿ ಪೋಸ್ಟ್, ಧಾರವಾಡ ಜಿಲ್ಲೆ.

ಪೂಜ್ಯ ಶ್ರೀ ಅನ್ನದಾನೀಶ್ವರ ಸ್ವಾಮಿಗಳವರಿಗೆ ಶರಣಪ್ಪನು ಮಾಡುವ ಶರಣಾರ್ಥಿಗಳು

ವಿಷಯ : ವೀರಶೈವ ಚಿಂತನ ಸಮಾವೇಶ.

ತಮ್ಮ ನೇತೃತ್ವದಲ್ಲಿ ನಡೆದ "ವೀರಶೈವ ಚಿಂತನ ಸಮಾವೇಶ"ದಲ್ಲಿ ನೀವು ಪ್ರಸ್ತಾಪಿಸಿದ ಮೂರು ವಿಚಾರಗಳು ಈ ಕೆಳಗಿನಂತಿವೆ.

(1)ವೀರಶೈವ ಧರ್ಮವು ರೇಣುಕಾಚಾರ್ಯರಿಂದಲೂ ಆರಂಭವಾಗಿಲ್ಲ, ಬಸವಣ್ಣನವರಿಂದಲೂ ಅಲ್ಲ. ಇದು ಪರಶಿವನಿಂದ ಸ್ಥಾಪಿಸಲ್ಪಟ್ಟುದು.

(2) ವೀರಶೈವರು ಲಿಂಗ ಧರಿಸುವುದರಿಂದ "ಲಿಂಗಾಯತರು" ಎಂದು ಕರೆಯಲಾಗುತ್ತಿದೆಯೇ ಹೊರತು ಲಿಂಗಾಯತ ಸ್ವತಂತ್ರ ಧರ್ಮವಲ್ಲ.

(3) ಲಿಂಗಾಯತರು - ವೀರಶೈವರು ಬೇರೆ ಬೇರೆ ಅಲ್ಲ.

ಈ ಮೇಲಿನ ವಿಚಾರಗಳನ್ನು ನೀವು ಪ್ರತಿಪಾದಿಸಿದ್ದೀರಿ. ನಿಮ್ಮ ವಿಚಾರಧಾರೆ ನೋಡಿ ನನಗೆ ನಗು ಬಂತು ಮತ್ತು ಇದು ಎಂತಹ ದುರ್ದೈವ ಎಂದು ನೊಂದುಕೊಂಡೆನು.

ನಾನು ಅಮೆರಿಕಾ ಪ್ರವಾಸ ಕೈಗೊಂಡು ಚಿಕಾಗೋದಲ್ಲಿ ಇದ್ದಾಗ ಈ ಮೇಲಿನ ವಿಚಾರಗಳನ್ನು ನಾನು, ನನ್ನ ಹೆಂಡತಿ, ನನ್ನ ಮಗ ಮತ್ತು ಅಮೇರಿಕಾದಲ್ಲಿರುವ ನನ್ನ ಸ್ನೇಹಿತನೊಂದಿಗೆ ಚರ್ಚೆ ನಡೆಸಿದೆನು. ನನ್ನ ಜೊತೆ ಚರ್ಚಿಸಿದ ನನ್ನ ಸ್ನೇಹಿತ ಅಷ್ಟೇನೂ ಧಾರ್ಮಿಕ ವಿಚಾರ ತಿಳಿದವನಲ್ಲ. ಆದರೂ ಆತನ ವಿಚಾರಧಾರೆ ಅತ್ಯಂತ ಸಮಂಜಸವಾಗಿತ್ತು. ದೇವರ ಬಗ್ಗೆ ಆತನಾಡಿದ ಮಾತುಗಳಿವು.

1) God is a supernatural being who is worshipped by one and all in the world.

(2) God is the creator and proctector of this universe.

(3) Whatever He does (He means God) it is always a universal truth.

Based on the above, what sri Annadaneeswara Swamiji has said is utterly false, he said. Because Veerashaiva does not possess universal qualities. It is not heard anywhere in the world except in the tongue (mouth) of this swamiji. Veerashaiva is not a universal truth. God's creation is always universal. For ex : Creation of man and woman (Human beings) creation of Earth, (Sun, Moon, Air, Sea, Fire, Sky etc) These creations of God are universal. The above facts are true anywhere in the world. Hence, God's creations and actions are true and accepted any where in this world. ಆದ್ದರಿಂದ ಪೂಜ್ಯ ಶ್ರೀಮಾತೆ ಮಹಾದೇವಿಯವರ ಅನಿಸಿಕೆಯಂತೆ Sri Annadaneeswara Swamiji does not know philosophy and mysticism. ಅಂದರೆ ಸ್ವಾಮಿಗಳಿಗೆ ತತ್ವಜ್ಞಾನ ಮತ್ತು ದರ್ಶನ ಶಾಸ್ತ್ರವೇಗೊತ್ತಿಲ್ಲವಲ್ಲ ಎಂದುಕೊಂಡೆವು. ಈ ಮೇಲಿನ ವಿಚಾರಧಾರೆಗಳು ನನ್ನ ಸ್ನೇಹಿತನ ಬಾಯಿಯಿಂದ ನಿರರ್ಗಳವಾಗಿ ಹೊರಹೊಮ್ಮಿದವು. ನನಗೆ ಬಹಳ ಆಶ್ಚರ್ಯವಾಯಿತು. ಏಕೆಂದರೆ ಈ ವ್ಯಕ್ತಿಗೆ ಧಾರ್ಮಿಕ ಚಿಂತನೆ ಇಲ್ಲ ಜೀವ-ಜಗತ್ತುಗಳ ಬಗ್ಗೆ ಅಷ್ಟೇನೂ ಅಭ್ಯಾಸವಿಲ್ಲ. ಆದರೂ ಒಬ್ಬ ಸಾಮಾನ್ಯ ವ್ಯಕ್ತಿಗೆ ಎಂತಹ ಅದ್ಭುತ ವಿಚಾರಧಾರೆ ಇದೆಯಲ್ಲ ಎಂದು ಬಹಳ ಹರ್ಷಪಟ್ಟೆನು.

ಆದರೆ ಕಾವಿಧರಿಸಿ ಒಬ್ಬ ಮಠಾಧಿಕಾರಿಯಾಗಿ ಒಂದು ಧರ್ಮದ ನೇತಾರರಾಗಿ ಧರ್ಮ ಪ್ರಚಾರ ಮಾಡಬೇಕಾದವರಿಗೆ ಸಾಮಾನ್ಯ ಜ್ಞಾನವೂ ಇಲ್ಲವಲ್ಲವೆಂದು ಮನಸ್ಸಿಗೆ ಬಹಳ ಬೇಸರವಾಯಿತು.

ನಮ್ಮಂತಹ ಸಾಮಾನ್ಯರು ಮತ್ತು ಅನೇಕ ವಿದ್ವಾಂಸರು ಮತ್ತು ಶ್ರೀ ಗುರು ಬಸವಣ್ಣನವರ ಸಮಕಾಲೀನ ಶರಣರು ಮತ್ತು ನಂತರ ಆಗಿ ಹೋದ ಅನೇಕ ಶರಣರು ಶ್ರೀ ಗುರು ಬಸವಣ್ಣನವರ ಬಗ್ಗೆ ಆಡಿರುವ ಮಾತುಗಳನ್ನು ನೋಡಿದರೆ ಮತ್ತು ನಿಮ್ಮ ಮಾತುಗಳನ್ನು ಪರಾಂಬರಿಸಿದರೆ ಪರಮಾಶ್ಚರ್ಯವಾಗುತ್ತದೆ. ಶ್ರೀ ಗುರು ಬಸವಣ್ಣನವರಂತಹ ಪ್ರವಾದಿ ಹಿಂದೆಂದೂ ಆಗಿಲ್ಲ ಮುಂದೆ ಅವರಂತಹ ಪ್ರವಾದಿ ಹುಟ್ಟಿಬರುವ ಸಾಧ್ಯತೆಯೂ ಇಲ್ಲವೆಂದು ಎಂತಹವರಿಗೂ ಅನ್ನಿಸುತ್ತದೆ. ಆದರೆ ನಿಮ್ಮಂತಹ ಅಜ್ಞಾನಿಗಳಿಗೆ ಮತ್ತು ಇನ್ನೂ ಅಜ್ಞಾನ ಕೂಪದಲ್ಲಿರುವ ಬಾಳೇಹೊನ್ನೂರು ಮಠದ ಶ್ರೀ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕಾ ರಾಜ ದೇಶೀಕೇಂದ್ರರುಗಳಿಗೆ ಶ್ರೀ ಗುರು ಬಸವಣ್ಣನವರನ್ನು ಇನ್ನೂ ಅರ್ಥ ಮಾಡಿಕೊಳ್ಳಲಾಗಿಲ್ಲವಲ್ಲ ಎಂದು ನೋವಾಗುತ್ತಿದೆ.

ತಾವು ವೀರಶೈವ ಚಿಂತನ ಸಮಾವೇಶದಲ್ಲಿ ಆಡಿದ ಮಾತುಗಳ ಬಗ್ಗೆ ಪೂಜ್ಯ ಶ್ರೀ ಜಗದ್ಗುರು ಮಾತೆಮಹಾದೇವಿಯವರು ಸೂಕ್ತವಾಗಿ ಮತ್ತು ಸಮರ್ಪಕವಾಗಿ ಉತ್ತರಿಸಿದ್ದಾರೆ. ನಾನು ಅವರ ಬಗ್ಗೆ ಏನನ್ನೂ ಹೇಳ ಬಯಸುವುದಿಲ್ಲ. ಆದರೂ ಒಂದೆರಡು ಮಾತುಗಳನ್ನು ಬರೆಯದಿದ್ದರೆ ನನಗೆ ಸಮಾಧಾನವಾಗುವುದಿಲ್ಲ. ಅದಕ್ಕೆಂದೇ ಪ್ರತಿಕ್ರಯಿಸುತ್ತೇನೆ.

ಈಗ್ಗೆ ಸುಮಾರು 15-20 ವರ್ಷಗಳಾಗಿರ ಬಹುದು. ಇದೇ ವಿಷಯ "ವೀರಶೈವ" ದ ಬಗ್ಗೆ ಚರ್ಚಿಸಲು (ಏಕೆಂದರೆ ಅಷ್ಟು ಹೊತ್ತಿಗೆ ಅನೇಕ "ಲಿಂಗಾಯತ" ಧರ್ಮೀಯರಲ್ಲಿ ವೀರಶೈವಕ್ಕೂ ಲಿಂಗಾಯತಕ್ಕೂ ಯಾವುದೇ ಸಂಬಂಧವಿಲ್ಲ ಎನ್ನುವ ಕೂಗು ಎದ್ದು ಕಾಣುತ್ತಿತ್ತು) ಪೂಜ್ಯ ಶ್ರೀ ನಿಜಗುಣಾನಂದ ಸ್ವಾಮಿಗಳ ಜಂಗಮ ಮಠ, ಬಸವನಗುಡಿ, ಬೆಂಗಳೂರಿನಲ್ಲಿ ತಾವೇ ಕರೆದಿದ್ದ ಒಂದು ಸಭೆಯನ್ನು ಜ್ಞಾಪಿಸುತ್ತೇನೆ. ತಮ್ಮ ನೇತೃತ್ವದಲ್ಲಿಯೇ ಸಭೆಯನ್ನು ಕರೆಯಲಾಗಿತ್ತು. ನಾನೂ ಕೂಡ ಆ ಸಭೆಯಲ್ಲಿ ಭಾಗವಹಿಸಲು ಬಂದಿದ್ದೆನು. ಇನ್ನೇನು ಪ್ರಾರ್ಥನೆ ಆದನಂತರ ಸಭೆ ಮುಂದುವರೆಯು ಬೇಕಾಗಿತ್ತು ಅಷ್ಟರಲ್ಲಿ ಕೆಲವೊಂದು ಶ್ರೋತೃಗಳು ಎರಡು ಮೂರು ಪ್ರಶ್ನೆಗಳನ್ನು ತಮ್ಮ ಮುಂದಿಟ್ಟರು. ಆ ಪ್ರಶ್ನೆಗಳಿಗೆ ಉತ್ತರಿಸಲಾಗದೆ ತಾವು ಸಭೆಯನ್ನು ತ್ಯಜಿಸಿ ಹೊರಟು ಹೋದದ್ದನ್ನು ನಾನು ಇನ್ನೂ ಮರೆತಿಲ್ಲ. ಬಹುಶಃ ತಾವೂ ಕೂಡ ಮರೆತಿರಲಿಕ್ಕಿಲ್ಲ; ಮರೆತಿದ್ದರೆ ಜ್ಞಾಪಿಸಿಕೊಳ್ಳಿರಿ.

ಈಗ ವಿಚಾರಕ್ಕೆ ಬರುತ್ತೇನೆ. "ವೀರಶೈವ" ಎನ್ನುವುದು ಒಂದು ಜಾತಿ ಅಥವಾ ಪಂಥ ಅಥವಾ ಪಂಗಡ ಎಂದು ನಾನು ಈ ಹಿಂದೆ ಸಾಕಷ್ಟು ಪತ್ರಗಳನ್ನು ವೀರಶೈವ ಮಹಾಸಭೆಯವರಿಗೆ, ಬಾಳೇಹೊನ್ನೂರು ಮಠಾಧಿಕಾರಿಗಳಿಗೆ ಮತ್ತು ಡಾ||ಎಂ. ಚಿದಾನಂದಮೂರ್ತಿಗಳಿಗೆ ಪತ್ರ ಬರೆದು, ಬರೆದ ಪತ್ರಗಳ ಪ್ರತಿಗಳನ್ನು ನಿಮಗೂ ಕಳುಹಿಸಿದ್ದೇನೆ. ಆದರೂ ಸಹ ತಮಗೆ ಇನ್ನೂ ಕೂಡ ಜ್ಞಾನೋದಯವಾಗಿಲ್ಲವಲ್ಲ ಎಂದು ಮರುಕಪಡುತ್ತೇನೆ.

(Veerashaiva is one of the seven sects of Shaivism) ವೀರಶೈವ ಸಪ್ತಶೈವಗಳಲ್ಲಿ ಒಂದು ಜಾತಿ ಅಥವಾ ಪಂಥ ಅಥವಾ ಪಂಗಡ. ಕೇರಳ, ಆಂಧ್ರ, ತಮಿಳುನಾಡಿನಲ್ಲಿ ಈಗಲೂ ವೀರಶೈವರಿದ್ದಾರೆ. 12ನೇ ಶತಮಾನದಲ್ಲಿ ಮತ್ತು ನಂತರ ಕೆಲವು ವೀರಶೈವರು ಶ್ರೀ ಗುರು ಬಸವಣ್ಣನವರು ಸಂಸ್ಥಾಪಿಸಿದ "ಲಿಂಗಾಯತ" ಧರ್ಮವನ್ನು ಸ್ವೀಕರಿಸಿದರು. ಇದು ಇತಿಹಾಸ. ಶ್ರೀ ಬಸವ ಗುರುವು ಕರುಣಿಸಿದ ಇಷ್ಟಲಿಂಗಧರಿಸಿ ಪೂಜಿಸುವವರೆಲ್ಲರೂ ಲಿಂಗಾಯತರೇವಿನಾ ವೀರಶೈವರಲ್ಲ. **ಸ್ವತಃ ನೀವೇ ವೀರಶೈವ ಸಮಾವೇಶದಲ್ಲಿ ವೀರಶೈವರು ಲಿಂಗವನ್ನು ಧರಿಸುವುದರಿಂದ ಲಿಂಗಾಯತರೆಂದು ಕರೆಯಲ್ಪಡುತ್ತಾರೆ ಎನ್ನುವ ಸತ್ಯವನ್ನು ಅರಿಯದೇ ನುಡಿದಿದ್ದೀರಲ್ಲವೇ? ಅಂದರೆ ವೀರಶೈವರು ಇಷ್ಟಲಿಂಗ ಧರಿಸಿ ಲಿಂಗಾಯತರಾದರು. ಅಂದ ಮೇಲೆ ಪೂರ್ವಾಶ್ರಮದ "ವೀರಶೈವ" ಜಾತಿಯನ್ನು ಪುನಃ "ಲಿಂಗಾಯತ ಧರ್ಮಕ್ಕೆ "ಸಮೀಕರಿಸುವುದು ತಪ್ಪಲ್ಲವೇ?** ಹುಟ್ಟಿನಿಂದ ಜಾತಿ ಬರುತ್ತದೆ. ಸಂಸ್ಕಾರದಿಂದ ಧರ್ಮ ಬರುತ್ತದೆ. ಅಂದ ಮೇಲೆ ಹುಟ್ಟಿನಿಂದ ಬಂದ ವೀರಶೈವ ಜಾತಿಯನ್ನು ಪುನಃ ಧರ್ಮವಂತರಾದ ಲಿಂಗಾಯತರನ್ನು ಪುನಃ ಜಾತೀಕರಿಸುವುದು ಅಕ್ಷಮ್ಯ ಅಪರಾಧವಲ್ಲವೇ? ಕೇರಳದಲ್ಲಿ ಕೆಲವು ವೀರಶೈವರು ಮಾಂಸಾಹಾರಿಗಳಿದ್ದಾರೆ. ಬೇಕಾದರೆ ಹೋಗಿ ನೋಡಿಕೊಂಡು ಬನ್ನಿರಿ. ಏಕೆ ಸ್ವಾಮಿಗಳೇ, ನಿಮಗೂ ಏನಾದರೂ ಮಾಂಸಾಹಾರಿಗಳಾಗುವ ಚಪಲವಿದೆಯೇ? ಹಾಗೆಂದೇ ವೀರಶೈವವನ್ನು ಪ್ರತಿಪಾದಿಸ ಹೊರಟಿದ್ದೀರೋ? ಹಾಗಿದ್ದರೆ "ಲಿಂಗಾಯತ" ಧರ್ಮವನ್ನು ತ್ಯಜಿಸಿ ಇಷ್ಟಲಿಂಗವನ್ನು ತೆಗೆದು ಹಾಕಿ ವೀರಶೈವ ಜಾತಿ ಸ್ವೀಕರಿಸಿ ಮಾಂಸಾಹಾರಿಗಳಾಗಿರಿ. ಆಗ ನನ್ನ ಹಾಗೆ ಯಾರೂ ನಿಮ್ಮ ಮೇಲೆ ತಕರಾರು ಎತ್ತುವುದಿಲ್ಲ. ಪುನಃ ಪುನಃ ಈ "ವೀರಶೈವ"ದ ಗೊಂದಲವನ್ನು ಸೃಷ್ಟಿಸುವ ಚಪಲವನ್ನು ಬಿಟ್ಟು ಬಿಡಿರಿ.

ದುರ್ದೈವದ ಸಂಗತಿ ಎಂದರೆ, ನಿಮ್ಮಂತಹ ಅಜ್ಞಾನಿಗಳು ಲಿಂಗಾಯತ ಧರ್ಮದ ಮಠಾಧಿಕಾರಿಗಳಾಗಿದ್ದೀರಲ್ಲ. ಇದು ಲಿಂಗಾಯತ ಧರ್ಮೀಯರ ದುರ್ದೈವ. ಆದರೂ ಒಂದು ಕಿವಿ ಮಾತು; ಏನೆಂದರೆ,

ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?
ಅಂಧಕನ ಕೈಯಲ್ಲಿ ದರ್ಪಣವಿದ್ದು ಫಲವೇನು?
ಹಂವೆಯ ಕೈಯಲ್ಲಿ ಚಂದ್ರಾಯುಧವಿದ್ದು ಫಲವೇನು
ನಮ್ಮ ಲಿಂಗದೇವನ ಅರಿಯದವರ ಕೈಯಲ್ಲಿ ಲಿಂಗವಿದ್ದು ಫಲವೇನು?

ಶ್ರೀ ಗುರು ಬಸವಣ್ಣನವರನ್ನು ಧರ್ಮಗುರುವೆನ್ನದೇ ಮತ್ತು ಲಿಂಗಾಯತ ಧರ್ಮ ಸಂಸ್ಥಾಪಕರೆಂದೂ ಒಪ್ಪದೇ ಹಾಗೂ ಇಷ್ಟಲಿಂಗ ಜನಕರೆಂದೂ ತಿಳಿಯದೇ ಮತ್ತು ವಚನ ಸಾಹಿತ್ಯವನ್ನು ಧರ್ಮ ಸಂಹಿತೆ ಎಂದು ಅರಿಯದವರು ವಿರಕ್ತ ಸಂಪ್ರದಾಯದ ಮಠಾಧೀಶರಾಗಿದ್ದು ಏನು ಫಲ? ಇಷ್ಟಲಿಂಗವನ್ನು ಕರುಣಿಸಿದ ಪ್ರವಾದಿಯನ್ನು ನಂಬದೇ ಮತ್ತು ಇಷ್ಟಲಿಂಗದ ಮಹತ್ವವನ್ನು ಅರಿಯದವರ ಕೈಯಲ್ಲಿ ಇಷ್ಟ ಲಿಂಗವಿದ್ದು ಫಲವೇನು? ಹೇಡಿಯ ಕೈಯಲ್ಲಿ ಆಯುಧವಿದ್ದಂತೆ ಮಂಗನ ಕೈಯಲ್ಲಿ ಮಾಣಿಕ್ಯವಿದ್ದಂತೆ ಮತ್ತು ಕುರುಡನ ಕೈಯಲ್ಲಿ ಕನ್ನಡಿ ಇದ್ದಂತೆ! ಶ್ರೀ ಅನ್ನದಾನೀಶ್ವರ ಸ್ವಾಮಿಗಳೇ ನೀವುಗಳು ಲಿಂಗಾಯತ ಧರ್ಮಕ್ಕೆ ಶ್ರೀ ಗುರು ಬಸವಣ್ಣನವರಿಗೆ ದ್ರೋಹ ಮಾಡುತ್ತೀದ್ದೀರಿ ಎಂದು ಹೇಳದೇ ವಿಧಿಯಿಲ್ಲ.

ಪೂಜ್ಯ ಶ್ರೀ ಅನ್ನದಾನೇಶ್ವರ ಸ್ವಾಮಿಗಳೇ, ಜೀವನ ಅತ್ಯಂತ ಅಮೂಲ್ಯ, ಅದು ಅರ್ಥಪೂರ್ಣವೂ, ಸಾರ್ಥಕವೂ ಆಗ ಬೇಕೆಂದು ದೇವರು ಇಚ್ಛಿಸುತ್ತಾರೆ. ದೇವರ ಇಚ್ಛೆ ಪೂರೈಸಬೇಕೆಂದು ಧರ್ಮ ಸಂಸ್ಥಾಪಕರು, ಪ್ರವಾ ಗಳು, ಮಹಾತ್ಮರು ಒಳ್ಳೆಯ ಮೌಲ್ಯಗಳನ್ನು ಬೋಧಿಸಿ ್ದಾರಿಯನ್ನು ಹಾಕಿಕೊಡುತ್ತಾರೆ. ಆದರೆ ನಿಮ್ಮಂತಹವರು ಹಾಗೂ ಈಗಿನ ಬಾಳೇ ಹೊನ್ನೂರು ಮಠಾಧಿಕಾರಿಗಳಂತಹವರು ಹಾಗೂ ಡಾ|| ಎಂ. ಚಿದಾನಂದ ಮೂರ್ತಿಗಳಂತಹ ಜಾತಿವಾದಿಗಳು ಜಾತೀಯನ್ನೇ ಧರ್ಮವೆಂದು ಹೇಳುತ್ತಾ ಜನರನ್ನು ದಾರಿತಪ್ಪಿಸುವ ಕೆಲಸ ಮಾಡುತ್ತಿದ್ದೀರಿ. ಧರ್ಮವು ಶಾಂತಿ ಪ್ರೀತಿ ಸಾಮರಸ್ಯ ಕಲಿಸಿದರೆ ಜಾತಿ ಮತಾಂಧತೆ ದ್ವೇಷಾಸೂಯೆಗಳನ್ನು ಬೋಧಿಸುತ್ತದೆ.

ಪರಮಾತ್ಮನು ನೇರವಾಗಿ ಬಂದು ಧರ್ಮವನ್ನು ಹುಟ್ಟುಹಾಕುವುದೂ ಇಲ್ಲ ಮತ್ತು ಬೋಧಿಸುವುದಿಲ್ಲ. ಈ ಕೆಲಸವನ್ನು ಪ್ರವಾದಿಗಳು, ಮಹಾತ್ಮರು ಮಾಡುತ್ತಾರೆ. ನಾನು ಈ ಹಿಂದೆ ತಾ|| 18-10-2006ರಲ್ಲಿ ಬಾಳೇಹೊನ್ನೂರು ಮಠಾಧ್ಯಕ್ಷರಿಗೆ ಬರೆದ ಒಂದು ಪತ್ರದ ಪ್ರತಿಯನ್ನು ಈಗ ನಿಮಗೂ ಕಳುಹಿಸುತ್ತಿದ್ದೇನೆ. ಈ ಪತ್ರವಲ್ಲಿ ಶ್ರೀ ಗುರು ಬಸವಣ್ಣನವರೇ "ಲಿಂಗಾಯತ" ಧರ್ಮ ಸಂಸ್ಥಾಪಕರು ಎಂದು ಆಧಾರಸಹಿತ ಪ್ರತಿಪಾದಿಸಿದ್ದೇನೆ. ದಯಮಾಡಿ ಪರಾಂಬರಿಸಿರಿ. ಇನ್ನು ಮುಂದಾದರೂ ನಿಮ್ಮ ಅಜ್ಞಾನ ಪ್ರದರ್ಶಿಸುವ ಬದಲು ನಿಮ್ಮ ಅಂತರಂಗದಲ್ಲಿ ಹುದುಗಿರುವ ಜಾತಿ ಪ್ರೇಮವನ್ನು ಅಳಿಸಿ ನಿಜ ಬಸವ ತತ್ವ ಪ್ರಚಾರಕರಾಗಿ "ಲಿಂಗಾಯತ ಧರ್ಮ"ಕ್ಕೆ ದುಡಿದು ಕೀರ್ತಿಶಾಲಿಗಳಾಗಿರಿ ಎಂದು ಆಶಿಸುತ್ತಾ, ಇನ್ನು ಮುಂದೆ ಸುಳ್ಳು ವಿಚಾರಗಳನ್ನು ಪ್ರತಿಪಾದಿಸುವುದನ್ನು ಬಿಟ್ಟು ಬಿಡಿರಿ ಎಂದು ಬಿನ್ನೈಸಿಕೊಳ್ಳುತ್ತಾ ಈ ಪತ್ರಕ್ಕೆ ವಿದಾಯ ಹೇಳುತ್ತೇನೆ. ಸುಳ್ಳು ಹೇಳುವ ಜನ ಮುಂದೆ ಬರಬಹುದೆಂದೋ ಏನೋ ದಾರ್ಶನಿಕ ಕವಿ ಸರ್ವಜ್ಞ ಈ ರೀತಿ ಹೇಳಿದ್ದಾನೆ.

ಬಸವ ಗುರುವಿನ ಹೆಸರ ಬಲ್ಲವರಾರಿಲ್ಲ
ಹುಸಿ ಮಾತನಾಡಿ ಕೆಡದಿರಿ। ಲಿಂಗಾಯತಕೆ
ಬಸವನೇ ಕರ್ತೃ ಸರ್ವಜ್ಞ!

ಇಂತಿ ಶರಣಾರ್ಥಿಗಳು
(ಹೆಚ್.ಎ. ಶರಣಪ್ಪ).

ನರ ಮನುಜ ನಾನೆತ್ತ ಕರುಣ ಕಾರಣನೆತ್ತ
ಬಗೆಗೊಳ್ಳದದಾನಂದ ಬ್ರಹ್ಮವೆತ್ತ
ಕರುಣಾಕರನೆ ಭಕ್ತಿವಿಧದೊಳಗೆ ತಂದಿರಿಸಿ
ಪರಭವವ ತಪ್ಪಿಸಿದೆ ಯೋಗಿನಾಥ



ದೆಹಲಿಯಲ್ಲಿ ನಡೆದ ಸರ್ವಧರ್ಮ ಸಂಸತ್ ಅಧಿವೇಶನದಲ್ಲಿ ಲಿಂಗಾಯತ ಧರ್ಮದ ಪ್ರತಿನಿಧಿಯಾಗಿ ಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರು



ಅಲ್ಲಮಗಿರಿಯಲ್ಲಿ ನಡೆದ ತೃತೀಯ ಲಿಂಗಾಯತ ಗಣಮೇಳದ ವೇದಿಕೆ.



ಸಂಸತ್ ಸದಸ್ಯೆ (ಮಹಾರಾಷ್ಟ್ರ) ಶರಣೆ. ನಿವೇದಿತಾ ಮಾನೆಯವರಿಂದ
ಅಲ್ಲಮ ಪ್ರಭು ಜಯಂತಿ ಕಾರ್ಯಕ್ರಮದ ಉದ್ಘಾಟನೆ.




ಅಲ್ಲಮ ಪ್ರಭು ಯೋಗ ಪೀಠಾರೋಹಣದ ಉದ್ಘಾಟನೆ.



ಅಲ್ಲಮ ಪ್ರಭು ದಿವ್ಯಾಲಯದಿಂದ ಜೋತಿಯನ್ನು ಹೊತ್ತಿಸಿಕೊಂಡು ಬರುತ್ತಿರುವ
ಪೂಜ್ಯರು ಹಾಗೂ ಶರಣ ಸಮೂಹ



ಅಲ್ಲಮ ಪ್ರಭು ಯೋಗ ಪೀಠದ ಪೂಜ್ಯ ಬಸವಕುಮಾರ ಸ್ವಾಮೀಜಿಯವರ ದ್ವಿತೀಯ ಪೀಠಾರೋಹಣ
ಸಮಾರಂಭದಲ್ಲಿ ಆರತಿ ಮಾಡುತ್ತಿರುವ ಶರಣೆಯರು.



ಸಕ್ಕಲಟ್ಟಿಯ ಬಸವ ಮಂಟಪ ಉದ್ಘಾಟನೆದಿ.20-4-2008 ರಂದು ವೇದಿಕೆಯ ಮೇಲೆ ಎಡದಿಂದ ಬಲಕ್ಕೆ: ಎಲ್ಲರನ್ನು ಸ್ವಾಗತಿಸುತ್ತಿರುವ ಶರಣ.ಚಂದ್ರಶೇಖರ್, ಉದ್ಯಮಿ ಜಿ.ನಾಗರಾಜ್, ತಮಿಳುನಾಡು ದೂರದರ್ಶನ ನಿರ್ದೇಶಕಎಸ್.ಅನಂತನಾರಾಯಣನ್,ಉದ್ಯಮಿ ಭೋಜರಾಜ್, ಪೂಜ್ಯ ಬಸವಕುಮಾರ ಸ್ವಾಮೀಜಿ,ಪೂಜ್ಯ ಮಾತಾಜಿ,ಉದ್ಯಮಿ ನಂಜಯ್ಯನವರು,I.A.S.ತರಬೇತಿ ಅಕ್ಯಾಡಮಿ ನಿರ್ದೇಶಕ ಡಾ:ಎಂ.ಪದ್ಮನಾಭನ್



ನೂತನವಾಗಿ ಉದ್ಘಾನೆಗೊಂಡ ಸಕ್ಕಲಟ್ಟಿಯ(ಮಾತೆ ಮಹಾದೇವಿ ಹಿಲ್ಸ)ಶ್ರೀ ಬಸವೇಶ್ವರ ವಿಶ್ವಶಾಂತಿ ಭವನ(ಬಸವ ಮಂಟಪ)




ಸಕ್ಕಲಟ್ಟಿಯ ಬಸವ ಮಂಟಪ ಉದ್ಘಾಟನೆ ದಿನದಂದು ಮೆರವಣಿಗೆಯಲ್ಲಿ ಆಡಿ.ಹಾಡುತ್ತಿರುವ ಶರಣ ಸಮೂಹ




ಸಕ್ಕಲಟ್ಟಿಯ ಬಸವ ಮಂಟಪ ಉದ್ಘಾಟನೆ ದಿನದಂದು ಪೂಜ್ಯ ಮಾತಾಜಿಯವರನ್ನು ಮೆರವಣಿಗೆ ಮೂಲಕ ಬರಮಾಡಿಕೊಳ್ಳುತಿರುವುದು



875ನೆಯ ಬಸವ ಜಯಂತಿಯಂದು ಪೂಜ್ಯ ಮಾತಾಜಿ ಹಾಗೂ
ಶರಣ,ಶರಣೆಯರಿಂದ ಗುರು ಬಸವಣ್ಣನವರಿಗೆ ಪೂಜೆ.




875ನೆಯ ಬಸವ ಜಯಂತಿಯಂದು ಧ್ವಜಾರೋಹಣದ ಮುಂಚೆ ಸಂಕಲ್ಪ ಗೀತೆ



875ನೆಯ ಬಸವ ಜಯಂತಿಯಂದು ತೊಟ್ಟಿಲ ತೂಗಿ ಜೋಗುಳ ಹಾಡುತ್ತಿರುವ
ಪೂಜ್ಯ ಮಾತಾಜಿ ಹಾಗೂ ಶರಣೆಯರು.



ಬಸವ ಜಯಂತಿಯಂದು ಮುಖ್ಯ ಅತಿಥಿಗಳಾಗಿ ಭಾಷಣ ಮಾಡುತ್ತಿರುವ
ಡಾ. ಮಹೇಶ್ ಜೋಶಿ.



875ನೆಯ ಬಸವ ಜಯಂತಿಯಂದು ಧಾರವಾಡ ರಾ.ಬ.ದಳದವರಿಂದ
ಗುರು ಬಸವಣ್ಣನವರಿಗೆ ಮಾಲಾರ್ಪಣೆ.

ಬೆಂಗಳೂರಿನಲ್ಲಿ ಸಂಭ್ರಮದ ಬಸವ ಜಯಂತಿ ಉತ್ಸವ
ವಚನ ಸಾಹಿತ್ಯ ಜಾಗತಿಕ ಸಂವಿಧಾನ – ಪೂಜ್ಯ ಮಾತಾಜಿ

ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ಅನುಭವ ಮಂಟಪದ ಶರಣ ಶರಣೆಯರು ರೂಪಿಸಿದ ವಚನ ಸಾಹಿತ್ಯವು ಕೇವಲ ಕನ್ನಡ ಆಸ್ತಿಯಾಗಿರದೆ ವಿಶ್ವದ ಆಸ್ತಿಯಾಗಿದೆ. ಏಕೆಂದರೆ ಜಗತ್ತಿನ ಎಲ್ಲ ಜೀವಿಗಳಿಗೂ ಅನ್ವಯಿಸುವ, ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ತತ್ವ ವಿಶೇಷವನ್ನು ವಚನ ಸಾಹಿತ್ಯ ಒಳಗೊಂಡಿರುವುದರಿಂದ ಇದನ್ನು ಜಾಗತಿಕ ಸಂವಿಧಾನ ಎಂದು ಕರೆಯಬಹುದಾಗಿದೆ. ಎಂದು ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷರಾದ ಪರಮ ಪೂಜ್ಯ ಶ್ರೀಮನ್ ನಿರಂಜನ ಮಾತೆ ಮಹಾದೇವಿಯವರು ಅಭಿಪ್ರಾಯ ಪಟ್ಟರು.

ಅವರು ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ರಾಜಾಜಿನಗರದ ಬಸವ ಮಂಟಪ ಆವರಣದಲ್ಲಿ ಏರ್ಪಡಿಸಿದ್ದ ವಿಶ್ವಗುರು ಬಸವಣ್ಣನವರ 875ನೆಯ ಜಯಂತಿ ಮಹೋತ್ಸವ ದಿವ್ಯ ಸನ್ನಿಧಿ ವಹಿಸಿ ಮಾತನಾಡಿದ ಅವರು ವಚನಗಳನ್ನು ಓದುವಾಗ ಮೇಲ್ನೋಟಕ್ಕೆ ಶಬ್ದಾರ್ಥ ಸರಳವೆನ್ನಿಸದರೂ ಸಹ ಪರಲೌಕಿಕವಾಗಿಯೂ ಅದು ವಿಶಾಲ ಅರ್ಥ ಹೊಂದಿರುತ್ತದೆ. ಇಂಥ ವಚನ ವಾಙ್ಮಯದ ಭಂಡಾರ ಅರ್ಥೈಸಿಕೊಳ್ಳಲು ಸಾಹಿತ್ಯಿಕ, ತಾತ್ವಿಕ, ದಾರ್ಶನಿಕ ದೃಷ್ಟಿಕೋನ ಹೊಂದಿರಬೇಕಾಗುತ್ತದೆ. ಜಾತಿ, ಭಾಷೆ, ಗಡಿ ಮುಂತಾದ ಸೀಮೆಗಳನ್ನು ಮೀರಿ ಮಾನವ ಸ್ವಾತಂತ್ರಕ್ಕಾಗಿ -ಕಲ್ಯಾಣಕ್ಕಾಗಿ ರೂಪುಗೊಂಡ ವಚನಗಳನ್ನು ಚಿಂತನೆ ಮಾಡಿದಂತೆಲ್ಲಾ ಅದ್ಭುತವಾದ ದಿವ್ಯಾನುಭವ ಪ್ರಾಪ್ತವಾಗುತ್ತದೆ. ಮೂಢನಂಬಿಕೆ ಕಂದಾಚಾರಗಳನ್ನು ನಿವಾರಿಸಿ ಜ್ಞಾನಯುಕ್ತ ಸಮಾಜ ರಚನೆಗೆ ಸಹಕಾರಿಯಾಗುತ್ತದೆ ಎಂದು ಮಾತಾಜಿ ನುಡಿದರು.

ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ 12ನೆಯ ಶತಮಾನದಲ್ಲಿ ನಡೆದ ಕ್ರಾಂತಿಯು ಇಡೀ ಜಗತ್ತಿನಲ್ಲಿಯೇ ಅದ್ಭುತ ಹಾಗೂ ಐತಿಹಾಸಿಕ ಘಟನೆಯಾಗಿದೆ ಎಂದ ಅವರು ಭಾರತ ದೇಶದಲ್ಲಿ ಮೊಟ್ಟಮೊದಲು ವರ್ಣಾಂತರ ವಿವಾಹ ಮಾಡಿಸಿದವರೇ ಬಸವಣ್ಣನವರು ಆಗ ಸಂಪ್ರದಾಯ ಸಿಡಿದೆದಿದರು, ಬಸವಣ್ಣನವರಿಗೆ ಗಡಿಪಾರು ಶಿಕ್ಷೆ, ಶರಣರಿಗೆ ಎಳೆಹೂಟೆ ಶಿಕ್ಷೆ, ಒಂದೇ? ಎರಡೇ? ಸಮಾನತೆಯ ಧರ್ಮವನ್ನು ಸ್ಥಾಪಿಸುವ ಪ್ರಕ್ರಿಯೆಯಲ್ಲಿ ಬಸವಣ್ಣನವರು ಮತ್ತು ಶರಣರು ಅನುಭವಿಸಿದ ವೇದನೆ ಅಪಾರವಾದುದು ಎಂದರು.

ಅರವಿಂದರ ಯೋಗ, ಕಾರ್ಲ್‌ಮಾರ್ಕ್ಸ್ ಅವರ ಅರ್ಥಶಾಸ್ತ್ರ, ಪರಮಹಂಸರ ಆಧ್ಯಾತ್ಮಿಕ ಜೀವನ, ಗಾಂಧೀಜಿಯವರಂತೆ ರಾಷ್ಟ್ರವಾದ, ಅಂಬೇಡ್ಕರ್ ಅವರಂತೆ ಸಂವಿಧಾನ ಶಿಲ್ಪಿಯಾಗಿದ್ದ ಬಸವಣ್ಣನವರು ಕಲ್ಯಾಣರಾಜ್ಯದ ನಿರ್ಮಾಣಕ್ಕೆ ಶ್ರಮಿಸಿದರು. ಕಾರ್ಲ್‌ಮಾರ್ಕ್ಸ್ ಅವರ ಉತ್ಪಾದನೆ ಹಾಗೂ ಹಂಚಿಕೆ ಸಿದ್ಧಾಂತ ಬಸವಣ್ಣನವರ ಕಾಯಕ -ದಾಸೋಹ ಸಿದ್ಧಾಂತಕ್ಕೆ ಮೇಲ್ನೋಟಕ್ಕೆ ಸಾಮ್ಯತೆ ಎನಿಸಿದರೂ ಮೂಲಭೂತವಾಗಿ ಬಹಳಷ್ಟು ವ್ಯತ್ಯಾಸವಿದೆ ಎಂದ ಅವರು ಭೌತಿಕ - ನಾಸ್ತಿಕವಾದದ ಮೇಲೆ ನಿಂತ ಮಾರ್ಕ್ಸ್‌ವಾದವು ಸಾಮಾನ್ಯ ಜನರನ್ನು ತಲುಪುವಲ್ಲಿ ವಿಫಲವಾಯಿತು ಆದರೆ ಆಧ್ಯಾತ್ಮವಾದದ ಮೇಲೆ ನಿಂತ. ಬಸವಣ್ಣನವರ ಕಾಯಕ -ದಾಸೋಹ ತತ್ವವು ಜನ ಮಾನಸದಲ್ಲಿ ಆ ಮೂಲಾಗ್ರ ಪರಿವರ್ತನೆಗೆ ಕಾರಣವಾಗಿತ್ತು, ಸರ್ವರಿಗೂ ಸಮಪಾಲು -ಸರ್ವರಿಗೂ ಸಮಬಾಳು ಎಂಬ ವಿಚಾರ ಧಾರೆಯನ್ನು ಅನುಷ್ಠಾನಗೊಳಿಸಿದ ಕಾರಣ ಜಗತ್ತಿನ ಶ್ರೇಷ್ಠ ಸಮಾಜವಾದಿಯಾಗಿ ಬಸವಣ್ಣನವರು ಗೋಚರಿಸುತ್ತಾರೆ ಎಂದು ಅವರು ನುಡಿದರು.

ಬಸವಣ್ಣನವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ ಅವರನ್ನು ಕೇವಲ ಭಾವುಕರಾಗಿ ನೋಡದೇ ಭೌದ್ಧಿಕ, ಆಧ್ಯಾತ್ಮಿಕ, ಸಾಮಾಜಿಕ ದೃಷ್ಟಿಕೋನಗಳಿಂದ ಗಮನಿಸಿದಾಗ ಅವರ ವ್ಯಕ್ತಿತ್ವದ ವೈಶಾಲ್ಯತೆ ಅರ್ಥೈಸಿಕೊಳ್ಳಲು ಸಾಧ್ಯ ಎಂದರು. 62 ವರ್ಷ 2 ತಿಂಗಳು 3 ದಿನಗಳವರೆಗೆ ಬದುಕಿದ್ದ ಅವಧಿಯಲ್ಲಿ ಜಾತಿ -ವರ್ಣ-ವರ್ಗ ಬೇಧವಿಲ್ಲದ ಬೇಡುವವರೇ ಇಲ್ಲದ ನೀಡುವವರೇ ತುಂಬಿದ ಆದರ್ಶ -ಸಮೃದ್ಧ ಸಮಾಜ ರೂಪಿಸಿದರು ಎಂದು ಮಾತಾಜಿಯವರು ನುಡಿದರು.

ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಬೆಂಗಳೂರು ದೂರದರ್ಶನದ ಕೇಂದ್ರದ ಹಿರಿಯ ನಿರ್ದೇಶಕ ಡಾ|| ಮಹೇಶ ಜೋಶಿಯವರು ಮಾತನಾಡಿ ಇಂದು ಆಚರಿಸಲ್ಪಡುತ್ತಿರುವ ಬಸವ ಜಯಂತಿಯು ನಮ್ಮ ನಾಡಿನ ಅತಿದೊಡ್ಡ ಹಬ್ಬವಾಗಿದೆ. ಸಮಾನತೆ - ಮಾನವೀಯತೆಯ ಯುಗ ಶ್ರೀಗುರು ಬಸವಣ್ಣನವರ ಜನನದ ಮೂಲಕ ಪ್ರಾರಂಭವಾದ ದಿನವಿದು. ಸಮಾಜದಲ್ಲಿ ಮೇಲು -ಕೀಳು

-ಹಿರಿಯ - ಕಿರಿಯ ಎಂಬ ಬೇಧ ಭಾವನೆ ತುಂಬಿದ್ದ ಸಂದರ್ಭದಲ್ಲಿ ಸರ್ವರಿಗೂ ಸಮಪಾಲಿ -ಸರ್ವರಿಗೂ ಸಮಬಾಳು ಎಂಬ ಸರ್ವೋದಯ ತತ್ವ ಪ್ರತಿಪಾದಿಸಿದ ಬಸವಣ್ಣನವರು ಯುಗದ ಅದ್ಭುತವಾಗಿ ಕಾಣುತ್ತಾರೆ.

ಸಂತ ಶ್ರೇಷ್ಠರಾದ ಗುರು ಗೋವಿಂದ ಭಟ್ಟರು ಹಾಗೂ ಸಂತ ಶಿಶುನಾಳ ಶರೀಫರು ವಚನಗಳನ್ನು ಅಧ್ಯಯನ ಮಾಡಿದ್ದರು ಎಂಬ ಕಾರಣದಿಂದಲೇ ಅವರಲ್ಲಿ ಅಧ್ಯಾತ್ಮಿಕ ಭಾವನೆ ಇಮ್ಮುಡಿಗೊಳ್ಳಲು ಕಾರಣವಾಯಿತು. ನಾನು ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಅಭಿಮಾನಿಯಾಗಿದ್ದೇನೆ. ಅನೇಕ ಬಾರಿ ಅವರ ಪ್ರವಚನವನ್ನು ಆಲಿಸಿದ್ದೇನೆ. ಅವರ ದಿವ್ಯ ಸನ್ನಿಧಿಯಲ್ಲಿ ನಡೆದಿರುವ ಇಂಥ ಪವಿತ್ರ ಕಾರ್ಯಕ್ರಮಕ್ಕೆ ಬಂದಿರುವುದು ನನ್ನ ಪೂರ್ವ ಜನ್ಮದ ಪುಣ್ಯ ಎಂದು ಭಾವ ತುಂಬಿ ನುಡಿದರು.

ಮುಖ್ಯ ಅತಿಥಿಗಳಾಗಿದ್ದ ಅರವಿಂದ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ||ಚಿಕ್ಕ ಹೆಜ್ಜಾಜಿ ಮಹಾದೇವ ಅವರು ಮಾತನಾಡಿ ಸ್ವತಃ ಸಾಧಕಿಯೂ, ಇತಿಹಾಸ ತಜ್ಞರು, ಸಂಶೋಧಕಿ, ಸಂಘಟಕರೂ ಆಗಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಅವರ ಪರಿಶ್ರಮದಿಂದ ಬಸವಣ್ಣನವರ ವಿಚಾರಧಾರೆಗಳು ವಿಶ್ವದಾದ್ಯಂತ ಪ್ರಸಾರಗೊಳ್ಳುತ್ತಲಿವೆ ಎಂದರು.

ರೈತ ಸಂಘದ ಮುಖಂಡ ಗಂಗಾಧರ, ಬಿ.ಜೆ.ಪಿಮುಖಂಡ ಸುರೇಶ್‌ಕುಮಾರ ಉಪಸ್ಥಿತರಿದ್ದರು. ಲಿಂಗಾಯತ ಮಹಾಸಭಾಸ ಅಧ್ಯಕ್ಷ ಎನ್.ಪುಟ್ಟರುದ್ರಪ್ಪ ಅಧ್ಯಕ್ಷಿಯ ಭಾಷಣ ಮಾಡಿದರು. ಶರಣ.ವೀರೇಶ್ ಸ್ವಾಗತಿಸಿದರು. ಶರಣೆ. ಲೀಲಾವತಿ ಕರಡಿ ಸಭಾ ನಿರ್ವಹಣೆ ಮಾಡಿದರು. ಪ್ರಾರಂಭದಲ್ಲಿ ರಾಷ್ಟ್ರೀಯ ಬಸವ ದಳದ ಶರಣರು ತೊಟ್ಟಿಲು ಕಾರ್ಯಕ್ರಮ ಮಾಡಿದರು. ಬಸವ ಕುಮಾರ ಸ್ವಾಮೀಜಿ ಧ್ವಜಾರೋಹಣ ಮಾಡಿದರು. ಸಭೆಯ ನಂತರ ಮಹಾ ಪ್ರಸಾದ ದಾಸೋಹ ಏರ್ಪಡಿಸಲಾಗಿತ್ತು.

ಆಕರ್ಷಕ ಪಥ ಸಂಚಲನ

ವಿಶ್ವಗುರು ಬಸವಣ್ಣನವರ 875ನೆಯ ಜಯಂತಿ ಅಂಗವಾಗಿ ರಾಷ್ಟ್ರೀಯ ಬಸವ ದಳದ ವತಿಯಿಂದ ಆಕರ್ಷಕ ಪಥ ಸಂಚಲನ ಜರುಗಿತು. ಸಂಜೆ. 4 ಗಂಟೆಗೆ ರಾಜಾಜಿನಗರದ ಬಸವ ಮಂಟಪದಿಂದ ಪ್ರಾರಂಭವಾದ ಪಥ ಸಂಚಲನ ನವರಂಗ್ ಚಿತ್ರಮಂದಿರದ ಬಳಿ ಸಾಗಿ ಭಾಷ್ಯಂ ವೃತ್ತದವರೆಗೂ ಸಾಗಿ ಬಂದಿತು.

ಪಥ ಸಂಚಲನದಲ್ಲಿ ಅಲ್ಲಮಗಿರಿಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮೀಜಿ ಸೇರಿದಂತೆ ಸಹಸ್ರಾರಿ ಶರಣ -ಶರಣೆಯರ ಪಾಲ್ಗೊಂಡಿದ್ದರು. ವಿಶ್ವಗುರು ಬಸವಣ್ಣನವರ ಭಾವ ಚಿತ್ರ ಹೊತ್ತ ಸಾಲಾಂಕೃತ ವಾಹನ ಮೆರವಣಿಗೆಗೆ ವಿಶೇಷ ಕಳೆ ನೀಡಿತ್ತು.

ವರದಿ -ಕರಿಬಸಪ್ಪ ಕೋರಿಶೆಟ್ಟರ್

ಬಸವ ಪಂಚಮಿ 813ನೆಯ ಬಸವ ಲಿಂಗೈಕ್ಯ ಸಂಸ್ಮರಣೆ

ದಿ. 6-8-2008ರಂದು 813ನೆಯ ಬಸವ ಪಂಚಮಿಯು ದಿ.6-8-2006ರಂದು ಒದಗಿ ಬಂದಿದೆ, ಅಂದು ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದಲ್ಲಿ ಇರುವ ಸರ್.ಪುಟ್ಟಣ್ಣ ಶೆಟ್ಟಿ ಟೌನ್ ಹಾಲ್‌ದಲ್ಲಿ ವಿಶೇಷ ಕಾರ್ಯಕ್ರಮ ಏರ್ಪಡಿಸಲಾಗಿದೆ. ಬೆಳಿಗ್ಗೆ 10-30ರಿಂದ ಕಾರ್ಯಕ್ರಮ, ಪ್ರಸಾದ, ಸಾಂಸ್ಕೃತಿಕ ಕಾರ್ಯಕ್ರಮ ನಂತರ ಮೆರವಣಿಗೆ ಹೊರಟು ಮುಖ್ಯ ಬೀದಿಗಳಲ್ಲಿ ಹಾದು ಬಸವೇಶ್ವರ ಸರ್ಕಲ್‌ದಲ್ಲಿರುವ ಗುರು ಬಸವಣ್ಣನವರ ಅಶ್ವಾರೂಢ ಪುತ್ಥಳಿಗೆ ಮಾಲಾರ್ಪಣೆ ಮಾಡುವುದರಿಂದ ಮುಕ್ತಾಯ ಗೊಳ್ಳುತ್ತದೆ.

ಚೆನ್ನೈದಲ್ಲಿ 2008ರ ಆಗಸ್ಟ್ 16, 17, 18ರಂದು ಲಿಂಗಾಯತ ಧರ್ಮದ ತೃತೀಯ ಸಮ್ಮೇಳನ

2001ನೆಯ ಇಸವಿಯ ಜನಗಣತೆಯ ಹಿನ್ನೆಲೆಯಲ್ಲಿ ಸಂಘಟನೆ ಮಾಡುವ ದೃಷ್ಟಿಯಿಂದ ತಮಿಳು ನಾಡಿನ ರಾಜಧಾನಿ ಚೆನ್ನೈದಲ್ಲಿ ಲಿಂಗಾಯತ ಧರ್ಮದ ತೃತೀಯ ಸಮ್ಮೇಳವನ್ನು ಆಯೋಜಿಸಲಾಗತ್ತಿದೆ. ಪ್ರತಿನಿಧಿ ಶುಲ್ಕ ಇತ್ಯಾದಿ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸ ಲಾಗುವುದು. ನವದೆಹಲಿಯಲ್ಲಿ 1997ರಲ್ಲಿ 5ನೆಯ ಬಸವ ಧರ್ಮ ಸಮ್ಮೇಳನವನ್ನು, 2005ರಲ್ಲಿ ಲಿಂಗಾಯತ ಧರ್ಮದ ಪ್ರಥಮ ಸಮ್ಮೇಳನವನ್ನು 2007ರಲ್ಲಿ ದ್ವಿತೀಯ ಸಮ್ಮೇಳನವನ್ನು ನಡೆಸಲಾಗಿದ್ದು, ಮೂರನೆಯ ಸಮ್ಮೇಳನವನ್ನು ಚೆನ್ನೈ (ಮದ್ರಾಸ್)ದಲ್ಲಿ ನಡೆಸಲು ನಿರ್ಧರಿಸಲಾಗಿದೆ. ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸಿರಿ.

ಅಕ್ಟೋಬರ್ 12, 13, 14ರಂದು ಬಸವ ಕಲ್ಯಾಣದಲ್ಲಿ ಏಳನೆಯ ಕಲ್ಯಾಣ ಪರ್ವ

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಪ್ರತಿ ವರ್ಷ ಮೇ 1, 2 ಮತ್ತು 3ರಂದು ಕಲ್ಯಾಣ ಪರ್ವ ಎಂಬ ಧಾರ್ಮಿಕ ಉತ್ಸವವನ್ನು 2002ರಿಂದಲೂ ನಡೆಸಿಕೊಂಡು ಬರಲಾಗುತ್ತಿತ್ತಷ್ಟೆ. ಏಳನೆಯ ಕಲ್ಯಾಣ ಪರ್ವವು 2008ರ ಮೇ 1, 2,3ರಂದು ನಡೆಯಬೇಕಿತ್ತು. ಆದರೆ ಎರಡೂ ವರ್ಷ ಮಳೆ ಮತ್ತು ಭಯಂಕರ ಗಾಳಿಯಿಂದ ಪೆಂಡಾಲ್ ಕಿತ್ತು ಹೋಯಿತು. ತಗಡುಗಳು ಗಾಳಿಗೆ ಹಾರಿಹೋದವು. ಅದು ತೀವ್ರವಾದ ಬಿಸಿಲಿನ ಪ್ರದೇಶವಾದ್ದರಿಂದ ಕೆಲವು ಭಾಗಗಳವರು ಬರಲು ಹಿಂಜರಿಯುತ್ತಾರೆ. ಇದನ್ನೆಲ್ಲ ಗಮನದಲ್ಲಿಟ್ಟು ಕೊಂಡು ಕಲ್ಯಾಣ ಪರ್ವದ ದಿನಾಂಕಗಳಲ್ಲಿ ಬದಲಾವಣೆ ಮಾಡಲಾಗಿದೆ.

ಆಶ್ವಯುಜ ಪೌರ್ಣಮೆಯನ್ನು ವೀರ ಮಾತೆ ಅಕ್ಕನಾಗಲಾಂಬಿಕೆಯ ಹೆಸರಿನಲ್ಲಿ ಆಚರಿಸುತ್ತಿದ್ದೇವೆ. ಇದಕ್ಕೆ ಹೊಂದಿಕೊಂಡು ಕಲ್ಯಾಣ ಪರ್ವವನ್ನು 2008ರ ಅಕ್ಟೋಬರ್ 12, 13, 14ರಂದು ಆಚರಿಸಲಾಗುವುದು (ಸಂಸ್ಥೆಯ ಕ್ಯಾಲೆಂಡರಿನಲ್ಲಿ ಅಕ್ಟೋಬರ್ 7, 8, 9ರಂದು ಎಂದು ಮುದ್ರಿಸಲಾಗಿದೆ. ಅದು ದಸರಾದ ದಿನಗಳಾದ್ದರಿಂದ ಜನರಿಗೆ ಅನಾನುಕೂಲವಾಗುತ್ತದೆ ಎಂದು ಬಹಳ ಜನರು ಅಭಿಪ್ರಾಯಪಟ್ಟುದರಿಂದ ವಿಜಯ ದಶಮಿ (ದಿ.9)ಮುಗಿದ ಎರಡು ದಿನಗಳ ಮೇಲೆ ಇಡಲಾಗಿದೆ.)

ಈ ಬದಲಾವಣೆಯನ್ನು ಗಮನಿಸಬೇಕು ಮತ್ತು ಪ್ರಚಾರ ಮಾಡಬೇಕೆಂದು ವಿನಂತಿಸುತ್ತೇವೆ.

- ಬಸವ ಧರ್ಮ ಪೀಠದ ಪ್ರಕಟಣೆ

☹ ಸಮಸ್ಯೆ ? - ಸಮಾಧಾನ ! ☺

☐ ಸು. ಮಲ್ಲಿಕಾರ್ಜುನಪ್ಪ, ಮತ್ತೀಪುರ, ತಾ- ಕೊಳ್ಳೇಗಾಲ

? ಆರ್ಯ ಈಡಿಗರ ಕುಲಗುರುಗಳ ಪಟ್ಟಾಭಿಷೇಕ ಸಮಾರಂಭದಲ್ಲಿ ಪೂಜ್ಯ ಶ್ರೀ ಸಿದ್ದಗಂಗಾ ಮಠಾಧ್ಯಕ್ಷರು ಸಂದೇಶವನ್ನು ಹೀಗೆ ನೀಡಿದ್ದಾರೆ. "ಈಗ ಜಗತ್ತಿಗೆ ಹಿಂದೂ, ಇಸ್ಲಾಂ, ಕ್ರೈಸ್ತ, ಬೌದ್ಧ, ಜೈನ ಧರ್ಮಗಳು ಬೇಕಾಗಿಲ್ಲ. ಸಕಲ ಮನುಷ್ಯಕುಲಕ್ಕೆ ಲೇಸನ್ನು ಬಯಸುವ ಮಾನವ ಧರ್ಮದ ಅಗತ್ಯವಿದೆ. ಎಂದಿದ್ದಾರೆ. ಈ ಮಾನವ ಧರ್ಮ ಎಂದರೇನು? ಇದು ಎಲ್ಲಿದೆ? ಇದರ ಸ್ಥಾಪಕರು ಯಾರು?

★ ನಮಗೂ ಈ ಮಾತನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವೆನಿಸುತ್ತದೆ. ಸಕಲ ಜೀವಾತ್ಮರಿಗೆ ಅಂದರೆ ಮಾನವ, ಪ್ರಾಣಿ, ಪಶುಪಕ್ಷಿ ಎಲ್ಲ ಜೀವಾತ್ಮರಿಗೆ ಲೇಸನ್ನು ಬಯಸುವ ಬಸವ ಧರ್ಮ ಮಾನವೀಯ ಧರ್ಮವಾಗಿದೆ. ಅದರ ಅವಶ್ಯಕತೆ ಇಂದಿನ ಜಗತ್ತಿಗೆ ಇದೆ ಎಂಬುದು ಈ ಮಾತಿನ ಅಂತರ್ಯವಿರಬಹುದು ಅಥವಾ ಅಸ್ತಿತ್ವದಲ್ಲಿ ಇರುವ ಯಾವುದೇ ಧರ್ಮ ಬೇಡ. ಮಾನವೀಯ ಗುಣ ಇದ್ದರೆ ಸಾಕು ಎಂದಿರಬಹುದು. ಎರಡನೆಯ ಅರ್ಥವೇ ಇದ್ದರೆ ಆಗ ಮಠದಲ್ಲಿ ಮಾಡುವ ಗಣಪತಿ ಪೂಜೆ, ಹೋಮ, ಜಾತ್ರೆ ಈ ಯಾವುವೂ ಅಗತ್ಯವೇ ಬೀಳುವುದಿಲ್ಲ. ಎಲ್ಲ ಧರ್ಮಗಳ ಹೆಸರು ಹೇಳಿ ತಮ್ಮ ಧರ್ಮ-ಲಿಂಗಾಯತದ ಹೆಸರು ಹೇಳಲು ಶ್ರೀಗಳು ಮರೆತಿರುವುದು ಆಶ್ಚರ್ಯ ಉಂಟು ಮಾಡುತ್ತದೆ.

☐ ಗೋಕರ್ಣ ಮಾಸ್ತರು, ಚಳ್ಳಕೆರೆ.

? ಶಿವರಾತ್ರಿಯಂದು ನಡೆದ ಗಣಮೇಳದಲ್ಲಿ ಧರ್ಮಗುರು ಬಸವಣ್ಣನವರ ಭಾವಚಿತ್ರದೊಡನೆ ಯೋಗಿರಾಜ ಶಿವನ ಭಾವಚಿತ್ರ ಸಹ ಇಡಲಾಗಿತ್ತು. ನೋಡಿ ಅಚ್ಚರಿಯಾಯಿತು. ನಾವೆಲ್ಲ ಕಟ್ಟು ನಿಟ್ಟಾದ ಏಕದೇವೋಪಾಸಕರಾಗಿದ್ದೇವೆ. ಇದು ಹೇಗೆ?

★ 21ನೆಯ ಶರಣ ಮೇಳದಲ್ಲಿ ಚಿಂತನಗೋಷ್ಠಿಯಲ್ಲಿ ಈ ಬಗ್ಗೆ ವಿಸ್ತೃತವಾದ ಚರ್ಚೆಯಾಗಿದೆ. ಭಾರತೀಯ ಪರಂಪರೆಯ ಮೂಲಪುರುಷ, ಓಂಕಾರದ ದ್ರಷ್ಟಾರ ಯೋಗಿರಾಜ ಶಿವ. ವಿಭೂತಿ, ರುದ್ರಾಕ್ಷಿ, ಮಂತ್ರ ಆತನ ಕೊಡುಗೆ. ಶಿವರಾತ್ರಿ ದಿನ ಆತನಿಗೆ ಸಂಬಂಧಪಟ್ಟ ದಿನ. ಅದನ್ನು ನಾವು ಶರಣ ಗಣ ಮೇಳ ಮತ್ತು ಸರ್ವ ಶರಣರ ದಿನಾಚರಣೆಗೆ ಬಳಸಿಕೊಂಡಿದ್ದೇವೆ. ಆದ್ದರಿಂದ ಅಂದು ಶಿವನಿಗೆ ಗೌರವ ಸಲ್ಲಿಸಬೇಕೆಂದು ಭಾವಚಿತ್ರ ಇಡಲಾಗಿದೆ.

ಎರಡನೆಯದಾಗಿ ಲಿಂಗಾಯತ ಸಮಾಜದ ನಾಡಿ ಮಿಡಿತವನ್ನು ನೋಡಲಾಗಿ ಒಂದು ಸಂಗತಿ ದೃಗ್ಗೋಚರವಾಗುತ್ತದೆ. ಶಿವನ ಮೇಲಿನ ಭಕ್ತಿ - ಅಭಿಮಾನಗಳನ್ನು ಬಹಳ ಜನರ ಮನಸ್ಸಿನಿಂದ ತೆಗೆದುಹಾಕುವುದು ಅಸಾಧ್ಯವೆನಿಸುತ್ತಿದೆ. ಅದಕ್ಕಾಗಿ ಕೆಲವು ಹಂತಗಳನ್ನು ಮಾಡಿ ಲಿಂಗಾಯತರನ್ನು ಏಕದೇವೋಪಾಸನೆಯತ್ತ ಕರೆದೊಯ್ಯುವುದು ಸೂಕ್ತವೆನಿಸುತ್ತದೆ. ಇಲ್ಲದಿದ್ದರೆ ಶಿವನ ಮೇಲಿನ ಭಕ್ತಿಯನ್ನು ಕೈಬಿಡುವ ಬದಲಿಗೆ ಬಸವ ತತ್ವವನ್ನು ಮೂಢ ಲಿಂಗಾಯತರು ಕೈಬಿಡಬಹುದು ಎಂಬ ಆತಂಕ ಉಂಟಾಗುತ್ತಿದೆ. ನಿಮ್ಮಂತಹ ಧೈರ್ಯಶಾಲಿ, ತತ್ವನಿಷ್ಠ ಏಕದೇವೋಪಾಸನೆಗೆ ಎಲ್ಲರನ್ನು ಕರೆದೊಯ್ಯುವದಕ್ಕಾಗಿ ಕೆಲವೊಂದು ಹಂತಗಳನ್ನು ರೂಪಿಸುವುದು ಒಳ್ಳೆಯದು. ಶಿವನನ್ನು ದೇವತೆ ಎಂದಲ್ಲ ಗುರು, ಮಹಾತ್ಮ ಎಂದು ಗೌರವಿಸುವುದು ಒಳ್ಳೆಯದು.

☐ ಉದಯ, ಮಲ್ಲಿಕಾರ್ಜುನ ಕರ್ಜಗಿಮಠ, ಗೋಕಾಕ

? ಕನ್ನಡ ಪ್ರಭಾದ ದಿ.14-3-2008ರ ಸಂಚಿಕೆಯಲ್ಲಿ ಜಿ.ಎಸ್.ಕಮತರ ಲೇಖನವಿದೆ. ಅದರಲ್ಲಿ ರಾಘವಾಂಕನ ಸಿದ್ಧರಾಮ ಚರಿತ್ರೆ ಎಂಬ ಪುಸ್ತಕದಲ್ಲಿ ಅಕ್ಕನಾಗಲಾಂಬಿಕೆ ಬಿಜ್ಜಳನ ಪತ್ನಿ, ಚನ್ನಬಸವಣ್ಣ ಬಿಜ್ಜಳನ ಮಗ, ಶರಣರು ವಚನಗಳನ್ನು ರಚಿಸಲೇ ಇಲ್ಲ. ನಂತರ ಪ್ರೌಢದೇವರಾಯನ ಕಾಲದಲ್ಲಿ (1410-1446) ಜಕ್ಕಣ ಅಮಾತ್ಯ, ಲಕ್ಕಣ್ಣ ದಂಡೇಶ ಮುಂತಾದವರು ಬರೆದರು ಎಂದೆಲ್ಲ ಬರೆಯಲಾಗಿದೆ. ಇದು ಹೇಗೆ? ಮತ್ತು ಏಕೆ?

★ ಪಂಚಪೀಠದವರು ಮತ್ತು ಅವರ ಸಂಪ್ರದಾಯ ಮಠಗಳವರು ಮಾಡಿರುವ ಪಾಪಕರ್ಮಗಳು ಒಂದೆರಡಲ್ಲ. ಲಿಂಗಾಯತ ಧರ್ಮದ ಶುದ್ಧಿಯನ್ನು ಕೆಡಿಸಿರುವುದು ಮಾತ್ರವಲ್ಲ ಕನ್ನಡ ಸಾಹಿತ್ಯದ ಪಾವಿತ್ರ್ಯವನ್ನೂ ಹಾಳು ಮಾಡಿದ್ದಾರೆ.

1. ಮೈಸೂರಿನಲ್ಲಿ ಕಾಶೀನಾಥ ಶಾಸ್ತ್ರಿ ಎಂಬುವವರ ಕಾಲದಲ್ಲಿ ಶುರುವಾದ ಈ ಕುತಂತ್ರ ಮೊಟ್ಟಮೊದಲು ರೇಣುಕಾದಿ ಪಂಚಾಚಾರ್ಯರನ್ನು ಸೃಷ್ಟಿಸಿತು. ಮೂಲ ಸಿದ್ಧಾಂತ ಶಿಖಾಮಣಿಯಲ್ಲಿಲ್ಲದ ಪಂಚಾಚಾರ್ಯ ಸೃಷ್ಟಿ ಕಾಶಿನಾಥ ಶಾಸ್ತ್ರಿ ಸಂಪಾದಿತ ಕೃತಿಯಲ್ಲಿ ಕಾಣಿಸಿತು.

2. ನಂತರ ಲಿಂಗಾಯತ ಸಮಾಜದಲ್ಲಿ ಚತುರ್ವರ್ಣ ವರ್ಗೀಕರಣ ಮಾಡಿ ಉಪಪಂಗಡಗಳವರನ್ನು ಬೇರೆ ಬೇರೆ ವರ್ಣಗಳಲ್ಲಿ ಸೇರಿಸಲಾಯಿತು.

3. ಲಿಂಗೀ ಬ್ರಾಹ್ಮಣರ ಸ್ಥಾನದಲ್ಲಿ ಜಂಗಮರನ್ನು ನಿಲ್ಲಿಸಲಾಯಿತು.

4. ತಾವೇ ನೇರವಾಗಿ ಹೇಳಹೋದರೆ ಜನರು ನಂಬುವುದಿಲ್ಲ ಎಂದು ಸಂಸ್ಕೃತದ ಸಿದ್ಧಾಂತ ಶಿಖಾಮಣಿಯನ್ನು ಮತ್ತು ಕನ್ನಡದ ಮಹಾಕಾವ್ಯ ರಾಘವಾಂಕನ ಸಿದ್ಧರಾಮ ಚರಿತ್ರೆಯನ್ನು ತಿದ್ದಲಾಯಿತು ಮೂಲ ಪದ್ಯಗಳನ್ನು ತೆಗೆದು ಮೇಲಿನ ಅಸಂಬದ್ಧ ವಿಚಾರಗಳಿಂದ ತುಂಬಿದ ಪದ್ಯಗಳನ್ನು ಕೃತಕವಾಗಿ ಸೇರಿಸಲಾಗಿದೆ.

ಕನ್ನಡ ಸಾಹಿತ್ಯ ಮತ್ತು ವಚನ ಸಾಹಿತ್ಯ ಓದಲು ಬರದೆ ಇರುವ ಸಿದ್ಧರಾಮೇಶ್ವರ ದೇವಾಲಯದ ಪೂಜಾರಿಗಳನ್ನು ಬುಟ್ಟಿಗೆ ಹಾಕಿಕೊಂಡು ಪಂಚಾಚಾರ್ಯರು ಕುತಂತ್ರ ನಡೆಸಿದ್ದಾರೆ. 1962ರಲ್ಲಿ ಮೇಲ್ಕಂಡ ಕುಹಕ ಪುಸ್ತಕವನ್ನು ಪ್ರಕಟಿಸಲಾಯಿತು. ಪುಸ್ತಕಕ್ಕೆ ಮುನ್ನುಡಿ ಬರೆದವರು ಹೊಟಗಿ ಮಠದ ಯೋಗಿ ರಾಜೇಂದ್ರ ಸ್ವಾಮಿಗಳು, ಸವದತ್ತಿಯ ಹೂಲಿ ಮಠದ ನೀಲಕಂಠ ಸ್ವಾಮಿಗಳು, ಪ್ರಕಾಶಕರು ಪೂಜಾರಿಗಳಲ್ಲಿ ಒಬ್ಬರಾದ ಕೇದಾರ ಆದಿಲಿಂಗಪ್ಪ ಹಬ್ಬು, ವಚನ ಸಾಹಿತ್ಯವು ಪಂಡಿತರು ಕುಳಿತು ಬರೆದ ಕಾವ್ಯಗಳಲ್ಲ. ಅನುಭಾವಿಗಳ ಹೃದಯದಿಂದ ನಿರರ್ಗಳವಾಗಿ ಹರಿದು ಝರಿ. ಆದ್ದರಿಂದ ಈ ಕುತಂತ್ರಿಗಳಿಗೆ ವಚನ ಸಾಹಿತ್ಯವೇ ನೇರ ಮತ್ತು ದಿಟ್ಟವಾದ ಉತ್ತರ ಕೊಡುತ್ತಿದೆ. ಲಿಂಗಾಂಗಯೋಗಿ ಸಿದ್ಧರಾಮೇಶ್ವರರು ಬರೆದ ವಚನಗಳು ಮತ್ತು ತ್ರಿವಿಧಿಗಳು ಸಾಹಿತ್ಯ ಮತ್ತು ಇತಿಹಾಸವನ್ನು ನೇರ್ಪಡಿಸುತ್ತವೆ; ಪಂಚಾಚಾರ್ಯರ ಕುತಂತ್ರ ಕೆಲಸ ಮಾಡಲು ಬಿಡುವುದಿಲ್ಲ.

☐ ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ, ಬಸವ ಗಂಗೋತ್ರಿ

? ಬಸವ ಸಾಧಕನ ಪಾಲಿಗೆ ವೈಯಕ್ತಿಕ ಜೀವನ ಯಾವ ರೀತಿ ಇರಬೇಕು?

★ ''ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದರೆ,'' ಎಂಬ ವಚನವೇ ದಾರಿ ದೀಪ. ಸುಪ್ರಭಾತ ಸಮಯದಲ್ಲಿ ಲಿಂಗಾರ್ಚನೆ ನಂತರ ಜಂಗಮ ಸೇವೆ. ಜಂಗಮ ಅರ್ಥಾತ್ ಸಮಾಜ ಸೇವೆಯ ಅಂಗವೆಂದರೆ 1. ಕಾಯಕ -ಪ್ರಾಮಾಣಿಕ ದುಡಿಮೆ, 2. ದಾಸೋಹ - ತನು ಮನ ಧನ ಸಲ್ಲಿಸಿ ಮಾಡುವ ಸೇವೆ 3. ಪ್ರಸಾದ 4. ಸಂಜೆಯ ವೇಳೆಯಲ್ಲಿ ಶರಣರ ಸಂಗದಲ್ಲಿ ಅನುಭಾವ!

2.? ಬಸವ ಮಾರ್ಗದಲ್ಲಿ ಸಾಗಬೇಕೆನ್ನುವ ಸಾಧಕನು ಕೇವಲ ದುಡಿಮೆಯಲ್ಲಿ ಆನಂದ ಕಾಣಬೇಕೋ? ಅಥವಾ ಮೋಕ್ಷಾಪೇಕ್ಷೆಯಲ್ಲಿ ಮನಸ್ಸನ್ನು ನೆಲೆಗೊಳಿಸಬೇಕೋ?

★ ''ದುಡಿಮೆ''ಯನ್ನು ಯಾವ ಅರ್ತಿಯಲ್ಲಿ ತೆಗೆದುಕೊಳ್ಳುವರೋ ಆ ಹಿನ್ನೆಲೆಯಲ್ಲಿ ಆನಂದ ಪ್ರಾಪ್ತಿಯಾಗುತ್ತದೆ. ಕೋಗಿಲೆಗೆ ಕೂಗುವುದರಲ್ಲಿ ಹೇಗೆ ಆನಂದವೋ, ನವಿಲಿಗೆ ನರ್ತಿಸುವುದರಲ್ಲಿ ಹೇಗೆ ಆನಂದವೋ ನಿಜ ಸಾಧಕನಿಗೆ ತನ್ನ ಕ್ರಿಯೆಯಲ್ಲಿಯೇ ಆನಂದ. ಯಾರು ಮಾಡುವ ಕಾರ್ಯದಲ್ಲಿ ಆನಂದ ಪಡುವುದಿಲ್ಲವೋ ಅವರದು ಕತ್ತೆಯ ದುಡಿತವಾಗುತ್ತದೆ ಕಾಯಕವಾಗುವುದಿಲ್ಲ. ಧರ್ಮಪ್ರಚಾರ ಒಂದು ಶ್ರಮದ ದುಡಿತ; ಮಾಡುವವನಿಗೆ ಶ್ರಮವಾಗುತ್ತದೆ. ಆದರೆ ಜನರು ಪರಿವರ್ತನೆಗೊಂಡು ಸಂತೋಷಪಟ್ಟಾಗ ಧರ್ಮಪ್ರಚಾರಕನಿಗೆ ಅಪೂರ್ವ ಆನಂದವಾಗುತ್ತದೆ. ಮೋಕ್ಷಾಪೇಕ್ಷೆಯಿಂದ ಶರಣನು ಕಾರ್ಯಮಾಡಬಾರದು. ಸ್ವಸಂತೋಷದಿಂದ ಅರ್ಚನೆ, ಅರ್ಪಣೆ, ಅನುಭಾವಗಳನ್ನು ಅಳವಡಿಸಿಕೊಂಡಾಗ ಇವನು ಒಲ್ಲೆನೆಂದರೂ ಮೋಕ್ಷವೂ ತಾನಾಗಿ ಒದಗುತ್ತದೆ.

ನನಗೆ ಅದೇ ಭಯ. ಗುರು ಬಸವಣ್ಣನವರ ವ್ಯಕ್ತಿತ್ವ, ಸಂದೇಶಗಳನ್ನು ಪ್ರಚಾರ ಮಾಡಲು ಇನ್ನೂ ಹೆಚ್ಚು ಪ್ರತಿಭೆ -ಪಾಂಡಿತ್ಯ ಹೊಂದಿ ಮತ್ತೆ ಹುಟ್ಟಿಬರಲು ಆಸೆ, ನನಗೆ ಮುಕ್ತಿ ಇಷ್ಟವಿಲ್ಲ. ಎಲ್ಲಾದರೂ ದೇವರು ಮುಕ್ತಿ ಕೊಟ್ಟುಬಿಟ್ಟರೆ? ಅಂತ ನನಗೆ ಚಿಂತೆ!

3.? ಕೆಲವು ಭಕ್ತರು ಬಸವ ಮಂಟಪಕ್ಕೆ ಬಂದಾಗ ಲಿಂಗದೇವ ಎಂದು ಪ್ರಾರ್ಥನೆಯಲ್ಲಿ ಬಳಸುತ್ತಾರೆ, ಹೊರಗಡೆ ಭಾಷಣ ಮಾಡುವಾಗ ಕೂಡಲ ಸಂಗಮದೇವ ಎನ್ನುತ್ತಾರೆ: ಕೇಳಿದರೆ, ಮಾತಾಜಿಯವರಿಗೆ ಅದನ್ನು ಸಮರ್ಥಿಸಿಕೊಳ್ಳುವ ಜ್ಞಾನವಿದೆ, ಧೈರ್ಯವಿದೆ ನಮಗೆ ಇಲ್ಲವಲ್ಲ ಎನ್ನುತ್ತಾರೆ. ಇವರಿಗೆ ಏನೆನ್ನಬೇಕು?

★ ಅರೆ ಭಕ್ತರು ಎನ್ನಬೇಕು. ವ್ಯಕ್ತಿಗೆ ಕೇವಲ ಜ್ಞಾನವಿದ್ದರೆ ಸಾಲದು ಆತ್ಮಬಲವು ಬಹಳ ಮುಖ್ಯ. ಸನ್ಯಾಸಿಗಳಿಗೇ ಅದಿಲ್ಲದಾಗ ಇನ್ನು ಗೃಹಸ್ಥರಿಗೆ ಏನು ಹೇಳುವುದು. ಏಕದೇವೋಪಾಸನೆಯನ್ನು ಖಂಡ ತುಂಡವಾಗಿ ಹೇಳಿದರೆ ಭಕ್ತರು ಕೈಬಿಡಬಹುದು ಎಂಬ ಅಂಜಿಕೆಯಿಂದ (ವಿರಕ್ತ)ಸ್ವಾಮಿಗಳೇ ತತ್ವ ಬಿಟ್ಟು ನಡೆಯುವಾಗ ಇನ್ನು ಭಕ್ತರಲ್ಲಿ ಆತ್ಮಬಲ ಹೇಗೆ ಬೆಳೆದೀತು?

4.? ಒಮ್ಮೆ ಶಾಲೆಯ ಮಕ್ಕಳೆಲ್ಲ ಪಿಕ್‌ನಿಕ್ ಹೋಗಿದ್ದರಂತೆ. ಮಾಂಸಾಹಾರಿ ಮಕ್ಕಳು ಒಂದೆಡೆ ಕುಳಿತು ಬುತ್ತಿ ಬಿಚ್ಚಿದಾಗ ಹಿಂದು ಹುಡುಗರು ನಾವಿಬ್ಬರೂ ಮಾಂಸಾಹಾರಿಗಳೇ ಇಬ್ಬರೂ ಹಂಚಿಕೊಂಡು ತಿನ್ನೋಣ ಎಂದಿದ್ದಕ್ಕೆ ಮುಸ್ಲಿಂ ಹುಡುಗನು, "ನಮ್ಮಲ್ಲಿ ಅಲ್ಲಾಹನ ಹೆಸರಲ್ಲಿ ಅಡಿಗೆ ಮಾಡಿರುತ್ತಾರೆ. ನಿಮ್ಮಲ್ಲಿ ಹಾಗೆ ಮಾಡಿರಲ್ಲ." ಎಂದು ಹಂಚಿಕೊಳ್ಳಲು ನಿರಾಕರಿಸಿದನಂತೆ.

★ ಮದರಸಾಗಳಲ್ಲಿ ಮುಸ್ಲಿಂ ಮಕ್ಕಳಿಗೆ, ಚರ್ಚ್‌ದಲ್ಲಿ ಕ್ರೈಸ್ತ ಮಕ್ಕಳಿಗೆ ತಮ್ಮ ಧರ್ಮಗಳ ಬಗ್ಗೆ ನಿರಂತರ ತರಬೇತಿ ಇರುತ್ತದೆ. ಹಿಂದುಗಳಿಗೆ ಸಣ್ಣವರಿರಲಿ ದೊಡ್ಡವರಿರಲಿ ಯಾವ ತರಬೇತಿಯೂ ಇರುವುದಿಲ್ಲ. ಹೀಗಾಗಿ ದೂಷಿಸಲ್ಪಡುತ್ತಾರೆ. ಎಲ್ಲ ಮುಸಲೀಮರೂ ಅಲ್ಲಾಹನ ಹೆಸರಲ್ಲಿ ತಯಾರಿಸುತ್ತಾರೋ ಬಿಡುತ್ತಾರೋ ಹಾಗೆ ಹೇಳಬೇಕೆಂಬ ಜ್ಞಾನ ಮಕ್ಕಳಲ್ಲಿ ಇರುವುದಕ್ಕೆ ಮೆಚ್ಚುಗೆ ಪಡಬೇಕು. ನಮ್ಮಲ್ಲೂ ಅಷ್ಟೆ. ಅಡಿಗೆ ಮಾಡುವಾಗ ದೇವರ ಧ್ಯಾನ ಮಾಡಬೇಕು; ಊಟ ಮಾಡುವಾಗ ದೇವರ ಧ್ಯಾನ ಮಾಡಬೇಕು ಎಂದಿದೆ. ಆಗ ಮಾತ್ರ ಊಟವು ಪ್ರಸಾದವಾಗುತ್ತದೆ; ಪ್ರಸಾದ ಉಂಡರೆ ಮಾತ್ರ ಬಾಳೂ ಪ್ರಸನ್ನವಾಗುತ್ತದೆ. ದೇವರ ಧ್ಯಾನವಿಲ್ಲದೆ ತಿನ್ನುವ ಊಟ ಕೂಳಾಗುತ್ತದೆ. ಕೂಳು ತಿಂದರೆ ಮನೆ ಹಾಳಾಗುತ್ತದೆ.

ಅಲ್ಲಮ ಗಿರಿಯಲ್ಲಿ ಮೂರನೆಯ ಗಣಮೇಳಾವ

ಬಿರು ಬೇಸಿಗೆಯ ಮಧ್ಯೆಯೂ ಬೀಸುವ ತಂಗಾಳಿ, ಎತ್ತರವಾದ ಗುಡ್ಡದ ಮೇಲೆ ಹವಾ ಮಾಲಿನ್ಯವಿಲ್ಲದ ಶುದ್ಧ ಹವೆ, ರಾತ್ರಿ ವೇಳೆಯಲ್ಲಿ ಅಲ್ಲಮಗಿರಿಯನ್ನು ಸುತ್ತುವರಿದ ಊರುಗಳ ವಿದ್ಯುತ್ ದೀಪಗಳ ಪ್ರವಾಹ ಒಂದು ವಿಶೇಷ ಲೋಕವನ್ನೇ ಸೃಷ್ಟಿಸುತದೆ. ಗುಡ್ಡದ ತಿರುವುಗಳನ್ನು ದಾಟುತ ಸುತುತ ಗಾಡಿಗಳು ಏರುವಾಗ ನಾವು ವಿಮಾನದಲ್ಲಿ ಹೋಗುತ್ತಿದ್ದೇವೆ, ಕೆಳಗೆ ನಕ್ಷತ್ರ ಲೋಕವಿದೆ ಎನಿಸಿತು ಎಂದು ಒಬ್ಬ ಮುಗ್ಧ ಭಕ್ತ ಹೇಳಿದಾಗ ಪ್ರಕೃತಿಯು ಎಂಥವನನ್ನೂ ಕವಿಯನ್ನಾಗಿ ಮಾಡಿ ಕಲ್ಪನಾ ಲೋಕಕ್ಕೆ ಏರಿಸುತ್ತದಲ್ಲ ಎನ್ನಿಸಿತು.

ಪ್ರಥಮ ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಲಿಂಗಾಂಗ ಯೋಗಿ ಸಿದ್ಧರಾಮೇಶ್ವರರು ಸಂಚರಿಸುತ್ತ ಬಂದು ಕೆಲವು ಕಾಲ ತಪಸ್ಸು ಮಾಡಿದ ಸ್ಥಳ ಅಲ್ಲಮಗಿರಿ (ಅಲ್ಲಮ ಪ್ರಭು ಡೋಂಗರ್)

ದೇವ (ಭಾನು)ವಾರ, ದಿ.6-4-2008ರಂದು ಬೆಳಿಗ್ಗೆ ಮೂರನೆಯ ಲಿಂಗಾಯತ ಗಣ ಮೇಳವು ಬೆಳಿಗ್ಗೆ 10-30ಕ್ಕೆ ಉದ್ಘಾಟನೆಗೊಂಡಿತು. ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿ ಹಾಗೂ ಮಾರ್ಗದರ್ಶನದಲ್ಲಿ ನಡೆದ ಗಣ ಮೇಳದ ಉದ್ಘಾಟನೆಯನ್ನು ಕೊಲ್ಹಾಪುರ ಜಿಲ್ಲೆಯ ಸಂಸತ್ ಸದಸ್ಯರಾದ ಶ್ರೀಮತಿ ನಿವೇದಿತಾ ಮಾನೆ ಅವರು ನೆರವೇರಿಸಿದರು. ಕಾರ್ಯಕ್ರಮ ಪ್ರಧಾನ ಸಂಚಾಲಕರಾದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಕಾರ್ಯದರ್ಶಿ ಶಿವಾನಂದ ಸ್ವಾಮಿ ಅವರು ಸ್ವಾಗತಿಸಿದರು. ಶರಣೆ. ಮಾಲೊತಾಯಿ ಚಂದ್ರಕಾಂತ ಸ್ವಾಮಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ದೇವವಾರದ ಶರಣ ಸಂಗಮ - ಸಾಮೂಹಿಕ ಪ್ರಾರ್ಥನೆ ನೆರವೇರಿತು.

ಸಂಜೆ 5-30ರಿಂದ ಧರ್ಮ ಚಿಂತನಗೋಷ್ಠಿ ನಡೆಯಿತು. 2ನೆಯ ದಿನ, 7-4-2008ರಂದು ಅಂದರೆ ಚೈತ್ರ ಶುದ್ಧ ಪ್ರತಿಪದೆಯಂದು ಅಲ್ಲಮ ಪ್ರಭುದೇವರ ಜಯಂತಿಯನ್ನು ಆಚರಿಸಲಾಯಿತು. ಅಲ್ಲಮ ಪ್ರಭುಗಳು ಹುಟ್ಟಿದುದು ಯುಗಾದಿ ಪ್ರತಿಪದೆಯಂದು. ಮತ್ತು ಶೂನ್ಯ ಪೀಠಾರೋಹಣ ಮಾಡಿದುದು ಯುಗಾದಿಯಂದೇ. ತನ್ನಿಮಿತ್ತ ತೊಟ್ಟಿಲಲ್ಲಿ ಅಲ್ಲಮ ಪ್ರಭುದೇವರ ಭಾವಚಿತ್ರವನಿಟ್ಟು ಪೂಜಿಸಿ, ತೂಗಿ, ಜೋಗುಳ ಹಾಡಲಾಯಿತು. ನಂತರ ಅಲ್ಲಮ ಪ್ರಭು ಯೋಗ ಪೀಠದ ಪ್ರಥಮ ಅಧಿಕಾರಿಗಳಾದ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳ ನೇತೃತ್ವದಲ್ಲಿ ಶ್ರೀ ಅಲ್ಲಮ ಪ್ರಭು ದಿವ್ಯಾಲಯಕ್ಕೆ ಹೋಗಿ ಅಲ್ಲಿಂದ ಜ್ಯೋತಿಯನ್ನು ಹಚ್ಚಿಕೊಂಡು ತರಲಾಯಿತು. ನಂತರ ಪೀಠಾರೋಹಣ. ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಗೆ ಪೀಠಾರೋಹಣ ಮಾಡಿಸಲಾಯಿತು. ಪೂಜ್ಯ ಮಾತಾಜಿ ವಿಭೂತಿ ಧರಿಸಿ ರುದ್ರಾಕ್ಷಿಯ ಮುಕುಟವನ್ನು ಮಸ್ತಕದ ಮೇಲಿಟ್ಟು ಆಶೀರ್ವದಿಸಿದರು. ಶರಣ ಬಂಧುಗಳು ಮಾಲಾರ್ಪಣೆ ಮಾಡಿ, ಪುಷ್ಪವೃಷ್ಟಿಗೈದು, ಆರತಿ ಬೆಳಗಿದರು.

ದಿ.8ರಂದು ಸುಪ್ರಭಾತದಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ದೀಕ್ಷೆ ಜರುಗಿದವು. ನಂತರ ಸಮಾರೋಪ ಸಮಾರಂಭ. ಅಚ್ಚುಕಟ್ಟಾಗಿ ನಡೆದ ಮೂರು ದಿವಸಗಳ ಸಮ್ಮೇಳನದಲ್ಲಿ ಮಹಾರಾಷ್ಟ್ರ ವಿವಿಧೆಡೆಗಳಿಂದ ಸದ್ಭಕ್ತರ ಭಾಗವಹಿಸಿದರಲ್ಲದೆ ಗಡಿ ನಾಡಿನ ಗ್ರಾಮಗಳವರು, ಲಾತೂರು-ಉದಗೀರ್ ಭಾಗಗಳವರು, ಆಂಧ್ರ ಪ್ರದೇಶದ ಶರಣ ಬಂಧುಗಳು ಭಾಗವಹಿಸಿದರು. ಹಿಂದಿನ ಎರಡು ಗಣ ಮೇಳಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದುದು ಎಲ್ಲರಿಗೂ ಹರ್ಷವನ್ನುಂಟು ಮಾಡಿತು.

ವರದಿ: ಮಹಾಂತೇಶ್ ರಾಜಗೋಳಿ

ಸಂಬೋಳಿ ಸಂಬೋಳಿ ಎನ್ನುತ್ತಾ ಇಂಬಿನಲ್ಲಿದ್ದೇನೆ!

-ಸಚ್ಚಿದಾನಂದ ಚಟನಳ್ಳಿ

(875ನೆಯ ಬಸವ ಜಯಂತಿ ನಿಮಿತ್ತ ವಿಶೇಷ ಲೇಖನ)

ಕಾರ್ತಿಕದ ಕತ್ತಲಲ್ಲಿ ಆಕಾಶದೀಪವಾಗಿ ನೀ ಬಂದೆ
ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ ಎಂಟು ಶತಮಾನಗಳ ಹಿಂದೆ
ಅಗ್ನಿ ಖಡ್ಗವನಾಂತ ಓ ಆಧ್ಯಾತ್ಮ ಕ್ರಾಂತಿವೀರ
ದೇವ ದಯೆಯೊಂದು ಹೇ ಧೀರಾವತಾರ ಶ್ರೀ ಬಸವೇಶ್ವರ! - ಕುವೆಂಪು

ಗುರುಬಸವಣ್ಣನವರು, ನೊಂದವರ ನಂದಾದೀಪ, ಶೋಷಿತರ ಸಂಜೀವಿನಿ. ಭಾರತ ಭೂಮಿಯ ಕನ್ನಡ ನಾಡಿನಲ್ಲಿ ಅವತರಿಸಿದ ಗುರುಬಸವಣ್ಣನವರು ಅಂದು ರೂಢಿಯಲ್ಲಿ ಪ್ರಚಲಿತವಿದ್ದ ಅನೇಕ ಮೂಢಾಚರಣೆಗಳನ್ನು ಖಂಡಿಸಿದರು. ಅಂದಿನ ಸಾಮಾಜಿಕ ಹಿನ್ನಲೆ ತುಂಬಾ ಗಂಭೀರವಾಗಿತ್ತು. ವೈದಿಕ ಶಾಹಿ ಅತ್ಯಂತ ಪ್ರಬಲವಾಗಿದ್ದ ಕಾಲವದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಚತುರ್ವರ್ಣಗಳನ್ನು ಮಾಡಿಕೊಂಡು, ಈ ನಾಲ್ಕು ವರ್ಣಗಳಿಂದ ಹೊರಗಿರುವವರನ್ನು ಅಸ್ಪೃಶ್ಯರೆಂದು ಕರೆದು, ಅವರನ್ನು ಅತ್ಯಂತ ನಿಕೃಷ್ಟವಾಗಿ ಕಾಣುತ್ತಿದ್ದರು. ಅಂದು ಅನೇಕ ಮೂಢ ಸಂಪ್ರದಾಯಗಳು, ಬರಡು ಆಚರಣೆಗಳು ಅನ್ಯಾಯ, ಸ್ತ್ರೀಶೋಷಣೆ. ದೇವರು ಧರ್ಮದ ಹೆಸರಿನಲ್ಲಿ ಬಡ ಜನತೆಯ ಶೋಷಣೆಯಂಥ ಅನೇಕ ಕೆಟ್ಟ ಆಚರಣೆಗಳು ತಾಂಡವವಾಡುತ್ತಿದ್ದ ಕಾಲವದು. ಸ್ತ್ರೀಯನ್ನು ಕೇವಲ ಭೋಗದ ಗೊಂಬೆಯನ್ನಾಗಿ ಮಾಡಿಕೊಂಡು ಅವಳಿಗೆ ಯಾವುದೇ ಧರ್ಮ ಸಂಸ್ಕಾರ ಕೊಡುತ್ತಿರಲಿಲ್ಲ. ವಿಧವೆಯಾದವಳನ್ನು ಅಮಾನುಷವಾಗಿ ಹಿಂಸಿಸುತ್ತಿದ್ದರು. ದೀನರೂ, ದಲಿತರು, ಬಡವರು, ಶೋಷಿತರು, ನೊಂದವರು, ಸ್ತ್ರೀಯರು, ತಮ್ಮ ಅಂತರಂಗದ ನೋವನ್ನು ಹೇಳಿಕೊಳ್ಳಲಾರದೆ ಒಳಗೊಳಗೇ ವೇದನೆಯನ್ನು ಅನುಭವಿಸುತ್ತಾ ತಮ್ಮನ್ನುದ್ಧರಿಸುವ ಮಹಾಪುರುಷನ ಆಗಮನಕ್ಕಾಗಿ ಕಾಯುತ್ತಿದ್ದ ಕಾಲದಲ್ಲಿ, ನೊಂದವರ ನಂದಾದೀಪವಾಗಿ, ಬಡವರ ಬಂಧುವಾಗಿ, ಶೋಷಿತರ ಸಂಜೀವಿನಿಯಾಗಿ, ಸ್ತ್ರೀಕುಲೋದ್ಧಾರಕರಾಗಿ, ಮಾನವತೆಯ ಸಾಕಾರ ಮೂರ್ತಿಯಾದ ದಿವ್ಯಜ್ಯೋತಿಯೊಂದರ ಉದಯವಾಯಿತು. ಮನುಕುಲ ಬೆಳಗಿದ ಆ ದಿವ್ಯಜ್ಯೋತಿಯೇ ವಿಶ್ವಗುರು ಬಸವಣ್ಣನವರು.

ಕಾರ್ತಿಕದ ಕತ್ತಲೆ ಎಷ್ಟೊಂದು ಕರಾಳವಾಗಿರುತ್ತದೆ ಎಂದು ತಮಗೆ ಗೊತ್ತಿದೆ. ಮನುಕುಲಕ್ಕೆ ಆವರಿಸಿದ ಇಂಥ ಕರಾಳವಾದ ಅಜ್ಞಾನದ ಕತ್ತಲೆಯಲ್ಲಿ ಗುರುಬಸವಣ್ಣನವರು, ಬಾಗೇವಾಡಿಯ ಮಾದರಸ ಮಾದಲಾಂಬಿಕೆಯರ ಮನೆಯ ದೀಪವಾಗಿ ಮಾತ್ರ ಬರಲಿಲ್ಲ; ಕೇವಲ ಕನ್ನಡ ನಾಡಿನ ಬೆಳಕಾಗಿ ಬರಲಿಲ್ಲ. ಕೇವಲ ಭಾರತ ಭೂಮಿಯ ಭಾಗ್ಯವಾಗಿ ಬರಲಿಲ್ಲ, ಆಕಾಶ ದೀಪದಂತೆ, ಇಡೀ ವಿಶ್ವವನ್ನು ಬೆಳಗುವ ವಿಶ್ವವಿನೂತನ ಪರಂಜ್ಯೋತಿಯಾಗಿ ಗುರು ಬಸವಣ್ಣನವರು ಅವತರಿಸಿದರು.

ಅಪ್ಪನು ನಮ್ಮ ಮಾದಾರ ಚೆನ್ನಯ್ಯ,
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ,
ಚಿಕ್ಕಯ್ಯ ನೆಮ್ಮಯ್ಯ ಕಾಣಯ್ಯ;
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ
ಎನ್ನನೇತಕ್ಕರಿಯರಿ ಲಿಂಗದೇವಾ. (ಬ.ವ.ದೀ.-350)

ಗುರುಬಸವಣ್ಣನವರು ಹುಟ್ಟಿದ್ದು ಅಂದಿನ ವರ್ಣಾಶ್ರಮ ವ್ಯವಸ್ಥೆಯ ಅತ್ಯಂತ ಶ್ರೇಷ್ಠ ಶೈವ ಬ್ರಾಹ್ಮಣ ಕುಲದಲ್ಲಿ. ಅವರ ತಂದೆಯು ಪುರಶ್ರೇಷ್ಠರೆನಿಸಿದ್ದರಲ್ಲದೆ ಉನ್ನತವಾದ ಹುದ್ದೆಯಲ್ಲಿದ್ದರು. ಗುರುಬಸವಣ್ಣನವರಿಗೆ ಹುಟ್ಟುತ್ತಲೇ ಸಕಲ ಸೌಲಭ್ಯಗಳು, ಲಭಿಸಿದ್ದರೂ ಅವರು ಇತರರ ಸೌಲಭ್ಯಗಳಿಗಾಗಿ ಹೋರಾಡಿದರು. ಗಾಂಧೀಜಿಯವರು ಸ್ವಾತಂತ್ರ ಹೋರಾಟದಲ್ಲಿ ಈ ದೇಶದ ನಾಯಕತ್ವವನ್ನು ವಹಿಸಿಕೊಂಡಾಗ ಇಲ್ಲಿಯ ಜನರಲ್ಲಿ ಆಗಾಗಲೇ ಸ್ವಾತಂತ್ರ ಹೋರಾಟದ ಕಾವು ಏರಿತ್ತು. ಜನ ಎಚ್ಚೆತ್ತು ಕೊಂಡಿದ್ದರು. ಆದರೆ ಗುರುಬಸವಣ್ಣನವರು ಈ ಸಮಾಜ ಸುಧಾರಣೆಯ ಕಾರ್ಯವನ್ನು ಕೈಗೆತ್ತಿ ಕೊಂಡಾಗ, ಜನ ಎಚ್ಚೆತ್ತುಕೊಂಡಿರಲಿಲ್ಲ ಮಾತ್ರವಲ್ಲ ಅಜ್ಞಾನದ ಕೂಪದಲ್ಲಿದ್ದರು. ಸಮಗಾರನ ಮಗ ಸಮಗಾರನೇ ಆಗಬೇಕು. ಮಾದಾರನ ಮಗ ಸತ್ತ ಪ್ರಾಣಿಗಳನ್ನೇ ಎಳೆಯಬೇಕು. ಮಡಿವಾಳನ ಮಗ ಬಟ್ಟೆಯನ್ನೇ ತೊಳೆಯಬೇಕು. ಇದು ಸಂಪ್ರದಾಯ, ರೂಢಿ, ನಿಯಮ ಎಂದು ನಂಬಿ, ನಾವು

ಶೋಷಣೆಗೊಳಗಾಗಿದ್ದೇವೆ ಎಂದು ಅರಿಯಲಾರದಷ್ಟು ಅಂಧಕಾರ ಕವಿದಿತ್ತು. ಗಾಂಧೀಜಿಯವರು ಕೂಡ ದಲಿತರ ಉದ್ಧಾರವನ್ನು ಮಾಡಿದ್ದರು. ಅವರ ಕೇರಿಗಳಿಗೆ ಹೋಗಿ ಕಸಗೂಡಿಸುವುದು, ಸ್ವಚ್ಛ ಮಾಡುವ ಕಾರ್ಯವನ್ನು ಸ್ವತಃ ತಾವೇ ಮಾಡಿದರು. ಆದರೆ ದಲಿತರಲ್ಲಿ ಯಾವುದೇ ಆತ್ಮವಿಶ್ವಾಸ ತುಂಬಲಿಲ್ಲ. ಅವರಿಗೆ ಯಾವುದೇ ಧರ್ಮ ಸಂಸ್ಕಾರ ನೀಡಲಿಲ್ಲ. ಅವರ ಸೇವೆಯನ್ನು ಮಾತ್ರ ತುಂಬಾ ಚೆನ್ನಾಗಿ ಮಾಡಿದ್ದಾರೆ. ಅವರು "ನನಗೆ ಮುಂದಿನ ಜನ್ಮ ಏನಾದರೂ ಇದ್ದರೆ ದಲಿತರ ಮಗನಾಗಿ ಹುಟ್ಟುತ್ತೇನೆ" ಎಂದರು. ಆದರೆ ಗುರುಬಸವಣ್ಣನವರು ಅದೇ ಜನ್ಮದಲ್ಲಿ ಅಪ್ಪನು ನಮ್ಮ ಮಾದಾರ ಚೆನ್ನಯ್ಯ ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ ಎಂದು, ದೀನ ದಲಿತರನ್ನು ಅಪ್ಪ ಬೊಪ್ಪ ಎಂದು ಅಪ್ಪಿಕೊಂಡ ಮಹಾಪುರುಷರು.

ಗುರು ಬಸವಣ್ಣನವರ ಅನೇಕ ವಚನಗಳಲ್ಲಿ ನೊಂದವರಿಗಾಗಿ ಅವರ ಹೃದಯ ಮಿಡಿಯುತ್ತಿದೆ. ಅತ್ಯಂತ ಸೂಕ್ಷ್ಮಾತಿ ಸೂಕ್ಷ್ಮವಾಗಿಯೂ ಈ ಸಮಾಜದಲ್ಲಿ ಸಮಾನತೆಗಾಗಿ ಹೋರಾಡಿದ್ದಾರೆ ಮಾತ್ರವಲ್ಲ ಅದನ್ನು ಮಾಡಿಯೂ ತೋರಿಸಿದ್ದಾರೆ.

ಚೆನ್ನಯ್ಯನ ಮನೆಯ ದಾಸನ ಮಗನು,
ಕಕ್ಕಯ್ಯನ ಮನೆಯ ದಾಸಿಯ ಮಗಳು,
ಇವರಿಬ್ಬರೂ ಹೊಲದಲ್ಲಿ ಬೆರಣಿಗೆ ಹೋಗಿ ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು ಲಿಂಗದೇವ ಸಾಕ್ಷಿಯಾಗಿ. ಬ.ವ.ದೀ.-347)

ಈ ವಚನದಲ್ಲಿ ಗುರುಬಸವಣ್ಣನವರು ಗಂಭೀರವಾದ ಆಲೋಚನೆಯನ್ನು ಮಂಡಿಸಿದ್ದಾರೆ. ಚೆನ್ನಯ್ಯನವರು ಅಂದಿನ ಕಾಲದ ಜಾತಿ ವ್ಯವಸ್ಥೆಯಲ್ಲಿ ಅಸ್ಪೃಶ್ಯರೆನಿಸಿಕೊಂಡಿದ್ದ ಮಾದಾರ ಜಾತಿಯವರು. ಇನ್ನು ಅವರ ಮನೆಯ ದಾಸ ಎಂದರೆ ಅವನ ಪರಿಸ್ಥಿತಿ ಹೇಗಿತ್ತೊ? ಕಕ್ಕಯ್ಯ ಅಂದಿನ ವ್ಯವಸ್ಥೆಯ ಡೋಹಾರ ಜಾತಿಯವರು, ಚರ್ಮವನ್ನು ಹದ ಮಾಡುವುದು ಇವರ ಕಾಯಕ. ಇವರ ಮನೆಯ ದಾಸಿಯ ಸಾಮಾಜಿಕ ಸ್ಥಿತಿ ಇನ್ನೆಷ್ಟು ನಿಕೃಷ್ಟವಾಗಿತ್ತೊ? ಚೆನ್ನಯ್ಯನ ದಾಸನ ಮಗ, ಕಕ್ಕಯ್ಯನ ದಾಸಿಯ ಮಗಳು ವಿವಾಹವಾಗುವುದಕ್ಕಿಂತ ಮುಂಚೆಯೇ, ಬೆರಣಿಯನಾಯಲು ಹೋದಾಗ ಸಂಗ ಮಾಡಿದ್ದಾರೆ. ಅವರಿಗೊಂದು ಮಗು ಹುಟ್ಟಿದೆ. ಆ ಮಗುವೇ ನಾನು ಎಂದು ಹೇಳುವಲ್ಲಿ ಗುರುಬಸವಣ್ಣನವರು ಬಹುದೊಡ್ಡ ಸಂದೇಶವನ್ನು ಮನುಕುಲಕ್ಕೆ ನೀಡಿದ್ದಾರೆ. ಈ ರೀತಿ ಸಂಬಂಧ ಬೆಳೆಸಿ ಮಗುವಿಗೆ ಜನ್ಮ ನೀಡಿರುವುದು, ಚೆನ್ನಯ್ಯನ ದಾಸನ ಮಗ ಮತ್ತು ಕಕ್ಕಯ್ಯನ ದಾಸಿಯ ಮಗಳ ತಪ್ಪು. ಅದು ಅಕ್ಷಮ್ಯ, ಆದರೆ ಅವರಿಗೆ ಹುಟ್ಟಿದ ಆ ಮಗುವಿನ ಮೇಲೆ ಯಾವುದೇ ತಪ್ಪನ್ನು ಹೊರಿಸಲಿಕ್ಕಾಗದು. ಹೀಗಾಗಿ ಇಂಥ ಮಗುವಿಗೆ ಸಮಾಜದಲ್ಲಿ ಯಾವ ಸ್ಥಾನ ಮಾನ ಕೊಡಬೇಕು ಎಂದು ಆಲೋಚನೆ ಮಾಡಿ, "ಇವರಿಬ್ಬರಿಗೆ ಹುಟ್ಟಿದ ಮಗ ನಾನು" ಎಂದು ಗುರುಬಸವಣ್ಣನವರು ಹೇಳುತ್ತಾರೆ. ಅಂದರೆ "ಅತ್ಯಂತ ಶಾಸ್ತ್ರೋಕ್ತವಾಗಿ ವಿವಾಹವಾದ, ಸಮಾಜದ ವರ್ಣಾಶ್ರಮ ವ್ಯವಸ್ಥೆಯ ಉತ್ತಮ ಕುಲದ ಬ್ರಾಹ್ಮಣ ಮಾದರಸ ಮತ್ತು ಮಾದಲಾಂಬಿಕೆಯ ಪುತ್ರನಾದ ನನಗೆ ಈ ಸಮಾಜದಲ್ಲಿ ಯಾವ ಸ್ಥಾನಮಾನ ಗೌರವ ಸಿಗುತ್ತದೆಯೋ. ಅವೆಲ್ಲವೂ ಅನೈತಿಕ ಸಂಬಂಧದಿಂದ ಹುಟ್ಟಿದ ಆ ಮಗುವಿಗೂ ಸಿಗಬೇಕು." ಎನ್ನುವುದು ಗುರು ಬಸವಣ್ಣನವರು ಪ್ರತಿಪಾದಿಸಿದ ಸಮಾನತೆ. ಜಗತ್ತಿನ ತುಂಬಾ ಹಬ್ಬುತ್ತಿರುವ ಕ್ರಿಶ್ಚಿಯನ್ ಧರ್ಮದಲ್ಲಿಯೂ ಮೊನ್ನೆಯವರೆಗೆ, ವಿವಾಹವಾಗದೇ ಮಗುವಿಗೆ ಜನ್ಮ ಕೊಟ್ಟ ತಾಯಿ ತಂದೆಗಳ ಇಂಥ ಮಕ್ಕಳಿಗೆ ಯಾವುದೇ ಧರ್ಮ ಸಂಸ್ಕಾರವಿರಲಿಲ್ಲ. ಕೆಲವು ವರ್ಷಗಳ ಹಿಂದೆ ಇದಕ್ಕೆ ಸುಧಾರಣೆಯನ್ನು ತಂದು ಈಗ ಅವರಲ್ಲೂ ಇಂಥ ಮಕ್ಕಳಿಗೂ ಧರ್ಮ ಸಂಸ್ಕಾರ ನೀಡುತ್ತಿದ್ದಾರೆ.

ಗುರು ಬಸವಣ್ಣನವರು ಧರ್ಮ ಸಂಸ್ಕಾರವನ್ನು ಎಲ್ಲರಿಗೂ ಮುಕ್ತವಾಗಿ ಕೊಡಬೇಕು ಎಂದರು. ಶಾಲೆಗೆ ಒಂದನೇ ತರಗತಿಗೆ ಪ್ರವೇಶ ನೀಡುವಾಗ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆ ಹೇಗೆ ಇರುವುದಿಲ್ಲವೋ ಹಾಗೆಯೇ ಪ್ರಥಮ ಹಂತದಲ್ಲಿ ಒಂದು ಧರ್ಮದಲ್ಲಿ ಎಲ್ಲರನ್ನೂ ಇಂಬಿಟ್ಟುಕೊಳ್ಳುವಾಗ ಅವರಲ್ಲಿ ಯಾವುದೇ ಕುಲಜಾತಿ, ಕಸುಬನ್ನು ಹುಡುಕಬಾರದು ಎನ್ನುತ್ತಾರೆ.

ಎಡದ ಕೈಯಲ್ಲಿ ಕತ್ತಿ, ಬಲದ ಕೈಯಲ್ಲಿ ಮಾಂಸ
ಬಾಯಲ್ಲಿ ಸುರೆಯ ಗಡಿಗೆ ಕೊರಳಲ್ಲಿ ದೇವರಿರಲು
ಅವರ ಲಿಂಗನೆಂಬೆ, ಸಂಗನೆಂಬೆ;
ಲಿಂಗದೇವಾ, ಅವರ ಮುಖಲಿಂಗಿಗಳೆಂಬೆ! ಬ.ವ.ದೀ.-717)

ಮಾನವ ಸಹಜವಾದ ದೌರ್ಬಲ್ಯದಿಂದಲೊ, ಅಜ್ಞಾನದಿಂದಲೊ, ಅವನ ಸಾಮಾಜಿಕ

ಹಿನ್ನೆಲೆಯಿಂದಲೋ, ಒಬ್ಬ ವ್ಯಕ್ತಿ ಕುಡುಕನಾಗಿರಬಹುದು, ಕೊಲೆಗಡುಕನಾಗಿರಬಹುದು, ಮಾಂಸಾಹಾರಿಯಾಗಿರಬಹುದು. ಇಂಥ ವ್ಯಕ್ತಿಗೆ ಹೃದಯ ಪರಿವರ್ತನೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಹೃದಯ ಪರಿವರ್ತನೆಗೊಂಡು ಬಂದಾಗ, ಇಂಥವರಿಗೆ ಧರ್ಮ ಸಂಸ್ಕಾರ ನೀಡುತ್ತೇನೆ ಎನ್ನುತ್ತಾರೆ. ಕೊರಳಲ್ಲಿ ದೇವರಿರಲು ಅವರ ಲಿಂಗನೆಂಬೆ, ಸಂಗನೆಂಬೆ ಎನ್ನುವ ಮಾತಿನಲ್ಲಿ ದುಷ್ಟನೊ, ದುರ್ಗುಣಿಯೂ ಆದ ವ್ಯಕ್ತಿಗೂ ಧರ್ಮ ಸಂಸ್ಕಾರ ಸಿಗಬೇಕು, ಶರಣರ ಸಂಗ ಅವನಿಗೆ ಸಿಗಬೇಕು. ಇದರಿಂದ ಹೃದಯ ಪರಿವರ್ತನೆಯಾದಾಗ ಲಿಂಗದೀಕ್ಷೆಯನ್ನು ಕೂಡ ಅಂಥವನಿಗೆ ಕೊಡಬೇಕು ಎನ್ನುತ್ತಾರೆ.

ಗುರುಬಸವಣ್ಣನವರು, ದೀನ ದಲಿತರು ಅಸ್ಪೃಶ್ಯರನ್ನು ಉದ್ಧರಿಸಲು ಬಳಸಿದ ರೀತಿ (Way of approach) ತುಂಬಾ ವಿಶೇಷವಾಗಿದೆ. ತಮ್ಮನ್ನು ಅವರೊಂದಿಗೆ ಸಮೀಕರಿಸಿಕೊಳ್ಳುತ್ತಾರೆ.

ಭಕ್ತಿಯಿಲ್ಲದ ಬಡವ ನಾನಯ್ಯ
ಕಕ್ಕಯ್ಯನ ಮನೆಯಲ್ಲೂ ಬೇಡಿದೆ.
ಚೆನ್ನಯ್ಯನ ಮನೆಯಲ್ಲೂ ಬೇಡಿದೆ.
ದಾಸಯ್ಯನ ಮನೆಯಲ್ಲೂ ಬೇಡಿದೆ.
ಎಲ್ಲಾ ಪುರಾತರು ನೆರೆದು ಭಕ್ತಿ ಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು, ಲಿಂಗದೇವಾ. (ಬ.ವ.ದೀ.-351)

ತಾವು ಭಕ್ತಿ ಭಂಡಾರಿಯಾಗಿದ್ದು ಸಹ ಭಕ್ತಿಯಿಲ್ಲದ ಬಡವ ನಾನು ಎಂದು ಹೇಳಿಕೊಳ್ಳುತ್ತಾರೆ. ಕಕ್ಕಯ್ಯ, ಚೆನ್ನಯ್ಯ, ದಾಸಯ್ಯ, ವರ್ಣಾಶ್ರಮ ವ್ಯವಸ್ಥೆಯಲ್ಲಿ ಅಸ್ಪೃಶ್ಯರು. ಇಂಥವರಿಗೆ ನಾನು ಮಹಾಭಕ್ತ ನೀವು ನನ್ನಂತೆ ಭಕ್ತರಾಗಬೇಕು ಎಂದು ಹೇಳಿದರೆ ಅವರಿಗೆ ಇದು ಸಾಧ್ಯವಾಗಲಿಕ್ಕಿಲ್ಲ. ಅದಕ್ಕಾಗಿ, ನಾನು ಭಕ್ತಿಯಿಲ್ಲದ ಬಡವ ಎಂದು ಹೇಳಿದಾಗ, ಕಕ್ಕಯ್ಯ ಚೆನ್ನಯ್ಯನವರಲ್ಲಿ ಅಂತರಂಗದಲ್ಲಿ ಬದಲಾವಣೆಯಾಗುತ್ತದೆ. ಹೃದಯ ಪರಿವರ್ತನೆಯಾಗುತ್ತದೆ. ಅದಕ್ಕಾಗಿ ಗುರುಬಸವಣ್ಣನವರು ಹಾಗೆ ಹೇಳಿದರು. ಅಂದು ಸಮಾಜವು ವೈಚಾರಿಕ ಭಕ್ತಿಯಿಂದ ಬಡವಾಗಿತ್ತು. ಇಂಥ ಸಂದರ್ಭದಲ್ಲಿ ಗುರುಬಸವಣ್ಣನವರು, ವೈಚಾರಿಕ ಭಕ್ತಿಯನ್ನು ಹರಡಿದಾಗ, ಅವರ ಮೂಲ ಉದ್ದೇಶವು ಈಡೇರಿದಾಗ ಮತ್ತೆ ಈ ಸಮಾಜವೆಂಬ ಪಾತ್ರೆಯಲ್ಲಿ ವೈಚಾರಿಕ ಭಕ್ತಿ ತುಂಬಿತು.

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯ.
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯ.
ದಾಸಯ್ಯ ಶಿವದಾನವನೆರೆಯ ನೋಡಯ್ಯ.
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ.
ಉನ್ನತ ಮಹಿಮ ಲಿಂಗದೇವಾ, ಶಿವಧೋ! ಶಿವಧೋ!! (ಬ.ವ.ದೀ.-345)

"ನಾನು ಉತ್ತಮ ಕುಲದವನು ಎಂದರೆ, ಕೆಳಜಾತಿಯವರಾದ ಕಕ್ಕಯ್ಯ, ದಾಸಯ್ಯ, ಚೆನ್ನಯ್ಯನವರು ನನ್ನ ಬಳಿಗೆ ಬರಲು ಹೆದರುತ್ತಾರೆ. ನನ್ನ ಬಳಿಗೆ ಬರದೇ ಹೋದರೆ, ಅಥವಾ ನಾನವರ ಬಳಿಗೆ ಹೋಗಿ ಅವರೊಂದಿಗೆ ಮಾತನಾಡಲು ಸಾಧ್ಯವಾಗದೇ ಹೋದರೆ, ನಾನು ಅವರಿಗೆ ಧರ್ಮ ಸಂಸ್ಕಾರವನ್ನು ಹೇಗೆ ಕೊಡಲು ಸಾಧ್ಯ?" ಎನ್ನುತ್ತಾರೆ. ಅದಕ್ಕಾಗಿ ಅವರು ಉತ್ತಮ ಕುಲದಲ್ಲಿ ಹುಟ್ಟಿದುದೇ ಅವರಿಗೆ ಕಷ್ಟತನದ ಹೊರೆ ಎನಿಸಿತ್ತು.

ಇಂಥ ವಚನಗಳನ್ನು ನೋಡಿ ಕೆಲವು ಮೂರ್ಖ ಸಾಹಿತಿಗಳು ಗುರುಬಸವಣ್ಣನವರು ಬ್ರಾಹ್ಮಣ ಕುಲದಲ್ಲಿ ಹುಟ್ಟಿಲ್ಲ, ಅವರು ಕೆಳಜಾತಿಯಲ್ಲಿ ಹುಟ್ಟಿದವರು ಎಂದು ಮೊಂಡುವಾದ ಮಾಡುತ್ತಾರೆ. ವಚನ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ವಿಶೇಷವಾದ ಪರಿಣತಿ ಬೇಕು. ಕೇವಲ ಸಾಹಿತಿಯಾದ ಮಾತ್ರಕ್ಕೆ ವಚನ ಸಾಹಿತ್ಯ ಅರ್ಥವಾಗುವುದಿಲ್ಲ. ವೈದ್ಯರು ಎಂದು ವೈದ್ಯಕೀಯ ವಿಜ್ಞಾನ (Medical Science) ಓದಿದವರೆಲ್ಲರಿಗೂ ಕರೆದರೂ ಎಲ್ಲಾ ವೈದ್ಯರು ಎಲ್ಲಾ ಚಿಕಿತ್ಸೆಗಳನ್ನು ಅಥವಾ ಎಲ್ಲಾ ರೀತಿಯ ರೋಗಗಳಿಗೆ ಚಿಕಿತ್ಸೆ ಕೊಡುವುದಿಲ್ಲ. ಕಣ್ಣಿನ ತಜ್ಞರು, ನರ ತಜ್ಞರು, ಮೂಳೆ ತಜ್ಞರು, ಹೃದಯ ತಜ್ಞರು ಎಂದು ಒಂದೊಂದರಲ್ಲೇ ಪರಿಣತಿ ಸಾಧಿಸಿದವರಿರುತ್ತಾರೆ. ಮೂಳೆ ತಜ್ಞನಾದ ವೈದ್ಯನು ಹೃದಯದ ಶಸ್ತ್ರ ತಜ್ಞರು ಬಳಸುವ ಸಲಕರಣೆಗಳಿಗೂ ತುಂಬಾ ವ್ಯತ್ಯಾಸವಿದೆ. ಮೂಳೆರೋಗ ತಜ್ಞನು ಹೃದಯ ಶಸ್ತ್ರ ಚಿಕಿತ್ಸೆ ಮಾಡಿದರೆ ರೋಗಿಯ ಸಾವು ಖಚಿತ. ಅಲ್ಲದೇ ಹೃದಯ ರೋಗ ತಜ್ಞರು ಸೂಕ್ಷ್ಮಾತಿ ಸೂಕ್ಷ್ಮವಾಗಿರುತ್ತಾರೆ. ಅದೇ ರೀತಿ ವಚನ ಸಾಹಿತ್ಯ ಲಿಂಗಾಯತ ಧರ್ಮದ ಹೃದಯ. ಇದನ್ನು

ಅರ್ಥ ಮಾಡಿಕೊಳ್ಳಲು ಅರ್ಚನೆ ಅರ್ಪಣೆ ಅನುಭಾವವೆಂಬ ಸೂಕ್ಷ್ಮಾತಿ ಸೂಕ್ಷ್ಮವಾದ ತರಬೇತಿ ಹೊಂದಿರಬೇಕು. ವಚನಗಳಿಗೆ ತೋರು ಅರ್ಥ ಮತ್ತು ಒಳ ಅರ್ಥ ಎಂದು ಎರಡು ಬಗೆಯ ಅರ್ಥಗಳಿರುತ್ತವೆ. ಗುರುಬಸವಣ್ಣನವರು ತಮ್ಮ ಹೃದಯಾಂತರಾಳವನ್ನು ವಚನಗಳಲ್ಲಿ ತೆರೆದಿಟ್ಟಿದ್ದಾರೆ. ಅದನ್ನು ಅರ್ಥ ಮಾಡಿಕೊಳ್ಳಲು ವಿಶೇಷವಾದ ಪರಿಣತಿ ಬೇಕು. ಯಾರ್‍ಯಾರೋ ಯಾವುದ್ಯಾವುದೋ ಸಾಹಿತ್ಯ ಬರೆಯುವಂತಥವರು, ವಚನ ಸಾಹಿತ್ಯದ ಬಗ್ಗೆ ಬರೆದರೆ ಅಪಾರ್ಥಗಳೇ ಹೆಚ್ಚಾಗುತ್ತವೆ. ವಚನ ಸಾಹಿತ್ಯ ಅರ್ಥ ಮಾಡಿಕೊಳ್ಳಲು ಶರಣರ ಸಂಗದಲ್ಲಿ ಬೆರೆಯಲೇಬೇಕು. ಮಾತಾಜಿಯವರಂಥ ಗುರುವಿನ ಮಾರ್ಗದರ್ಶನ ಹೊಂದಲೇ ಬೇಕು.

ಹೀಗೆ ಗುರುಬಸವಣ್ಣನವರು ತಾವು ಎಲ್ಲಾ ಸೌಲಭ್ಯ ಹೊಂದಿದ್ದರೂ. ಸೌಲಭ್ಯ ವಂಚಿತರಿಗಾಗಿ ಹೋರಾಡಿದರು. ಡಾ|| ಅಂಬೇಡ್ಕರ್‌ರವರ ಹೋರಾಟಕ್ಕೂ ಗುರು ಬಸವಣ್ಣನವರ ಹೋರಾಟಕ್ಕೂ ಇದೇ ಪ್ರಮುಖವಾದ ವ್ಯತ್ಯಾಸ. ಅಂಬೇಡ್ಕರ್‌ರವರು ಸಮಾಜದಿಂದ ತುಳಿತಕ್ಕೊಳಗಾಗಿ ಶೋಷಿಸಲ್ಪಟ್ಟಿದ್ದರು. ಹೀಗಾಗಿ ಅವರು ತಮ್ಮ ಹಕ್ಕುಗಳಿಗಾಗಿ ಹೋರಾಡಿದರು. ಇದು ಸಹಜ. ಗುರುಬಸವಣ್ಣನವರು ಪ್ರಧಾನಿಯಂಥ ಉನ್ನತ ಹುದ್ದೆಯಲ್ಲಿದ್ದರೂ ಅವರ ಹೃದಯ ಮಾತ್ರ ಸಾಮಾಜಿಕವಾಗಿ ಕಷ್ಟದಲ್ಲಿರುವವರಿಗಾಗಿ ಮಿಡಿಯುತ್ತಿತ್ತು.

ಸೆಟ್ಟಿಯೆಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ?
ಡೋಹಾರನೆಂಬೆನೆ ಕಕ್ಕಯ್ಯನ?
ಆನು ಹಾರುವನೆಂದಡೆ ಲಿಂಗದೇವಯ್ಯ ನಗುವನಯ್ಯ.

ಈ ವಚನವನ್ನು ಈ ರೀತಿ ಅರ್ಥೈಸಬೇಕು. ಗುರುಬಸವಣ್ಣನವರು ಇಷ್ಟಲಿಂಗವನ್ನು ಕಂಡು ಹಿಡಿದು, ಮೊದಲು ಅದನ್ನು ತಾವೇ ಧರಿಸಿ, ಜಗತ್ತಿನ ಮೊದಲ ಲಿಂಗಾಯತರಾಗಿ, ಲಿಂಗಾಯತ ಧರ್ಮವನ್ನು ಸಂಸ್ಥಾಪನೆ ಮಾಡಿದರು. ಅಲ್ಲಿಗೆ ಅವರ ಬ್ರಾಹ್ಮಣ ಜಾತಿ ಅಳಿದು ಹೋಯಿತು. ನಂತರ ಇಷ್ಟಲಿಂಗವನ್ನು ಎಲ್ಲಾ ಜಾತಿಯವರಿಗೂ ಕೊಟ್ಟರು. ಅಲ್ಲಿಗೆ ಅವರೆಲ್ಲರ ಪೂರ್ವಜಾತಿ ಅಳಿದು ಪುನರ್ಜಾತರಾಗಿ ಲಿಂಗಾಯತರಾದರು. ಆಗ ಗುರುಬಸವಣ್ಣನವರು, ಮಾದಾರ ಚೆನ್ನಯ್ಯ, ಮಡಿವಾಳ ಮಾಚಯ್ಯ ಹಾಗೂ ಇನ್ನಿತರ ಕೆಳವರ್ಗದವರೆನಿಸಿಕೊಂಡವರು ದೀಕ್ಷೆಯಾದ ನಂತರ ಸಮಾನರಾದರು. ಅದಕ್ಕಾಗಿ ಮಾಚಯ್ಯನ - ಮಡಿವಾಳ, ಕಕ್ಕಯ್ಯನ - ಡೋಹಾರ, ನನ್ನನ್ನು - ಹಾರುವ (ಬ್ರಾಹ್ಮಣ) ಎಂದರೆ ದೇವರು ನಗುತ್ತಾನೆ ಎನ್ನುತ್ತಾರೆ.

ಗುರುಬಸವಣ್ಣನವರ ಹೃದಯದಲ್ಲಿ ಧರ್ಮದಿಂದ ಹೊರಗುಳಿದಿರುವವರ ಬಗ್ಗೆ ಅಪಾರವಾದ ಕಳಕಳಿ ತುಂಬಿದೆ. ಲಕ್ಷ ಲಕ್ಷ ಜನ ಅನುಭಾವ ಮಂಟಪಕ್ಕೆ ಬಂದು ದೀಕ್ಷೆ ತೆಗೆದುಕೊಂಡು ಲಿಂಗಾಯತರಾಗಿ ಲಿಂಗಾರ್ಚನೆ ಮಾಡುತ್ತಿದ್ದರೂ ಗುರು ಬಸವಣ್ಣನವರ ಲಕ್ಷ್ಯ ಮಾತ್ರ ಇನ್ನೂ ಧರ್ಮ ಮಂದಿರದೊಳಗೆ ಬರದೇ ಇರುವವರ ಕಡೆಗಿದೆ.

ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ
ಸಲಿಗೆವಂತರಾಗಿ ಒಳಗೆ ಐದಾರೆ
ಆನುದೇವಾ ಹೊರಗಣವನು
'ಸಂಬೋಳಿ ಸಂಬೋಳಿ' ಎನ್ನುತ್ತಾ ಇಂಬಿನಲ್ಲಿ ಇದ್ದೇನೆ
ಲಿಂಗದೇವಾ ನಿಮ್ಮ ನಾಮವಿಡಿದ ಅನಾಮಿಕ ನಾನು. (ಬ.ವ.ದೀ.-929)

ಈ ವಚನದ ಅರ್ಥವು ತುಂಬಾ ವಿಶೇಷವಾಗಿದೆ. ಗುರು ಬಸವಣ್ಣನವರ ಹೃದಯಾಂತರಾಳದ ಭಾವನೆಗಳನ್ನು ಅರಿತುಕೊಂಡವರಿಗೆ ಮಾತ್ರ ಈ ವಚನ ಅರ್ಥವಾಗುತ್ತದೆ. ಲಿಂಗಾಯತ ಧರ್ಮವು, ಆಹಾರ ಪದ್ಧತಿಯಲ್ಲಿ ಸಸ್ಯಾಹಾರಿ ಧರ್ಮ. ಅನೇಕ ಜನ ಸಸ್ಯಾಹಾರಿಗಳು ಈ ಧರ್ಮಕ್ಕೆ ಬಹುಬೇಗನೆ ಪರಿವರ್ತನೆಯಾದರು. ಕೆಳಜಾತಿಯವರೆನಿಸಿಕೊಂಡವರಲ್ಲಿ ಹೆಚ್ಚಿನ ಜನರು ಮಾಂಸಾಹಾರಿಗಳು. ಹೀಗಾಗಿ ಅವರು ಈ ಧರ್ಮವನ್ನು ಸ್ವೀಕರಿಸಲಿಕ್ಕೆ ಸ್ವಲ್ಪ ಹಿಂಜರಿಯುತ್ತಿದ್ದರು. ಅಂದು ಸಾಮಾಜಿಕ ಪರಿಸ್ಥಿತಿ ತುಂಬಾ ಕೆಟ್ಟದಾಗಿತ್ತು. ಅಸ್ಪೃಶ್ಯರೆನಿಸಿಕೊಂಡವರ ನೆರಳು ಕೂಡ ಮೇಲಿನ ಜಾತಿಯವರೆನಿಸಿಕೊಂಡವರ ಮೇಲೆ ಬೀಳುವಂತಿರಲಿಲ್ಲ. ಅವರು ನಡೆದ ಹೆಜ್ಜೆಯಲ್ಲಿ ಇವರು ಹೆಜ್ಜೆಯನ್ನಿಡುತ್ತಿರಲಿಲ್ಲ. ಮೇಲು ಜಾತಿಯವರ ಸೇವೆಗಾಗಿ ಅಸ್ಪೃಶ್ಯರು ಊರೊಳಗೆ ಬರುವಾಗ ಉಗುಳು ಬಂದಾಗ ಉಗುಳಲಿಕ್ಕೆ ಕೊರಳಿಗೆ ಒಂದು ಮಡಕೆ, ಅವರು ನಡೆದ ಹೆಜ್ಜೆಗಳನ್ನು ಅಳಿಸಲಿಕ್ಕೆ ಸೊಂಟಕ್ಕೆ ಒಂದು ಕಸಬರಿಕೆ ಕಟ್ಟಿಕೊಂಡು ಬರಬೇಕಿತ್ತು. ಜೊತೆಗೆ ಊರಿನ ಜನರಿಗೆ ಎಚ್ಚರಿಕೆ ನೀಡಲು

'ಸಂಬೋಳಿ ಸಂಬೋಳಿ' ಎನ್ನುವಂಥ ಶಬ್ದವನ್ನು ಕೂಗುತ್ತಾ ಬರಬೇಕಾಗಿತ್ತು.

'ಸಂಬೋಳಿ ಸಂಬೋಳಿ' ಎಂದು ಗುರುಬಸವಣ್ಣನವರು ಕೂಗುತ್ತಿರುವಾಗ ಅದನ್ನು ಕೇಳಿಸಿಕೊಳ್ಳುವ ಕೀಳರಿಮೆ ಹೊಂದಿರುವ ಜನರು ''ಓಹೋ ಇಲ್ಲಿ ನಮ್ಮವರು ಯಾರೋ ಇದ್ದಾರೆ'' ಎಂದು ತಿಳಿದು ಅನುಭಾವ ಮಂಟಪಕ್ಕೆ ಬರಬೇಕು ಎನ್ನುವುದು ಗುರು ಬಸವಣ್ಣನವರ ಹೃದಯಾಂತರಾಳದ ಹಂಬಲವಾಗಿದೆ.

ವ್ಯಕ್ತಿಯು ಮಾಡುವ ವೃತ್ತಿಯ ಆಧಾರದ ಮೇಲೆ ಜಾತಿಗಳು ಮಾಡಲ್ಪಟ್ಟವು. ಆದರೆ ಗುರು ಬಸವಣ್ಣನವರು, ಯಾವ ಕಾಯಕವೂ ಮೇಲಲ್ಲ ಕೀಳಲ್ಲ. ನಾಡಿನ ಹಿತಕ್ಕಾಗಿ ಸಮಾಜದ ಸಮತೋಲನಕ್ಕಾಗಿ ಪ್ರತಿಯೊಂದು ಕಾಯಕವೂ ಬೇಕು. ಎಂದು ಕಾಯಕದಲ್ಲಿ ಸಮಾನತೆಯನ್ನು ತಂದರು ಕಾಸುವವನು ಕಮ್ಮಾರ, ಬೀಸುವವನು ಮಡಿವಾಳನೇ ಹೊರತು, ಕಮ್ಮಾರ ಕಾಸಲೇ ಬೇಕು, ಮಡಿವಾಳ ಬಟ್ಟೆಗಳನ್ನೇ ಒಗೆಯಬೇಕು ಎನ್ನುವುದು ಶರಣರು ಸಮ್ಮತಿಸುವುದಿಲ್ಲ. ಇವನು ಹೊಲೆಯ, ಇವನು ಮಾದಿಗ ಎನ್ನಲಿಕ್ಕೆ ಅವನ ಹುಟ್ಟು ಮತ್ತು ವೃತ್ತಿಗಳು ಆಧಾರವಲ್ಲ; ಅವನ ವರ್ತನೆ ಮತ್ತು ಆಚಾರಗಳಿಂದ ಅವುಗಳನ್ನು ನಿರ್ಧರಿಸಬೇಕು. ಅದಕ್ಕಾಗಿ ಗುರು ಬಸವಣ್ಣನವರ ಪ್ರಕಾರ 'ಕೊಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ'; 'ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವವನೇ ಕುಲಜ.'

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ
ಜಲಬಿಂದುವಿನ ವ್ಯವಹಾರ ಒಂದೇ
ಆಸೆ, ಆಮಿಷ, ರೋಷ, ಹರುಷ, ವಿಷಯಾದಿಗಳೆಲ್ಲಾ ಒಂದೇ
ಏನನೋದಿ ಏನಕೇಳಿ ಏನುಫಲ?
ಕುಲಜನೆಂಬುದಕ್ಕೆ ಆವುದು ದೃಷ್ಟ?
ಸಪ್ತಧಾತು ಸಮಂ ಪಿಂಡಂ ಸಮಯೋನಿಸಮುದ್ಭವಂ
ಆತ್ಮಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ?
ಎಂದುದಾಗಿ,
ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ;
ಹಾಸನಿಕ್ಕಿ ಸಾಲಿಗನಾದ; ವೇದವನೋದಿ ಹಾರುವನಾದ.
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?
ಇದು ಕಾರಣ ಲಿಂಗದೇವಾ,
ಲಿಂಗಸ್ಥಲವನರಿದವನೆ ಕುಲಜನು! (ಬ.ವ.ದೀ.-588)

ಒಬ್ಬ ವ್ಯಕ್ತಿಯು ಕುಲಜನು ಉತ್ತಮನು ಎನ್ನಲಿಕ್ಕೆ ಏನು ಆಧಾರ? ಅವನು ಪಡೆದುಕೊಂಡಿರುವ ಧರ್ಮಸಂಸ್ಕಾರ ಮತ್ತು ಇಷ್ಟಲಿಂಗ.

ಆವ ಕುಲವಾದಡೇನು ಲಿಂಗವಿದ್ದವನೆ ಕುಲಜನು.
ಕುಲವನರಸುವರೆ ಶರಣರಲ್ಲಿ, ಜಾತಿ ಸಂಕರನಾದ ಬಳಿಕ?
ಒಕ್ಕುದ ಕೊಂಬೆನವರಲ್ಲಿ ಕೂಸ ಕೊಡುವೆ ಅವರಿಂಗೆ
ಲಿಂಗದೇವಾ ನಂಬುವೆ ನಿಮ್ಮ ಶರಣರನು.

ಹುಟ್ಟಿನ ಆಧಾರದ ಮೇಲೆ ಯಾರನ್ನೂ ಮೇಲು ಕೀಳು ಎಂದು ಹೇಳಲಿಕ್ಕಾಗದು. ಯಾವುದೇ ಕುಲದವರಾಗಲೀ.ಇಷ್ಟಲಿಂಗ ದೀಕ್ಷೆ ಹೊಂದಿದ ಶರಣರೇ ಕುಲಜರು. ಇಂಥವರೊಡನೆ ಕುಳಿತು ಪ್ರಸಾದ ಮಾಡಬೇಕು. ವೈವಾಹಿಕ ಸಂಬಂಧಗಳನ್ನು ಬೆಳೆಸಬೇಕು ಎಂದು ಗುರುಬವಸಣ್ಣನವರು ತಿಳಿಸಿದ್ದಾರಲ್ಲದೆ ಇವುಗಳನ್ನು ಪ್ರಾಯೋಗಿಕವಾಗಿ ಮಾಡಿಯೂ ತೋರಿಸಿದ್ದಾರೆ.

ದೇವಾ ದೇವಾ ಬಿನ್ನಪ ಅವಧಾರು;
ವಿಪ್ರಮೊದಲು ಅಂತ್ಯಜ ಕಡೆಯಾಗಿ
ಭಕ್ತರಾದವರನೆಲ್ಲರ ಒಂದೇ ಎಂಬೆ.
ಹಾರುವ ಮೊದಲು ಶ್ವಪಚ ಕಡೆಯಾಗಿ
ಭವಿಯಾದವರನೆಲ್ಲರನೊಂದೇ ಎಂಬೆ.
ಈ ಹೀಗೆಂದು ನಂಬುವುದೆನ್ನ ಮನವು

ಈ ನುಡಿದ ನುಡಿಯೊಳಗೆ ಎಳ್ಳಮೊನೆಯಷ್ಟು ಸಂದೇಹವುಳ್ಳಡೆ;
ನೀನಂದೇ ಮೂಗ ಕೊಯ್ಯಿ ಲಿಂಗದೇವಾ.

ಇಷ್ಟಲಿಂಗಧಾರಣೆ/ದೀಕ್ಷೆಯೇ ಒಬ್ಬ ವ್ಯಕ್ತಿಯ ಆಳತೆಗೆ ಇರುವ ಆಳತೆಗೋಲು. ಲಿಂಗಾಯತರ ಮನೆಯಲ್ಲಿಯೇ ಹುಟ್ಟಿರಲಿ ಹಾರುವರ ಮನೆಯಲ್ಲಿಯೇ ಹುಟ್ಟಿರಲಿ, ಅಂತ್ಯಜರ ಮನೆಯಲ್ಲೇ ಹುಟ್ಟಿರಲಿ ಲಿಂಗಾಯತನಾಗಬೇಕಾದರೆ ಕಡ್ಡಾಯವಾಗಿ ಇಷ್ಟಲಿಂಗ ಧರಿಸಲೇಬೇಕು. ಹಾಗೆ ಇಷ್ಟಲಿಂಗ ಧರಿಸದವರು ಯಾರಲ್ಲೇ ಹುಟ್ಟಿರಲಿ ಅವರೆಲ್ಲ ಭವಿಗಳೇ!

ಕನ್ನಡ ನಾಡಿನ ದಲಿತರೆನಿಸಿಕೊಂಡವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರೆನಿಸಿಕೊಂಡವರು, ಈ ನಾಡಿನಲ್ಲಿ ಹುಟ್ಟಿರುವುದಕ್ಕಾಗಿ ಹೆಮ್ಮೆ ಪಡಬೇಕು. ಲಿಂಗಾಯತ ಧರ್ಮ ಹುಟ್ಟಿದ್ದೇ ದೀನ ದಲಿತರ, ಮತ್ತು ಮುಗ್ಧ ಜನತೆಯ ಶೋಷಣೆಯನ್ನು ತಪ್ಪಿಸಲಿಕ್ಕೆ. ಪೂರ್ವಾಶ್ರಮದಲ್ಲಿ ಅಸ್ಪೃಶ್ಯರ ಪಟ್ಟಿಗೆ ಸೇರಿಸಲ್ಪಟ್ಟಿದ್ದ ಕಂಬಳಿ ನಾಗಿದೇವನ ಮನೆಯಲ್ಲಿ ಗುರುಬಸವಣ್ಣನವರು ಪ್ರಸಾದ ಸ್ವೀಕರಿಸಿದ್ದರು. ಹರಳಯ್ಯನವರ ಮನೆಯಲ್ಲಿ ಪ್ರಸಾದ ಸ್ವೀಕರಿಸಿದರು. ಹರಳಯ್ಯನವರು ತಮ್ಮ ಮೈಚರ್ಮದಿಂದ ಮಾಡಿದ ಚಮ್ಮಾವುಗೆಗಳನು ಗುರು ಬಸವಣ್ಣನವರಿಗೆ ಅರ್ಪಿಸಲು ಹೋದಾಗ ಗುರುಬಸವಣ್ಣನವರು ಹರಳಯ್ಯನವರನ್ನು ಗೌರವದಿಂದ ಕಂಡ ಬಗೆಯನ್ನು ಜಾನಪದ ಕವಿಗಳು ಹೀಗೆ ಹೇಳುತ್ತಾರೆ.

ಕಾಣುತಲಿ ಹರಳನನು ಜಾಣನೊಪ್ಪಿದ ಬಸವ
ಪ್ರಾಣ ಬಂದಂತೆ ಬಿಗಿದಪ್ಪಿ ಶರಣನಿಗೆ
ಮಾನದೊಳು ಮಾತನಾಡಿಸಿದ ॥

ಗುರು ಬಸವಣ್ಣನವರು, ಹರಳಯ್ಯನವರನ್ನು ಕಂಡು ಅವರನ್ನು ಅಪ್ಪಿಕೊಂಡು, ಗೌರವಪೂರ್ವಕವಾಗಿ ಮಾತನಾಡಿಸುತ್ತಿದ್ದರು. ಗುರುಬಸವಣ್ಣನವರು, ಸಮಾಜದಲ್ಲಿ ಸಮ-ಸಮಾನತೆಯನ್ನು ತಂದರು ಪೂರ್ವಾಶ್ರಮದಲ್ಲಿ ಬ್ರಾಹ್ಮಣನಾಗಿದ್ದು ಲಿಂಗಾಯತರಾದ ಮಧುವರಸರ ಮಗಳನ್ನು, ಪೂರ್ವಾಶ್ರಮದಲ್ಲಿ ಸಮಗಾರನಾಗಿದ್ದು ಲಿಂಗಾಯತರಾದ ಹರಳಯ್ಯನವರ ಮಗನಿಗೆ ಕೊಟ್ಟು ಮದುವೆ ಮಾಡಲು ಪ್ರೋತ್ಸಾಹ ನೀಡಿದರು. ಸಂಪ್ರದಾಯವಾದಿಗಳು ಈ ವಿವಾಹದ ವಿರುದ್ಧ ಬಿಜ್ಜಳನಿಗೆ ಚಾಡಿ ಹೇಳಿದರು. ಆಗ ಬಿಜ್ಜಳನು ಗುರು ಬಸವಣ್ಣನವರನ್ನು ಕರೆದು ''ದೀನ ದಲಿತರ ಉದ್ಧಾರ, ಸಮಾಜ ಪರಿವರ್ತನೆ ಬಿಟ್ಟು ಅಧಿಕಾರದಲ್ಲಿದ್ದರೆ ಆಗದೆ?'' ಎಂದು ಕೇಳುತ್ತಾನೆ. ಆಗ ಗುರುಬಸವಣ್ಣನವರು ''ಅಧಿಕಾರವು ಜನರ ಸೇವೆಗೆ ಒಂದು ಸಾಧನವೆಂದು ನಂಬಿದ್ದೇನೆ. ಜನಸೇವೆಗೆ ಅವಕಾಶವಿಲ್ಲದ ಅಧಿಕಾರ, ಸೊಂಡಿಲು ಮುರಿದ ಆನೆಯಂತೆ ಸೊಂಟ ಮುರಿದ ಸಿಂಹದಂತೆ ನಿಷ್ಪ್ರಯೋಜಕವಾದುದು'' ಎಂದು ಹೇಳಿ ಪ್ರಧಾನಿ ಸ್ಥಾನಕ್ಕೆ ರಾಜಿನಾಮೆಯನ್ನು ಕೊಟ್ಟರು. ಇದಾದನಂತರ ಕೊಂಡಿಮಂಚಣ್ಣಗಳು ಗುರು ಬಸವಣ್ಣನವರಿಗೆ ಗಡಿಪಾರು ಆಗುವಂತೆ ಮಾಡಿದರು. ನಂತರ ಕಲ್ಯಾಣ ಕ್ರಾಂತಿಯಾಗಿ ಸಾವಿರಾರು ಶರಣರ ವಧೆಯಾಯಿತು. ಅದಕ್ಕಾಗಿ ಈ ನಾಡಿನ ದಲಿತರು ಗುರುಬಸವಣ್ಣನವರ ಹಾಗೂ ಆದಿಶರಣರ ತ್ಯಾಗ ಬಲಿದಾನಗಳನ್ನು ಅರ್ಥ ಮಾಡಿಕೊಳ್ಳಬೇಕು. ಗುರುಬಸವಣ್ಣನವರು ಅಧಿಕಾರ ತ್ಯಜಿಸಿದ್ದೇ ದೀನ ದಲಿತರಿಗಾಗಿ, ಕಲ್ಯಾಣಕ್ರಾಂತಿ ನಡೆದುದ್ದೇ ಸಮಾನತೆಯನ್ನು ಪ್ರತಿಷ್ಠಾಪಿಸಲಿಕ್ಕೆ.

ಗುರು ಬಸವಣ್ಣನವರು ಕೆಳವರ್ಗದವರಿಗಾಗಿ ದುಡಿದಿರುವುದನ್ನು, ದೀನ ದಲಿತರ ಬಗ್ಗೆ ಅವರಿಗಿರುವ ಕಳಕಳಿಯನ್ನು ಅರ್ಥ ಮಾಡಿಕೊಳ್ಳಬೇಕು. ಲಿಂಗಾಯತ ಧರ್ಮ ದಲಿತರಿಗೆ ದೀಕ್ಷೆಯನ್ನು ನೀಡಿ ಎಲ್ಲರನ್ನು ಇಂಬಿಟ್ಟುಕೊಳ್ಳಲು ಸಿದ್ಧವಿದೆ. ದೀನ ದಲಿತರಿಗಾಗಿ ಗುರು ಬಸವಣ್ಣನವರು ಹೋರಾಡಿರಷ್ಟು ಹೋರಾಡಿದಷ್ಟು ವ್ಯಕ್ತಿ ಇನ್ನೊಬ್ಬ ಸಿಗಲಾರರು. ಅದಕ್ಕಾಗಿ ದಲಿತರೆನಿಸಿಕೊಂಡವರು ಗುರು ಬಸವಣ್ಣನವರ ವಚನಗಳನ್ನು ಓದಬೇಕು ಅಲ್ಲಿ ಅವರ ಹೃದಯ ಅವರಿಗಾಗಿ ಮಿಡಿಯುತ್ತಿದೆ.

ಆವನಾದಡೇನು ಶ್ರೀ ಮಹಾದೇವನ ನೆನೆವವನ
ಬಾಯ ತಾಂಬೂಲವ ಮೆಲುವೆ, ಬೀಳುಡಿಗೆಯ ಹೊದೆವೆ
ಪಾದರಕ್ಷೆಯ ಕಾಯ್ದು ಬದುಕುವೆ ಲಿಂಗದೇವಾ.

ಎನ್ನುತ್ತಾರೆ ಗುರು ಬಸವಣ್ಣನವರು. ಈ ನಾಡಿನ ದಲಿತರು ಇದನ್ನು ಅರ್ಥ ಮಾಡಿಕೊಂಡು, ತಾವು ಮದ್ಯಪಾನ ಹಾಗೂ ಮಾಂಸಾಹಾರವನ್ನು ಬಿಟ್ಟು ಬರುವುದಾದರೆ ಲಿಂಗಾಯತ ಧರ್ಮವು ಲಿಂಗ ದೀಕ್ಷೆಯನ್ನು ನೀಡಿ ಲಿಂಗಾಯತ ಧರ್ಮದೊಳಗೆ ಇಂಬಿಟ್ಟುಕೊಳ್ಳಲು ಸಿದ್ಧವಿದೆ ಎನ್ನುವಂಥ ಮಾತನ್ನು ಕೂಡಲ ಸಂಗಮದ ಬಸವ ಧರ್ಮ ಮಹಾಜಗದ್ಗುರು ಪೀಠದ ಪರವಾಗಿ, ಅದರ ಪ್ರತಿನಿಧಿಯಾಗಿ 875ನೆಯ ಬಸವಜಯಂತಿಯ ಶುಭ ದಿನದ ಅಂಗವಾಗಿ ಹೇಳಲು ಇಚ್ಛಿಸುತ್ತೇನೆ.

ಹಿಂದೂ ಧರ್ಮ ವಿಮರ್ಶೆ

- ಮಾತಾಜಿ

(ಫೆಬ್ರವರಿ ಕಲ್ಯಾಣ ಕಿರಣದಲ್ಲಿ ನನ್ನ ಲೇಖನ ಮಾಲೆ ಲಿಂಗಾಯತರು ಹಿಂದುಗಳಲ್ಲ ಎಂಬುದಕ್ಕೆ ಪ್ರತಿಕ್ರಿಯೆಯಾಗಿ ಹಿಂದೂ ಧರ್ಮದ ಸ್ವರೂಪ ಕುರಿತು ಮೈಸೂರಿನ ಶ್ರೀ ಎಲ್ಲಪ್ಪನವರು ಲೇಖನವನ್ನು ಬರೆದಿರುವುದನ್ನು ಪ್ರಕಟಿಸಲಾಗಿದೆ. ಸಮಯಾಭಾವ ಮತ್ತು ಸ್ಥಳಾಭಾವದಿಂದ ಮಾರ್ಚ್ ಸಂಚಿಕೆಯಲ್ಲಿ ಉತ್ತರಿಸಲು ಆಗಲಿಲ್ಲ. ಈ ಸಂಚಿಕೆಯಿಂದ ಉತ್ತರಿಸಲಾಗುತ್ತಿದೆ.)

1. ಹಿಂದೂ ಧರ್ಮವು ಜಗತ್ತಿನಲ್ಲಿಯೇ ಅತ್ಯಂತ ಪುರಾತನ ಧರ್ಮ. ಭಾರತ ದೇಶದಲ್ಲಿ ಹುಟ್ಟಿದ ಒಂದು ಧಾರ್ಮಿಕ ಪರಂಪರೆಯು ಅತ್ಯಂತ ಪುರಾತನ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಉದಾ: ಆರ್ಯರ ಆಗಮನಕ್ಕೂ ಪೂರ್ವದಲ್ಲಿ ಈ ದೇಶ - ಜಂಬೂದ್ವೀಪದಲ್ಲಿ ಒಂದು ಧರ್ಮ, ಸಂಸ್ಕೃತಿ ಇತ್ತು ಅದನ್ನೇ ಸಿಂಧು ಬಯಲಿನ ನಾಗರಿಕತೆ ಎನ್ನಲಾಗುವುದು. ಹರ - ಅಪ್ಪ ಮತ್ತು ಮೊಹೆಂಜೋದಾರೋ ನಗರಗಳ ಉತ್ಖನನದ ಮೂಲಕ ಈ ಸತ್ಯ ಬಹಿರಂಗಗೊಂಡಿದೆ. ಅಲ್ಲಿ ಲಭ್ಯವಾದ ಯೋಗಿಯ ಧ್ಯಾನಕ್ಕೆ ಕುಳಿತ ಮುದ್ರೆ, ಸುಂದರವಾದ ವೃಷಭ ಲಾಂಛನ ಅಲ್ಲಿಗಾಗಲೇ ಯೋಗಿರಾಜ ಶಿವನು ಇತಿಹಾಸ ಪುರುಷನೂ, ಪ್ರಭಾವಶಾಲಿಯೂ ಆಗಿದ್ದ ಎಂಬುದಕ್ಕೆ ಸಾಕ್ಷಿ ನುಡಿಯುತ್ತವೆ. ಅಂಥ ಶಿವನ ಪ್ರಭಾವವು ಅಂದಿನ ಜಂಬೂ ದ್ವೀಪ (ಇಂದಿನ ಭಾರತ)ದ ಎಲ್ಲೆಯನ್ನು ದಾಟಿ ಹಬ್ಬಿತ್ತು. ಅಂಥ ಶಿವ ಪರಂಪರೆಯ ಎಷ್ಟೋ ಜನ ಗಣಾಧೀಶ್ವರರು, ರುದ್ರರು ಆಗಿ ಹೋದ ಮೇಲೆ ಮಧ್ಯ ಏಷ್ಯಾದಿಂದ ಆರ್ಯರ ಆಗಮನವಾಯಿತು. ಆರಂಭದಲ್ಲಿ ಮೂಲ ನಿವಾಸಿಗಳಾಗಿದ್ದ ದ್ರಾವಿಡರು ಮತ್ತು ಹೊರಗಿನಿಂದ ಬಂದ ಆರ್ಯರು ಉಭಯತರ ಮಧ್ಯೆ ಜನಾಂಗೀಯ ಘರ್ಷಣೆ ಆದರೂ ಕಾಲಾನಂತರದಲ್ಲಿ ಉಭಯ ಸಂಸ್ಕೃತಿಗಳೂ ಮಿಶ್ರಣಗೊಂಡು ಒಂದು ಸಂಸ್ಕೃತಿ ರೂಪುಗೊಂಡಿತು. ಆಗ ಅದಕ್ಕೆ ಹಿಂದು ಎನ್ನುವ ಹೆಸರು ಇರಲಿಲ್ಲ. ಶೈವ, ಶಾಕ್ತ, ವೈದಿಕ, ವೈಷ್ಣವ, ಸೌರ, ಗಾಣಪತ್ಯ, ಕಾಪಾಲಿಕ - ಹೀಗೆ ಅವರವರು ಆಚರಿಸುವ ಧಾರ್ಮಿಕ ಪಂಥಗಳ ಆಧಾರದ ಮೇಲೆ ಗುರುತಿಸಲಾಗುತ್ತಿತ್ತು. ವಿದೇಶದಿಂದ ದಾಳಿಕಾರರು ಬರಲಾರಂಭಿಸಿದ ಮೇಲೆ ಸಿಂಧು ನದಿಯ ಈಚೆಗೆ ಇರುವವರನ್ನು ಸಿಂಧುಗಳು, ಹಿಂದುಗಳು ಎಂದು ಅತ್ತಲಿನವರು ಕರೆದರು. ಹಿಂದು ಎಂಬುದು ಜನಾಂಗವಾಚಕವಾಗಿ ರೂಢಿಗೆ ಬಂದಿತು. ಅಂಥ ಜನಾಂಗದಲ್ಲಿ ಬೇರೆ ಬೇರೆ ಧಾರ್ಮಿಕ ಗುಂಪುಗಳಿದ್ದು, ಅವರು ಆಚರಿಸುವ ಧಾರ್ಮಿಕ ಸಂಪ್ರದಾಯದ ಮೇಲೆ ಅವರನ್ನು ಸಂಬೋಧಿಸಲಾಗುತ್ತಿತ್ತು.

ಭಾರತ ದೇಶದ ಮೇಲೆ ಮೊದಲು ದಾಳಿ ಮಾಡಿದವರು ಘಸ್ನಿ ಮೊಹಮ್ಮದ್, ಗೋರಿ ಮೊಹಮ್ಮದ ಮುಂತಾದವರು; ಅವರ ದೃಷ್ಟಿಯಲ್ಲಿ ಮುಸಲೀಮರಲ್ಲದವರೆಲ್ಲ ಹಿಂದುಗಳು. ಇಲ್ಲಿಯೂ ಹಿಂದು ಪದಕ್ಕೆ ತಾತ್ವಿಕ ಚೌಕಟ್ಟು ಇಲ್ಲ. ನಂತರ ಪೋರ್ಚುಗೀಸರು, ಫ್ರೆಂಚರು ಇತ್ಯಾದಿ ಬಂದರೂ ಭದ್ರವಾಗಿ ನೆಲೆಯೂರಿದವರು ಬ್ರಿಟಿಷರು. ಚರ್ಚ್ ಕಟ್ಟಿದರು, ಶಿಕ್ಷಣ ಸಂಸ್ಥೆ ತೆರೆದರು, ಮತಾಂತರ ಮಾಡಿದರು, ಆಡಳಿತವನ್ನು ಕೈ ತೆಗೆದುಕೊಂಡು ಶತಮಾನಗಳ ಕಾಲ ದೇಶವನ್ನು ಆಳಿದರು. ಜನಗಣತಿಯನ್ನು ಮಾಡಬೇಕಾದಾಗ ಅವರಿಗೂ ಸಮಸ್ಯೆ ಎದುರಾಯಿತು. ಜಾತಿಗಳು ಸಿಕ್ಕಾಪಟ್ಟೆ ಸಂಖ್ಯೆಯಲ್ಲಿ ಇದ್ದುದರಿಂದ ಜಾತಿಯ ಆಧಾರದ ಮೇಲೆ ಜನಗಣತಿ ತೀರಾ ತಲೆನೋವಿನ ಕೆಲಸವೆಂದು ಒಂದು ಪದದ ಅನ್ವೇಷಣೆಯಲ್ಲಿ ಬ್ರಿಟಿಷರು ಮತ್ತು ದೇಶೀಯರು ಇಬ್ಬರೂ ತೊಡಗಿದರು. ಸ್ವಾತಂತ್ರ್ಯ ಸೇನಾನಿ ವೀರ ಸಾವರ್ಕರ್ ಹಿಂದು ವ್ಯಾಖ್ಯಾನ ಮಾಡಲು ಮೊಟ್ಟ ಮೊದಲು ಪ್ರಯತ್ನ ಪಟ್ಟರು. ನಂತರ ವಿಶ್ವ ಹಿಂದು ಪರಿಷತ್ ಹುಟ್ಟಿಕೊಂಡಿತು.

ಬ್ರಿಟಿಷರು ಜನಗಣತಿ ಆರಂಭಿಸುವಾಗ ಸಾಂಪ್ರದಾಯಿಕ ಹಿಂದುಗಳಿಂದ ಆಚಾರ-ವಿಚಾರ-ನಂಬಿಕೆಗಳಲ್ಲಿ ಬೇರೆಯೇ ಆಗಿರುವ ಸಮುದಾಯಗಳನ್ನು ಗುರುತಿಸಿದರು. ಬೌದ್ಧರು, ಜೈನರು, ಸಿಖ್ಖರು ಮಾತ್ರವಲ್ಲ ಲಿಂಗಾಯತ ಧರ್ಮೀಯರನ್ನು ಗಮನಿಸಿ, ಗುರುತಿಸಿದರು. ಸಾಂಪ್ರದಾಯಿಕ ಹಿಂದುಗಳು ದೂರವಿಟ್ಟಿದ್ದ ಬುಡಕಟ್ಟು (Scheduled tribe) ಜನರು ಮತ್ತು ಅಸ್ಪೃಶ್ಯ (Scheduled caste) ರನ್ನು ಪ್ರತ್ಯೇಕವಾಗಿಟ್ಟರು. ಇದು ಬ್ರಿಟಿಷರು ಮಾಡಿದ ಕುತಂತ್ರ, ಒಡೆದು ಆಳುವ ನೀತಿ ಎಂದು ಕೆಲವರು ವ್ಯಾಖ್ಯಾನಿಸುತ್ತಾರೆ. ಇಂಥ ಪ್ರಕ್ರಿಯೆಗೆ ಕಾರಣ ಸಾಂಪ್ರದಾಯಿಕ ವೈದಿಕರು, ಸನಾತನ ಧರ್ಮದ ಹೆಸರಿನಲ್ಲಿ ಆಚರಿಸುತ್ತಿದ್ದ ಪದ್ಧತಿಯೇ ಕಾರಣ ಎಂಬುದನ್ನು ಅರಿಯಬೇಕು. ಮೇಲ್ಜಾತಿಯ ಹಿಂದುಗಳು ಕೆಲವರನ್ನು ಕೀಳೆಂದು ಕರೆದು ಅಂಥ ದೂರವಿಟ್ಟಿದ್ದುದು ಸತ್ಯವಷ್ಟೆ.

ಬ್ರಿಟಿಷ್ ವಿದ್ವಾಂಸರು ಲಿಂಗಾಯತ ಧರ್ಮವು ಸ್ವತಂತ್ರ ಧರ್ಮ ಎಂದು ಗುರುತಿಸಿದರೂ

ಅಜ್ಞಾನದಲ್ಲಿದ್ದ ಲಿಂಗಾಯತರು ತಾವು ಹಿಂದುಗಳೊಳಗಣ ಒಂದು ಜಾತಿ ಎಂದು ಗುರುತಿಸಿಕೊಂಡರು. ಆಗ ಅವರು ಬ್ರಾಹ್ಮಣೀಕರಣಗೊಳ್ಳಲು ಯತ್ನಿಸಿದರು.

ಕಾಲಾನಂತರದಲ್ಲಿ ಅದೂ 19ನೆಯ ಶತಮಾನದಲ್ಲಿ ಹಿಂದು ಪದವು ಭಾರತ ದೇಶದಲ್ಲಿ ರೂಢಿಗೆ ಬಂದಿತಾದರೂ ಇದರೊಳಗೆ ಹರಿದು ಬಂದ ಶಿವ ಪರಂಪರೆಯು ಪುರಾತನವಾದ ಕಾರಣ ಇಂದಿನ ಹಿಂದು ಧರ್ಮವು ಪುರಾತನ ಧರ್ಮ ಎಂದು ಹೇಳಬಹುದು.

2. ಹಿಂದು ಧರ್ಮ (ಸನಾತನ ಧರ್ಮ, ವೈದಿಕ ಧರ್ಮ)

ಸನಾತನ ಎಂಬುದಕ್ಕೆ ಹಲವಾರು ಅರ್ಥಗಳಿವೆ. ಪುರಾತನ ಎಂಬುದು ಒಂದು ಅರ್ಥವಾದರೆ ನಿತ್ಯಸತ್ಯ ತತ್ವಗಳನ್ನು ಒಳಗೊಂಡಿದ್ದು ಎಂದು ಮತ್ತೊಂದು ಅರ್ಥ.

ಉಪನಿಷತ್ತುಗಳಲ್ಲಿ ಬರುವ ಆತ್ಮಜ್ಞಾನ, ತತ್ವಜ್ಞಾನ, ಅಧ್ಯಾತ್ಮಿಕ ವಿಶಾಲ ದೃಷ್ಟಿ ಮುಂತಾದವು ಎಲ್ಲರಿಗೆ ಒಪ್ಪಿತವಾಗುವ ಅಮೂಲ್ಯ ಸತ್ಯಗಳು ಎನಿಸಿದರೂ, ಸನಾತನ ಧರ್ಮದ ಕರ್ಮಕಾಂಡ ಯಜ್ಞ-ಯಾಗಾದಿಗಳು, ವರ್ಣಾಶ್ರಮ ವ್ಯವಸ್ಥೆ ಬಹುಪಾಲು ಜನಕ್ಕೆ ಒಪ್ಪಿಗೆಯಾಗಲಿಲ್ಲ. ಹಿಂದು ಧರ್ಮವು ವೈದಿಕ ಧರ್ಮ ಎಂದು ಸಮೀಕರಿಸಿ ಶ್ರೀ ಯಲ್ಲಪ್ಪನವರು ಮುಂತಾದವರು ವ್ಯಾಖ್ಯಾನಿಸಿಸುವ ಕಾರಣದಿಂದಲೇ ವೇದಗಳನ್ನು ಪ್ರಮಾಣ ಗ್ರಂಥಗಳೆಂದು ಒಪ್ಪದ ಜೈನ, ಬೌದ್ಧ, ಲಿಂಗಾಯತ, ಸಿಖ್ಖರು ತಾವು ಹಿಂದುಗಳಲ್ಲವೆಂದು ಹೇಳುವುದು.

ವೇದಗಳಲ್ಲಿ ಉತ್ತಮವಾದ ಅಂಶಗಳು ಇಲ್ಲವೆಂದಲ್ಲ. ಆಯುರ್ವೇದ, ಸಂಗೀತವನ್ನೊಳಗೊಂಡ ಸಾಮವೇದ ಮುಂತಾದ ಅನೇಕ ಉತ್ತಮ ಅಂಶಗಳು ಇರುವವಾದರೂ ವೇದಗಳ ಕರ್ಮಕಾಂಡ, ವರ್ಣಾಶ್ರಮ ಸಾಮಾಜಿಕ ವ್ಯವಸ್ಥೆ, ಶ್ರುತಿ - ಸ್ಮೃತಿಗಳು ಸೃಷ್ಟಿಸಿದ ಕಟ್ಟುಪಾಡು ಹೊಸ ಧರ್ಮಗಳು ಹುಟ್ಟಲೇ ಬೇಕಾದ ಅನಿವಾರ್ಯತೆ ಸೃಷ್ಟಿಸಿದವು. ಈ ಕಟು ಸತ್ಯವನ್ನು ಸನಾತನ ಹಿಂದುಗಳು ಅರಿಯಲೇಬೇಕು. ರೋಮ್ ಚಕ್ರಾಧಿಪತ್ಯದಲ್ಲಿ ಯಹೂದಿ ಧರ್ಮವು ಕ್ರೈಸ್ತ, ಇಸ್ಲಾಂಗಳು ಹುಟ್ಟಲು ಅನಿವಾರ್ಯತೆ ಸೃಷ್ಟಿಸಿದರೆ ಭಾರತದಲ್ಲಿ ವೈದಿಕ ಧರ್ಮವು ಜೈನ್, ಬೌದ್ಧ, ಲಿಂಗಾಯತ ಸಿಖ್ ಧರ್ಮಗಳು ಹುಟ್ಟಲು ಅನಿವಾರ್ಯತೆ ಸೃಷ್ಟಿಸಿತು.

3. ಹಿಂದು ಧರ್ಮಕ್ಕೆ ಸ್ಥಾಪಕರಿಲ್ಲ.

ಅದನ್ನೇ ನಾನೂ ನನ್ನ ಲೇಖನದಲ್ಲಿ ಬರೆದಿರುವುದು. ಈ ಅಂಶವನ್ನು ಯಲ್ಲಪ್ಪನವರು ಪುನರಾವರ್ತನೆ ಮಾಡಿದ್ದಾರೆ. ಜಗತ್ತಿನಲ್ಲಿ 2 ಪ್ರಕಾರದ ಧರ್ಮಗಳಿವೆ ನೈಸರ್ಗಿಕ ಧರ್ಮ (Natural Religion) ಮತ್ತು ಸುಧಾರಣಾತ್ಮಕ ಧರ್ಮ (Reformative Religion) ಎಂಬುದಾಗಿ. ಒಬ್ಬ ವಿಶಿಷ್ಟ ಸಂಸ್ಥಾಪಕರಿಲ್ಲದೆ ಹಲವಾರು ಜನರು ಹಲವು ಸಮಯದಲ್ಲಿ ಹೇಳಿದುದು ಕೆಲವೊಮ್ಮೆ ಪರಸ್ಪರ ವಿರೋಧಾಭಾಸವಾದುದು ಎಲ್ಲವೂ ನೈಸರ್ಗಿಕ ಧರ್ಮದಲ್ಲಿರುತ್ತದೆ. ಇದಕ್ಕೆ ಉದಾಹರಣೆ ಭಾರತದ ಹಿಂದು ಧರ್ಮ ಮತ್ತು ಇಸ್ರೇಲಿನ ಯಹೂದಿ ಧರ್ಮ. ನೈಸರ್ಗಿಕವಾಗಿ ಬೆಳೆದು ಬಂದ ಧರ್ಮಗಳಲ್ಲಿರುವ ವಿರೋಧಾಭಾಸ ಮತ್ತು ಕೆಲವೊಮ್ಮೆ ಅಸಂಬದ್ಧ ವಿಚಾರಧಾರೆಯನ್ನು ಸರಿಪಡಿಸಿ ಏಕರೂಪತೆ, ಸುಧಾರಣೆ ತರಲು ಕೆಲವು ವ್ಯಕ್ತಿಗಳಿಂದ ಪ್ರಯತ್ನ ನಡೆದು ಆಗ ಬಂದವೇ ಸುಧಾರಣಾ ಧರ್ಮಗಳು.

ಯಹೂದಿ ಧರ್ಮಕ್ಕೆ ಪ್ರತಿದ್ವಂದ್ವಿಯಾಗಿ ಹುಟ್ಟಿದ್ದು ಕ್ರೈಸ್ತಧರ್ಮ, ಅನೇಕ ಬುಡಕಟ್ಟುಗಳವರಲ್ಲಿ ಏಕರೂಪತೆ ತರಲು ಹುಟ್ಟಿದ್ದು ಇಸ್ಲಾಂ. ಭಾರತದಲ್ಲಿ ವೈದಿಕ ಧರ್ಮಕ್ಕೆ ಪ್ರತಿದ್ವಂದ್ವಿಯಾಗಿ ಹುಟ್ಟಿದವು ಜೈನ -ಬೌದ್ಧ, ಲಿಂಗಾಯತ -ಸಿಖ್. ಮೊದಲವೆರಡೂ ನಿರೀಶ್ವರವಾದಿ ಧರ್ಮಗಳು, ನಂತರದವು ಎರಡೂ ಸೇಶ್ವರವಾದಿ ಧರ್ಮಗಳು. ಜೈನ್ -ಲಿಂಗಾಯತ ಅಹಿಂಸಾ ಪ್ರಧಾನ ಸಸ್ಯಾಹಾರಿ ಧರ್ಮಗಳು, ಬಾಕಿ ವಿಷಯಗಳಲ್ಲಿ ನಾಲ್ಕೂ ಸಹಮತ ಹೊಂದಿವೆ. ಉದಾ: ಇವು ನಾಲ್ಕು

1. ವೇದಗಳು ಅಪೌರುಷೇಯ ಎಂದು ನಂಬುವುದಿಲ್ಲ
2. ವರ್ಣಾಶ್ರಮ, ಜಾತಿಪದ್ಧತಿ ಒಪ್ಪುವುದಿಲ್ಲ.
3. ಮಾನವರೆಲ್ಲರಿಗೆ ದೀಕ್ಷಾ ಸಂಸ್ಕಾರ ನೀಡುತ್ತವೆ.
4. ಬೌದ್ಧ ಧರ್ಮಕ್ಕೆ ಗೌತಮ ಬುದ್ಧ, ಜೈನ್ ಧರ್ಮಕ್ಕೆ ಮಹಾವೀರ, ಲಿಂಗಾಯತ ಧರ್ಮಕ್ಕೆ ಗುರು ಬಸವಣ್ಣನವರು, ಸಿಖ್ ಧರ್ಮಕ್ಕೆ ಗುರುನಾನಕರು ಸ್ಥಾಪಕರೆನ್ನಿಸಿಕೊಳ್ಳುತ್ತಾರೆ.
5. ಈ ನಾಲ್ಕು ಧರ್ಮಗಳು ಯಜ್ಞ-ಯಾಗಾದಿ, ಪ್ರಾಣಿ- ಪಶುಪಕ್ಷಿ ಬಲಿ, ಹೋಮ-ಹವನಾದಿಗಳನ್ನು ಕಟುವಾಗಿ ಟೀಕಿಸಿ ತಮ್ಮ ಧಾರ್ಮಿಕ ವಿಧಿಯಲ್ಲಿ ಕಟ್ಟುನಿಟ್ಟಾಗಿ ನಿಷೇಧಿಸಿವೆ.

4. ಯಲ್ಲಪ್ಪ- ಹಿಂದು ಧರ್ಮದಲ್ಲಿ ವ್ಯಕ್ತಿಗಳು ಗೌಣ ತತ್ವ ಮುಖ್ಯ.

ಈ ಮಾತು ಒಂದು ಅರ್ಥದಲ್ಲಿ ಸರಿ ಇನ್ನೊಂದು ಅರ್ಥದಲ್ಲಿ ಸರಿಯಲ್ಲ.

ಹಿಂದು ಸಮಾಜ ವ್ಯಕ್ತಿ ಪ್ರಾಧಾನ್ಯವಾದ ಸಂಸ್ಕೃತಿ ಅಳವಡಿಸಿಕೊಂಡಿದ್ದರಿಂದಲೇ ಅನೈಕ್ಯತೆ ಇಲ್ಲಿ ಎದ್ದು ಕಾಣುವುದು ಪೂಜಿಸುವ ಹಲವಾರು ದೇವತೆಗಳು, ಜೊತೆಗೆ ಮಹಾತ್ಮರು ಆಗಿ ಹೋದವರು ಈಗ ಹುಟ್ಟುತ್ತಿರುವವರು ಎಲ್ಲರೂ ಸೇರಿ ನೂರಾರು ಸ್ಥಾನಿಕ ಪಂಥಗಳನ್ನು ಹುಟ್ಟು ಹಾಕಿದ್ದಾರೆ. ಕ್ರೈಸ್ತರು ಏಸುವನ್ನು, ಬೌದ್ಧರು - ಬುದ್ಧನನ್ನು, ಜೈನರು ಮಹಾವೀರನನ್ನು, ಮುಸಲೀಮರು ಪ್ರವಾದಿ ಮೊಹಮ್ಮದರನ್ನು; ತತ್ವ ತಿಳಿದ ಲಿಂಗಾಯತರು ಧರ್ಮಗುರು ಬಸವಣ್ಣನವರನ್ನು ಏಕ ನಿಷ್ಠೆಯಿಂದ ಆರಾಧಿಸುವರಾದರೂ ಅದು ವ್ಯಕ್ತಿ ಪೂಜೆಯಾಗದು. ಏಕೆಂದರೆ ಈ ಎಲ್ಲರೂ ವಿಶಿಷ್ಟ ತತ್ವದ ಪ್ರತಿನಿಧಿಯಾಗಿದ್ದಾರೆ. ಇವರುಗಳು "ಮಾತನಾಡುವ ದೇವರುಗಳಾಗಿದ್ದಾರೆ". ಅರ್ಥಾತ್ ಜಗಬದುಕಲು ಜನ ಬದುಕಲು ಸಂದೇಶ ನೀಡಿದ್ದಾರೆ. ಶಿರಡಿ ಸಾಯಿಬಾಬಾರ ಭಾವಚಿತ್ರಗಳನ್ನು ಎಲ್ಲೆಡೆ ಹಾಕಿಕೊಂಡು ಪೂಜಿಸುವ ಪರಿಪಾಠವಿದೆ. ಅವರೊಬ್ಬ ಸಂತರು ನಿಜ. ಆದರೆ ಅವರು ಜಗತ್ತಿಗೆ ಏನು ಸಂದೇಶ ಕೊಟ್ಟಿದ್ದಾರೆ? ತಿರುಪತಿ ವೆಂಕಟೇಶ್ವರ, ಪಂಡರಾಪುರದ ಪಾಂಡುರಂಗ ಮುಂತಾದ ದೇವತೆಗಳ ಬಗ್ಗೆ ಹಿಂದುಗಳು ಹುಚ್ಚರಾಗಿದ್ದಾರೆ. ಅವರ ಸಂದೇಶವೇನು? ತಾನು ಮದುವೆಯಾಗಲು ಮಾಡಿದ ಸಾಲವನ್ನು ಮೂಢ ಭಕ್ತರು ತೀರಿಸಬೇಕೆ? ಕ್ಷೌರಿಕನಿಗೆ 5ರೂ ಜಾಸ್ತಿ ಕೊಡಲು ಒಪ್ಪದ ಈ ಭಕ್ತರು ಸಾವಿರಾರು, ಲಕ್ಷಾಂತರ ಖರ್ಚು ಮಾಡಿ ತಲೆ ಬೋಳಿಸಿಕೊಳ್ಳಲು ತಿರುಪತಿಗೆ ಧಾವಿಸುರಲ್ಲ, ಪಂಢರಾಪುರದ ಪಾಂಡುರಂಗ ರುಕುಮಾಯಿಯನ್ನು ಮದುವೆಯಾಗಲು ವೈಕುಂಠ ಬಿಟ್ಟು ಭೂಮಿಗೆ ಬಂದನಂತೆ. ಇದರ ಹಿಂದೆ ಯಾವ ತತ್ವ ಇದೆ?

ನಿಜ, ಯಲ್ಲಪ್ಪನವರು ಹೇಳುವಂತೆ "ಹಿಂದು ಧರ್ಮ ವ್ಯಕ್ತಿ ಪ್ರಧಾನವಲ್ಲ, ತತ್ವ ಪ್ರಧಾನ ?! ಜ್ಞಾನಿಯು ಬ್ರಹ್ಮಭಾವ ಹೊಂದಿ ಸಮಸ್ತ ಜೀವಿಗಳನ್ನು ಸಮಾನವಾಗಿ ಕಾಣುತ್ತಾನೆ". ಇವೆಲ್ಲ ಮಾತು ಶಾಸ್ತ್ರಗಳಲ್ಲಿ ಉಳಿದಿವೆಯೇ ವಿನಾ. ಉಪನಿಷತ್ತುಗಳು ಹೇಳುವಂತೆ ಎಲ್ಲರನ್ನು ಸಮಾನವಾಗಿ ಕಂಡಿದ್ದರೆ ವಿದೇಶಿ ಧರ್ಮಗಳು ನೆಲೆಯೂರಲು, ದಲಿತರು ಮತಾಂತರ ಹೊಂದಲು ಅವಕಾಶವೇ ಇರುತ್ತಿರಲಿಲ್ಲ.

5. ಯ -ನಾಮರೂಪಗಳ ವೈವಿಧ್ಯತೆಯ ಹಿಂದೆ ಇರುವುದು ಒಂದೇ ಶಕ್ತಿ. ಈ ಶಕ್ತಿಯನ್ನು ಅರಿತ ಜ್ಞಾನಿಗಳು ಯಾರಲ್ಲೂ ಭೇದಭಾವನೆಯನ್ನು ಹೊಂದಿರುವುದಿಲ್ಲ.


ಈ ಮಾತನ್ನು ಎಲ್ಲ ಸೇಶ್ವರವಾದಿ (Theistic) ಧರ್ಮಗಳೂ ಹೇಳುತ್ತವೆ. ದೇವರು ಒಂದು ಶಕ್ತಿ. ಆದರೆ ಅದಕ್ಕೆ ಚಿತ್ರವಿಚಿತ್ರವಾದ ಅಕರಾಳ ವಿಕರಾಳವಾದ ರೂಪಗಳನ್ನು ಕೊಡುವುದು ಸೂಕ್ತವೆ? ಇದೇ ಮೌಢ್ಯತೆಗೆ, ಬಹುದೇವತೋಪಾಸನೆಗೆ ಕಾರಣವಾಗುತ್ತದೆ, ದೇವರನ್ನು ಕಾಳಿಯ ರೂಪದಲ್ಲಿ ಪೂಜಿಸುವುದು ಎಷ್ಟು ಸರಿ? ಕಾಳಿ, ದುರ್ಗಿ ಮುಂತಾದ ಹೆಣ್ಣು ದೇವತೆಗಳಿಗೆ ಅತ್ಯಂತ ಕ್ರೂರವಾದ ರೀತಿಯಲ್ಲಿ ಪ್ರಾಣಿಬಲಿ ಕೊಡುವುದು ಎಷ್ಟು ಸಮಂಜಸ, ಉಗ್ರರೂಪ ತಾಳಿದ ಕಾಳಿ ತನ್ನ ಪತಿ ಬಂದರೆ ಅವನನ್ನು ನೆಲಕ್ಕೆ ಹಾಕಿ ತುಳಿದು ಎದೆಯ ಮೇಲೆ ಮೆಟ್ಟಿ ನಿಲ್ಲುವುದು, ಪೂಜಾರ್ಹ ಭಂಗಿಯೆ? ಇದೇ ರೀತಿ ಇಂದಿನ ಒಬ್ಬ ಗೃಹಿಣಿ ಮಾಡಿದರೆ ಆಕೆಯನ್ನು ಗೌರವಿಸಿ, ಹಿಂದುಗಳು ಪೂಜಿಸಲು ಸಿದ್ಧರಿರುವರೆ? ಅದಕ್ಕಾಗಿಯೇ ಕ್ರಾಂತಿಪುರುಷ ಬಸವಣ್ಣನವರು ಹೇಳಿದುದು.

ಆದಿಪುರಾಣ ಅಸುರರಿಗೆ ಮಾರಿ ; ವೇದ ಪುರಾಣ ಹೋತಿಂಗೆ ಮಾರಿ
ರಾಮ ಪುರಾಣ ರಕ್ಕಸಂಗೆ ಮಾರಿ; ಭಾರತ ಪುರಾಣ ಗೋತ್ರಕ್ಕೆ ಮಾರಿ
ಎಲ್ಲ ಪುರಾಣ ಕರ್ಮಕ್ಕೆ ಮೊದಲು, ನಿಮ್ಮ ಪುರಾಣಕ್ಕೆ ಪ್ರತಿ ಇಲ್ಲಾ
ಲಿಂಗದೇವಾ

6. ಯ -ಈ ದಿವ್ಯ ಚೈತನ್ಯಗಳು, ತಾವು ಪೂಜಿಸುವ ಆರಾಧಿಸುವ ದೇವರೇ ಸತ್ಯ ಉಳಿದವೆಲ್ಲವೂ ಮಿಥ್ಯ ಎಂದು ಎಲ್ಲೂ ಹೇಳಿಲ್ಲ. ಸಮಸ್ತ ಮಾನವರು, ಅವರವರ ಭಾವನೆ ಹಾಗೂ ಗುಣಕ್ಕೆ ಅನುಗಣವಾಗಿ ಆರಾಧಿಸುವ ದೈವಗಳೆಲ್ಲಾ ಒಂದು ಸೃಷ್ಟಿಕರ್ತನ ನಾನಾ ರೂಪಗಳು ಎಂದು ಭಾವಿಸಿ ಎಲ್ಲರನ್ನು ಸಮಾನರಾಗಿ ಕಂಡರು.

ಮಾ- ಸೃಷ್ಟಿಕರ್ತನಿಗೆ ನಾನಾ ರೂಪ ಇರುತ್ತದೆ ಎಂದು ಭಾವಿಸುವುದೇ ಮೊದಲ ಪ್ರಮಾದ. ಅವರವರ ಭಾವನೆ ಮತ್ತು ಗುಣಕ್ಕೆ ಅನುಗುಣವಾಗಿ ಆರಾಧಿಸುವ ದೈವಗಳನ್ನು ಸೃಷ್ಟಿಕರ್ತನ ಸಮಕ್ಕೆ ಹೋಲಿಸುವುದು ಬಹುದೊಡ್ಡ ತಪ್ಪು, ಜನರು ಅಜ್ಞಾನದ ಸ್ಥಿತಿಯಲ್ಲಿ ಏನೇನೋ ಕಲ್ಪಿಸಿಕೊಂಡು, ತಮ್ಮ ತಾಮಸಿಕ ಗುಣಕ್ಕೆ ಅನುಸಾರವಾಗಿ ಪ್ರಾಣಿವಧೆ ಮಾಡುತ್ತಿದ್ದರೆ ಅವರಿಗೆ ತಿಳಿ ಹೇಳೀ ಅದನ್ನು ಬಿಡಿಸಬೇಕೇ ವಿನಾ ಅವರನ್ನು ಅದೇ ಮೂಢ ಸ್ಥಿತಿಯಲ್ಲಿಟ್ಟು ತಿರಸ್ಕಾರದಿಂದ ಕಾಣಬಾರದು. ಒಂದು ವೇಳೆ ದೇವರ ಹೆಸರಿನಲ್ಲಿ ಪ್ರಾಣಿವಧೆ ಸರಿ ಇದ್ದಿದ್ದರೆ ಏಕೆ ಹಿಂದು ಧರ್ಮ ಬಿಟ್ಟು ಉಳಿದವು ಅದನ್ನು ಪ್ರೋತ್ಸಾಹಿಸಲಿಲ್ಲ.

(ಮುಂದುವರಿಯುವುದು.....)



ಗುರು ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನೆ ಮಾಡಿ ಮಂತ್ರ ಪಠಣಗೈಯುತ್ತಿರುವ ಪೂಜ್ಯ ಮಾತಾಜಿಯವರು









೨೦ ರಂದು ಸಾಮೂಹಿಕ ಪ್ರಾರ್ಥನೆಯಲ್ಲಿ ನಿರತ ಪೂಜ್ಯ ಮಾತಾಜಿ, ಗಣ್ಯರು ಹಾಗು ಶರಣೆಯರು

CPMG/KA/BGW-50-2006-2008 WPP (W) 17R.No.199[illegible]0/70



ದೂರದರ್ಶನದ ಹಿರಿಯ ನಿರ್ದೇಶಕರಾದ ಡಾ.ಮಹೇಶ್ ಜೋಷಿಯವರಿಂದ 875ನೆಯ ಬಸವ ಜಯಂತಿ ಕಾರ್ಯಕ್ರಮದ ಉದ್ಘಾಟನೆ



ದೆಹಲಿಯಲ್ಲಿ ನಡೆದ ಸರ್ವಧರ್ಮ ಸಂಸತ್ ಅಧಿವೇಶನದಲ್ಲಿ ವಿಷಯ ಮಂಡಿಸುತ್ತಿರುವ
ಪೂಜ್ಯ ಮಾತಾಜಿ. ಪೂಜ್ಯ ಡಾ:ಅಗ್ನಿವೇಶ್ ಸ್ವಾಮೀಜಿ ಹಾಗೂ ಇನ್ನಿತರ ಧರ್ಮಗಳ ಪ್ರಮುಖರು